ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 20 ಸೋಮವಾರ 2025

46

ಸಂಪುಟ: 46 | ಸಂಚಿಕೆ: 183 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

G9 projects
Designing your Dreams
Vee2 Developers

MUDA APPROVED
Khata Ready
SHOURYA LAYOUT
ADJOINING VIJAYANAGAR 4TH STAGE
20X30 Site
₹ 27 LAKHS ONLY
8088-707-707

WANTED IMMEDIATELY
Young & Energetic Boys and Girls to work in a Petrol Bunk near Bogadi Ring Road
9448116337/9986394123

ಶ್ರೀಮತಿ ಲೀಲಾ ಶ್ರೀ ಹೆಚ್ ಚನ್ನಯ್ಯ ಕಲ್ಯಾಣ ಮಂಟಪ
ವಾಲ್ಮೀಕಿ ರಸ್ತೆ, ವಿನಾಯಕನಗರ (ಪಡುವಾರಹಳ್ಳಿ)
4 ಸಿಲಿಂಡರ್, ಕ್ಲೀನಿಂಗ್, ಅಡಿಗೆ ಪಾತ್ರೆಗಳು ಎಲ್ಲಾ ಸೇರಿ 1,20,000/- ರೂ ಗಳು.
ನವಂಬರ್, ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಖಾಲಿ ಇದೆ (ಸಸ್ಯಾಹಾರ ಮಾತ್ರ)
ಹೊಸದಾಗಿ ನವೀಕರಿಸಲಾಗಿದೆ
ಶುಭಸಮಾರಂಭಗಳಿಗೆ ಹಾಗೂ ವಸ್ತು ಪ್ರದರ್ಶನಗಳಿಗೆ ಲಭ್ಯವಿದೆ
ಸಂಪರ್ಕಿಸಿ: 8073929354 / 6362421885







ಮೈಸೂರು ಮಿತ್ರ ಸೋಮವಾರ 20 ಅಕ್ಟೋಬರ್ 2025


ಮೈಸೂರು ನಗರಪಾಲಿಕೆ ದಾಖಲೆಗಳ ಡಿಜಿಟಲೀಕರಣ ಪುನರಾರಂಭ

ಪಾಲಿಕೆಯ 16 ಲಕ್ಷಕ್ಕೂ ಅಧಿಕ ದಾಖಲೆಗಳ ಡಿಜಿಟಲೀಕರಣದೊಂದಿಗೆ ಕಾಗದರಹಿತ ಆಡಳಿತಕ್ಕೆ ನಿರ್ಧಾರ









1. ಮೈಸೂರು ಮಹಾನಗರಪಾಲಿಕೆ ಕಚೇರಿಯ ವ್ಯವಸ್ಥಾಪಕಿ ಹೆಚ್.ಎಂ.ಲತಾ ಪಾಲಿಕೆಯ ದಾಖಲೆಗಳನ್ನು ಡಿಜಿಟಲೀಕರಣ ಮಾಡುತ್ತಿರುವುದನ್ನು ಪರಿಶೀಲಿಸಿದರು. 2. ಮೈಸೂರು ನಗರಪಾಲಿಕೆಯ ರೆಕಾರ್ಡ್ ವಿಭಾಗದ ಎಫ್‌ಡಿಎ ರಮೇಶ್ ಮತ್ತು ಸಿಬ್ಬಂದಿ ದಾಖಲೆಗಳನ್ನು ಡಿಜಿಟಲೀಕರಣ ಮಾಡುತ್ತಿರುವುದು. 3. ಸುಮಾರು 15 ಲಕ್ಷ ದಾಖಲೆಗಳು ಸ್ಟೋರ್‌ರೂಂನಲ್ಲಿ ಸಂಗ್ರಹವಾಗಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಅ.19(ಎಂಕೆ)–ಕಾಗದರಹಿತ ಆಡಳಿತಕ್ಕೆ ಮುಂದಾಗಿರುವ ಮೈಸೂರು ಮಹಾನಗರಪಾಲಿಕೆ, 16 ಲಕ್ಷಕ್ಕೂ ಅಧಿಕ ದಾಖಲೆಗಳ ಡಿಜಿಟಲೀಕರಣ ಆರಂಭಿಸಿದೆ.

ಮೈಸೂರು ದಸರಾ ನಂತರ ಮೈಸೂರು ಮಹಾನಗರಪಾಲಿಕೆಯ ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಕಾರ್ಯ ಪುನರಾರಂಭವಾಗಿದ್ದು, ದಾಖಲೆಗಳನ್ನು ಐದು ವರ್ಗಗಳನ್ನಾಗಿ ವಿಂಗಡಿಸಿ ಡಿಜಿಟಲೀಕರಣ ಮಾಡಲಾಗುತ್ತಿದೆ.

ನಗರಪಾಲಿಕೆ ಉಪ‌ಆಯುಕ್ತ (ಆಡಳಿತ) ಎಂ.ದಾಸೇಗೌಡ ನೇತೃತ್ವದ ಡಿಜಿಟಲೀಕರಣ ಪ್ರಕ್ರಿಯೆ ನಡೆಯುತ್ತಿದ್ದು, 'ಎ' ವರ್ಗದಲ್ಲಿ 'ಶಾಶ್ವತ ದಾಖಲೆಗಳು', 'ಆದೇಶಗಳು', 'ನಗದು ಪುಸ್ತಕಗಳು', 'ಸ್ಥಿರ ಆಸ್ತಿ ದಾಖಲೆಗಳು', 'ವಾರ್ಷಿಕ ವರದಿಗಳು' ಸೇರಿದಂತೆ ಇನ್ನಿತರೆ ದಾಖಲೆಗಳು ಸೇರಿವೆ. 'ಬಿ' ವರ್ಗದಲ್ಲಿ 'ತೆರಿಗೆ ಸಂಗ್ರಹ ಮತ್ತು ನೋಂದಣಿ ಸಂಬಂಧಿತ ದಾಖಲೆಗಳು', 'ಭದ್ರತಾ ಠೇವಣಿಗಳು ಮತ್ತು ಮುಂಗಡ ಪಾವತಿಗಳಂತಹ 30 ವರ್ಷಗಳ ಹಳೆಯ ದಾಖಲೆಗಳನ್ನು ಒಳಗೊಂಡಿದೆ. 'ಸಿ' ವರ್ಗದಲ್ಲಿ 'ನಿಗದಿತ ದರಗಳು ಮತ್ತು ರೂಪಾಂತರ ದಾಖಲೆ'ಗಳನ್ನು ಒಳಗೊಂಡಂತೆ 10 ವರ್ಷಗಳ ಹಳೆಯ ದಾಖಲೆಗಳನ್ನು ಒಳಗೊಂಡಿದೆ.

'ಡಿ' ವರ್ಗದಲ್ಲಿ 'ಪಾವತಿ ರಶೀದಿಗಳು', 'ಸ್ಟಾಂಪ್ ಖಾತೆಗಳು', 'ಸೇವಾ ಪುಸ್ತಕಗಳು', 'ಪಿಂಚಣಿ ದಾಖಲೆಗಳು ಮತ್ತು ಸಂಬಂಧಿತ ದಾಖಲೆ'ಗಳನ್ನು ಒಳಗೊಂಡಿದೆ ಹಾಗೂ 'ಇ' ವರ್ಗದಲ್ಲಿ ಹಾಜರಾತಿ ಮತ್ತು ರಜೆ ನೋಂದಣಿಗಳಂತಹ ಆಡಳಿತ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ.

ಹೈ–ರೆಸಲ್ಯೂಶನ್ ಸ್ಕ್ಯಾನರ್‌ಗಳನ್ನು ಬಳಸಿಕೊಂಡು ಸ್ಕ್ಯಾನಿಂಗ್ ಮತ್ತು ಇಂಡೆಕ್ಸಿಂಗ್ ಮೂಲಕ ದಾಖಲೆಗಳು, ನೋಂದಣಿಗಳು, ನಕ್ಷೆಗಳು ಮತ್ತು ಯೋಜನೆಗಳು ಸೇರಿದಂತೆ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ವರ್ಗೀಕರಿಸಿ ಡಿಜಿಟಲೀಕರಣ ಮಾಡಲಾಗುತ್ತಿದೆ. ಪ್ರತಿ ದಾಖಲೆಗೆ ದಿನಾಂಕ, ವಿಷಯ, ಫೈಲ್ ಸಂಖ್ಯೆ ಮತ್ತು ಇಲಾಖೆಯ ಹೆಸರನ್ನು ನಮೂದಿಸಲಾಗುತ್ತಿದೆ ಮತ್ತು ಡಿಜಿಟಲ್ ಪ್ರತಿಗಳನ್ನು ಸುರಕ್ಷಿತ ಸರ್ವರ್‌ಗಳು ಅಥವಾ ಕ್ಲೌಡ್–ಆಧಾರಿತ ವ್ಯವಸ್ಥೆಗಳಲ್ಲಿ ಸಂಗ್ರಹಿಸಲಾಗುತ್ತದೆ.ಡಾಕ್ಯುಮೆಂಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಮೂಲಕ ದಾಖಲೆಗಳು ಸಲುಭವಾಗಿ ಲಭ್ಯವಾಗುವಂತೆ ಮಾಡಲು ಪಾಲಿಕೆ ಸಿಬ್ಬಂದಿಗೆ ತರಬೇತಿಯನ್ನೂ ನೀಡಲಾಗುತ್ತಿದೆ.

ಡಿಜಿಟಲೀಕರಣ ಪ್ರಕ್ರಿಯೆಗಾಗಿ ಪಾಲಿಕೆ ಕೌನ್ಸಿಲ್ ಒಟ್ಟು 90 ಲಕ್ಷ ರೂ.ಗಳನ್ನು ಅನುಮೋದಿಸಿದ್ದು, ಪಾಲಿಕೆಯು ಹಿಮಗಿರಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಜೊತೆ ಒಪ್ಪಂದ ಮಾಡಿಕೊಂಡಿದೆ. 83,70,800 ರೂ. ವೆಚ್ಚದ ಒಪ್ಪಂದದೊಂದಿಗೆ ಡಿಜಿಟಲೀಕರಣ ನಡೆಸಲಾಗುತ್ತಿದ್ದು, 4,85,650 ಎ3/ಎ3+ ಹಾಳೆಗಳು, 11,70,000 ಎ4/ಎ4+ ಹಾಗೂ 10,500 ಎ2/ಎ2+ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ...

ಡಿಜಿಟಲೀಕರಣದ ಪ್ರಯೋಜನಗಳು

ಡಿಜಿಟಲೀಕರಣದಿಂದ ಯಾವುದೇ ದಾಖಲೆಗಳನ್ನು ತ್ವರಿತವಾಗಿ ಒದಗಿಸಲು ಅನುಕೂಲವಾಗಲಿದೆ. ದಾಖಲೆಗಳು ಹಾಳಾಗುವುದು ತಪ್ಪಲಿದೆ. ಕಡಿಮೆ ಸಮಯದಲ್ಲಿ ದಾಖಲೆಗಳು ಅಥವಾ ರಿಜಿಸ್ಟರ್‌ಗಳನ್ನು ಪತ್ತೆಹಚ್ಚಲು ಸಹಕಾರಿಯಾಗಲಿದೆ. ಕಡಿಮೆ ಜಾಗದಲ್ಲಿ ದಾಖಲೆಗಳ ಸಂಗ್ರಹಣೆ, ದಾಖಲೆಗಳ ಸುರಕ್ಷತೆ ಮತ್ತು ಸಂರಕ್ಷಣೆ, ಬೆಂಕಿ, ಪ್ರವಾಹ, ಕಳ್ಳತನ ಅಥವಾ ಟ್ಯಾಂಪರಿಂಗ್‌ನಿಂದ ರಕ್ಷಣೆ. ಕಾಗದ ಮುದ್ರಣ, ಕೊರಿಯರ್ ಸೇವೆಗಳಿಗೆ ಸಂಬಂಧಿತ ವೆಚ್ಚಗಳನ್ನು ಕಡಿಮೆ ಮಾಡುತ್ತದೆ. ತ್ವರಿತವಾಗಿ ದಾಖಲೆಗಳನ್ನು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳಲು ಅನುಕೂಲ. ಡೇಟಾ ವಿಶ್ಲೇಷಣೆ ಮತ್ತು ವರದಿ ಉತ್ಪಾದನೆಯನ್ನು ಸಕ್ರಿಯಗೊಳಿಸುತ್ತದೆ.

ಅ.23, ಕಿತ್ತೂರುರಾಣಿ ಚೆನ್ನಮ್ಮ ಜಯಂತಿ



ಮೈಸೂರು,ಅ.19–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರಪಾಲಿಕೆ ವತಿಯಿಂದ ಕಿತ್ತೂರುರಾಣಿ ಚೆನ್ನಮ್ಮ ಜಯಂತಿ ಆಚರಣೆಯನ್ನು ಅ.23ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಸುನೀಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್ ಕುಮಾರ್.ಸಿ., ರವಿಶಂಕರ್ ಡಿ., ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ಎಸ್, ಕೆ.ವಿವೇಕಾನಂದ ಮತ್ತು ಕೆ.ಶಿವಕುಮಾರ್ ಸಮಾರಂಭದ ಅತಿಥಿಗಳಾಗಿರುವರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ ಅಧ್ಯಕ್ಷ ಎಚ್.ಬಿ.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಪ್ಯಾರಿಜಾನ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಾಹಿತಿ ಡಾ.ಸುಜಾತ ಅಕ್ಕಿ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅ.22, 'ರಸೀದಿ ಟಿಕೆಟ್' ಏಕವ್ಯಕ್ತಿ ರಂಗ ಪ್ರಯೋಗ



ಮೈಸೂರು, ಅ.19–ಕಲಾಸಪ್ತಮಿ ಸಾಂಸ್ಕೃತಿಕ ಸಂಸ್ಥೆ ಮತ್ತು ನಿರ್ದಿಗಂತ ವತಿಯಿಂದ ಅ.22ರಂದು ಸಂಜೆ 6.30ರಿಂದ ವಿಜಯನಗರ 1ನೇ ಹಂತದಲ್ಲಿರುವ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಂಸ್ಥೆ ಆವರಣದಲ್ಲಿ ಅಮೃತಾ ಪ್ರೀತಂ ಅವರ ಕತೆ ಹಾಗೂ ಆತ್ಮಕತೆಯಾಧಾರಿತ 'ರಸೀದಿ ಟಿಕೆಟ್' ಏಕವ್ಯಕ್ತಿ ರಂಗ ಪ್ರಯೋಗ ಪ್ರದರ್ಶನಗೊಳ್ಳಲಿದೆ. ವಿನ್ಯಾಸ, ನಿರ್ದೇಶನ ಡಾ.ಸವಿತಾ ರಾಣಿ, ರಚನೆ ಸುಧಾ ಆಡುಕಳ, ಅಭಿನಯ ಶಾಲೋಮ್ ಸನ್ನುತ, ಬೆಳಕಿನ ವಿನ್ಯಾಸ ಸಿ.ಕೆ.ಮಂಜು, ಸಂಗೀತ ಮುನ್ನ ಮೈಸೂರು ಅವರದು. ಹೆಚ್ಚಿನ ಮಾಹಿತಿಗೆ ಮೊ. 7022033303 ಸಂಪರ್ಕಿಸಬಹುದು.

ಎಣ್ಣೆ ಗಾಣ ಘಟಕಗಳ ಸ್ಥಾಪನೆಗೆ ಅರ್ಜಿ ಆಹ್ವಾನ

ಮೈಸೂರು,ಅ.19–2025–26ನೇ ಸಾಲಿನ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಎಣ್ಣೆಕಾಳು, ಬೆಳೆ ಯೋಜನೆಯಡಿ ಪ್ರಾಥಮಿಕ ಮತ್ತು ದ್ವಿತೀಯ ಎಣ್ಣೆಕಾಳು ಕೊಯ್ಲೋತ್ತರ ಮೂಲ ಸೌಕರ್ಯ ಸೌಲಭ್ಯದಿಂದ ಸ್ಥಳೀಯವಾಗಿ ಉದ್ಯೋಗಾವಕಾಶ ಕಲ್ಪಿಸಲು ಹಾಗೂ ಶುದ್ಧ ಖಾದ್ಯ ತೈಲ ಉಪಯೋಗಿಸಲು ಅನುಕೂಲವಾಗುವಂತೆ ಪ್ರೇರೇಪಿಸಲು ಸೂಕ್ತವಾಗುವ ಮೌಲ್ಯ ಸರಪಳಿಯನ್ನು ಉತ್ತೇಜಿಸಲು, ಸಂಸ್ಕರಣಾ ಘಟಕಗಳಿಗೆ ಅವಶ್ಯವಿರುವ ಎಣ್ಣೆ ಗಾಣವನ್ನು ಸ್ಥಾಪಿಸಲು ಜಿಲ್ಲಾ ಕಾರ್ಯಕಾರಿ ಸಮಿತಿಯು ಸರ್ಕಾರ, ಸರ್ಕಾರೇತರ ಸಂಸ್ಥೆಗಳು, FPOsಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಾಥಮಿಕ ಮತ್ತು ದ್ವಿತೀಯ ಎಣ್ಣೆಕಾಳು ಕೊಯ್ಲೋತ್ತರ ಮೂಲಕ ಸೌಕರ್ಯ ಸೌಲಭ್ಯ (ಗರಿಷ್ಠ ಯೋಜನಾ ವರದಿಯ ಶೇ.33ರಷ್ಟು ಅಥವಾ 9.99 ಲಕ್ಷಕ್ಕೆ ಮೀರದಂತೆ) ಅರ್ಜಿ ಜೊತೆಗೆ ಯೋಜನಾ ವರದಿ ಸಲಿಸಬೇಕಾಗಿದ್ದು, ಘಟಕದಡಿ ಕಟ್ಟಡದ ವೆಚ್ಚ ಮತ್ತು ಭೂಮಿ ಬಾಡಿಗೆಯನ್ನು ಪರಿಗಣಿಸಲಾಗುವುದಿಲ್ಲ. ಆದ್ದರಿಂದ ಆಸಕ್ತರು ಅರ್ಜಿಯನ್ನು ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದಾಗಿದೆ.

ಜೆ.ಶಮಿತ್‌ಗೆ ಬಹುಮಾನ



ಮೈಸೂರು: ಕಾರ್ಮೆಲ್ ಕ್ಯಾಥೋಲಿಕ್ ಅಸೋಷಿಯೇಷನ್ (ಸಿಸಿಎ) ವತಿಯಿಂದ ಇಲವಾಲದ ಸೆಂಟ್ ಜೋಸೆಫ್ ಸೆಂಟ್ರಲ್ ಶಾಲೆಯಲ್ಲಿ ನಡೆದ ಪಾಜೋ ಇಂಟರ್ ಸ್ಕೂಲ್ ಚೆಸ್ ಟೂರ್ನಮೆಂಟ್‌ನ 1ರಿಂದ 4ನೇ ತರಗತಿ ವಿಭಾಗದಲ್ಲಿ ವಿಜೇತ ವಿದ್ಯಾರ್ಥಿ ರಾಜೀವನಗರದ ಸಂತ ಜೋಸೆಫರ ಶಾಲೆಯ 3ನೇ ತರಗತಿ ವಿದ್ಯಾರ್ಥಿ ಜೆ.ಶಮಿತ್ ಅವರಿಗೆ ಫೆಡರಲ್ ಬ್ಯಾಂಕಿನ ಪ್ರಾದೇಶಿಕ ಮುಖ್ಯಸ್ಥ ರಾಜೀವ್ ಬಹುಮಾನ ನೀಡಿದರು. ಈ ಸಂದರ್ಭದಲ್ಲಿ ಲೂನರ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಾನ್ಸನ್ ಹಾಗೂ ಫಾದರ್ ಅಗಸ್ಟೈನ್ ಪಾಯಂಪಿಲ್ಲಿ ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ರಾಜ್ಯೋತ್ಸವ ಸನ್ಮಾನಕ್ಕೆ ಅರ್ಜಿ ಆಹ್ವಾನ

ಮೈಸೂರು,ಅ.19–ಮೈಸೂರು ಜಿಲ್ಲಾಡಳಿತ ವತಿಯಿಂದ 2025ನೇ ಸಾಲಿನಲ್ಲಿ ಆಚರಿಸಲಾಗುವ 70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ, ಸಮಾಜ ಸೇವೆ, ಪತ್ರಿಕೋದ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ, ಪರಿಸರ, ಕ್ರೀಡೆ, ವೈದ್ಯಕೀಯ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ಅತ್ಯುತ್ತಮ ಗಣನೀಯ ಸೇವೆ ಸಲ್ಲಿಸಿರುವ ಹಾಗೂ ಸಲ್ಲಿಸುತ್ತಿರುವವರಿಗೆ ಜಿಲ್ಲಾ ಮಟ್ಟದ ಸನ್ಮಾನ ಕಾರ್ಯಕ್ರಮಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಸಂಪೂರ್ಣ ವಿವರಗಳೊಂದಿಗೆ ನೇರವಾಗಿ ಅಥವಾ ಇ–ಮೇಲ್ ಮೂಲಕ ಅ.27ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಸಾಧಕರ ವಿವರಗಳನ್ನು ಬೇರೊಬ್ಬರು ಶಿಫಾರಸು ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಸಾಧಕರ ಸಂಪೂರ್ಣ ವಿವರಗಳನ್ನು ಲಗತ್ತಿಸಿ, ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸ್ವೀಕರಿಸಲು ರಜಾ ದಿನಗಳಲ್ಲೂ ಕೌಂಟರ್ ತೆರೆಯಲಾಗಿದ್ದು, ಬೆಳಗ್ಗೆ 10.30ರಿಂದ ಸಂಜೆ 5.30ರವರೆಗೆ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಲಾಮಂದಿರ, ಮೈಸೂರು–570005 ಇಲ್ಲಿಗೆ ನೇರವಾಗಿ ಸಲ್ಲಿಸಬಹುದು. ಇಲ್ಲವೇ dkc.mysuru@gmail.com ಇ–ಮೇಲ್ ವಿಳಾಸಕ್ಕೂ ವಿವರಗಳೊಂದಿಗೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ. ಸಂಖ್ಯೆ: 0821–2513225ಗೆ ಸಂಪರ್ಕಿಸಬಹುದು ಎಂದು ಮೈಸೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲಾ ಭಾಷೆಗಳಿಗೂ ಸಂಸ್ಕೃತ ಮಾತೃ ಸ್ಥಾನ

ಸುತ್ತೂರು ಶ್ರೀಗಳ ಅಭಿಮತ



ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಸಂಸ್ಕೃತೋತ್ಸವದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ವಿ.ಗಿರೀಶ್ ಚಂದ್ರ ಮಾತನಾಡಿದರು.

ಮೈಸೂರು,ಅ.19(ಜಿಎ)–ಸಂಸ್ಕೃತ ಭಾಷೆ ಎಲ್ಲಾ ಭಾಷೆಗಳ ಮಾತೃಸ್ಥಾನ ಹೊಂದಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಸಂಸ್ಕೃತೋತ್ಸವ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಭಾಷೆಯಾಗಿ ಕಲಿತರೆ ಸುಲಭ, ಕಲಿಯದಿದ್ದರೆ ಕಠಿಣ ವಾಗಲಿದೆ. ಪ್ರತಿಯೊಬ್ಬರೂ ವ್ಯಾಕರಣ ಶುದ್ಧಿಯಾಗಿ ಮಾತನಾಡುವುದನ್ನು ಶ್ರದ್ಧೆಯಿಂದ ಕಲಿಯಬೇಕು. ವಿದ್ಯಾರ್ಥಿಗಳು ಸಂಸ್ಕೃತದ ಪಾಣಿನಿ ಮತ್ತು ಕೇಶಿ ರಾಜನ ಶಬ್ದಮಣಿ ದರ್ಪಣ ವ್ಯಾಕರಣ ಕೃತಿಯನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಇದು ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಇವು ಸಹಾಯಕವಾಗಿದೆ ಎಂದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಜಗತ್ತಿಗೆ ಶ್ರೇಷ್ಠ ಮಹಾಕಾವ್ಯಗಳನ್ನು ನೀಡಿದ್ದು, ಸಂಸ್ಕೃತ ಭಾಷೆ ಎಂಬುದನ್ನು ಮರೆಯಬಾರದು. ವಿದ್ಯೆಯೆಂಬುದು ಯಾರೊಬ್ಬರ ಸ್ವತ್ತಾಗಿ ಇಂದು ಉಳಿದಿರುವುದಿಲ್ಲ. ತಮ್ಮ ಬದುಕಿನ ಕಲಿಕೆಯಲ್ಲಿ ಶ್ರದ್ಧೆ ಇರಲಿ ಎಂದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ವಿ.ಗಿರೀಶ್‌ಚಂದ್ರ ಮಾತನಾಡಿ, ಸಂಸ್ಕೃತ ಭಾಷೆಗೆ ಪ್ರಾಚೀನ ಪರಂಪರೆಯಿದೆ. ಎಲ್ಲಾ ಮೌಲ್ಯಗಳ ಮಹಾನಿಧಿಯಾಗಿದೆ ಹಾಗೂ ಮನುಷ್ಯನ ಮನಸ್ಸನ್ನು ಸಂಸ್ಕಾರಗೊಳಿಸುವಲ್ಲಿ ಇಂತಹ ಉತ್ಸವಗಳು ಸಹಕಾರಿಯಾಗಿದೆ ಎಂದರು.

ಆಗಮ ವಿದ್ವಾಂಸರಾದ ಪ್ರೊ.ಮಲ್ಲಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ವಾಂಸರಾದ ಡಾ.ಹೆಚ್.ವಿ.ನಾಗರಾಜರಾವ್ ಅವರನ್ನು ಅಭಿನಂದಿಸಲಾಯಿತು. ವಿದ್ಯಾರ್ಥಿಗಳಿಗೆ ಅತಿಥಿಗಣ್ಯರು ಪ್ರತಿಭಾ ಪುರಸ್ಕಾರ ನೀಡಿದರು. ಕಾಲೇಜಿನ ಅಂತಿಮ ಬಿಬಿಎ ವಿದ್ಯಾರ್ಥಿನಿ ಕರಾಟೆಯಲ್ಲಿ ಸಾಧನೆ ಮಾಡಿದ ಪ್ರಕೃತಿಗೌಡ ಅವರನ್ನು ಅಭಿನಂದಿಸಿದರು. ವಿದ್ಯಾರ್ಥಿಗಳಿಂದ ನಾರೀಶಕ್ತಿ ನಾಟಕ ಪ್ರದರ್ಶನಗೊಂಡಿತು. ಈ ಸಂದರ್ಭದಲ್ಲಿ ಜ್ಯೋತಿಷ್ಯ ವಿದ್ವಾಂಸರಾದ ಡಾ.ಕೆ. ಜಿ ಪುಟ್ಟಹೊನ್ನಯ್ಯ, ಕಾಲೇಜಿನ ಪ್ರಾಂಶುಪಾಲ ಡಾ.ರೇಚಣ್ಣ, ಸಂಚಾಲಕ ಡಾ. ಬಿ.ಪಿ.ಷಡಕ್ಷರಿ, ಡಾ.ಕೃಷ್ಣ ಭಟ್, ಎಸ್ ಚಂದ್ರಮೌಳೇಶ್ವರ ಉಪಸ್ಥಿತರಿದ್ದರು.

ಜೆಎಸ್‌ಎಸ್ ಕಾಲೇಜಲ್ಲಿ ವಿಶ್ವ ಆಹಾರ ದಿನಾಚರಣೆ



ಮೈಸೂರಿನ ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಆಹಾರ ಸಂಸ್ಕರಣೆ ಮತ್ತು ತಂತ್ರಜ್ಞಾನ ವಿಭಾಗವು ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮ ನಡೆಸಿತು.

ಮೈಸೂರು,ಅ.19–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಆಹಾರ ಸಂಸ್ಕರಣೆ ಮತ್ತು ತಂತ್ರಜ್ಞಾನ ವಿಭಾಗವು ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ಆಹಾರ ವಿಜ್ಞಾನ ಮತ್ತು ಪೌಷ್ಟಿಕಶಾಸ್ತ್ರ ವಿಭಾಗದ ನಿವೃತ್ತ ಹಿರಿಯ ಪ್ರಾಧ್ಯಾಪಕರಾದ ಡಾ.ಅಸ್ನಾ ಉರೂಜ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶ್ವ ಆಹಾರ ದಿನವನ್ನು 150ಕ್ಕೂ ಅಧಿಕ ರಾಷ್ಟಗಳು ಆಚರಿಸುತ್ತಿವೆ. ನಾಗಲೋಟದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಭದ್ರತೆಯನ್ನು ಒದಗಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಭಾರತವು ಸಕ್ರಿಯವಾಗಿ ಈ ದಿನವನ್ನು ದೇಶಾದ್ಯಂತ ಆಚರಿಸುತ್ತದೆ. ಆಹಾರ ಭದ್ರತೆಯ ಜೊತೆಗೆ ಪೌಷ್ಟಿಕವಾದ ಆಹಾರವನ್ನು ಸಮುದಾಯಕ್ಕೆ ಒದಗಿಸುವುದು ನಮ್ಮೆಲ್ಲರ ಆದ್ಯ ಜವಾಬ್ದಾರಿಯಾಗಿರಬೇಕು ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಸಾಂಬಶಿವಯ್ಯ, ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಪ್ರಭು, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಬಿ.ಪ್ರಭು ಸ್ವಾಮಿ, ಹಿರಿಯ ಪ್ರಾಧ್ಯಾಪಕ ಪ್ರೊ.ದೇವಣ್ಣ ಇನ್ನಿತರರು ಉಪಸ್ಥಿತರಿದ್ದರು.

'ಮಕ್ಕಳ ಸ್ನೇಹಿ ನಗರ' ಜಾಗೃತಿ ಕಾರ್ಯಕ್ರಮ



ಮಹಾರಾಣಿ ಕಲಾ ಕಾಲೇಜಲ್ಲಿ ನಡೆದ 'ಮಕ್ಕಳ ಸ್ನೇಹಿ ನಗರ' ಜಾಗೃತಿ ಕಾರ್ಯಕ್ರಮ.

ಮೈಸೂರು,ಅ.19(ಎಂಕೆ)–ಮೈಸೂರಿನ ಮಹಾರಾಣಿ ಕಲಾ ಕಾಲೇಜು ಸಭಾಂಗಣದಲ್ಲಿ ಕಾಲೇಜಿನ ಕ್ರಿಮಿನಾಲಜಿ ಮತ್ತು ಫೋರೆನ್ಸಿಕ್ ಸೈನ್ಸ್ ವಿಭಾಗ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಯುವ ರೆಡ್ ಕ್ರಾಸ್ ಘಟಕ, ಲೈಂಗಿಕ ಕಿರುಕುಳ ತಡೆ ಘಟಕ, ಡಾನ್ ಬಾಸ್ಕೊ ಮಕ್ಕಳಾಲಯದ ವತಿಯಿಂದ ಮಕ್ಕಳ ಸುರಕ್ಷತೆ ಕುರಿತ 'ಮಕ್ಕಳ ಸ್ನೇಹಿ ನಗರ' ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಮಕ್ಕಳ ಸಂರಕ್ಷಣಾ ಅಧಿಕಾರಿ ಎನ್.ಟಿ.ಯೋಗೇಶ್, ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು, ಸುರಕ್ಷಿತ ಮತ್ತು ಸಬಲೀಕರಣದ ವಾತಾವರಣ ನಿರ್ಮಿಸುವುದು ಪ್ರಮುಖ ಗುರಿಗಳಾಗಿವೆ ಎಂದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ರವಿಚಂದ್ರ ಮಾತನಾಡಿ, ಸಮಾಜದಲ್ಲಿ ಮಕ್ಕಳ ಸುರಕ್ಷತೆ ಪ್ರತಿಯೊಬ್ಬರ ಹೊಣೆಯಾಗಿದೆ. ಮಕ್ಕಳ ಭವಿಷ್ಯದ ಜೊತೆಗೆ ದೇಶದ ಭವಿಷ್ಯವನ್ನು ಕಾಪಾಡುವುದು ನಮ್ಮೆಲ್ಲರ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಎಲ್ಲಿಯೇ ಮಕ್ಕಳ ಮೇಲೆ ದೌರ್ಜನ್ಯ ನಡೆಯುವುದು ಕಂಡು ಬಂದಲ್ಲಿ ಕೂಡಲೇ ಮಾಹಿತಿ ನೀಡುವಂತೆ ತಿಳಿಸಿದರು.

ಮಕ್ಕಳ ಸಹಾಯವಾಣಿ ಸಂಯೋಜಕ ಎ.ಎಸ್.ರಘು ಮಾತನಾಡಿದರು. ಡಾನ್ ಬಾಸ್ಕೋ ಮಕ್ಕಳಾಲಯದ ನಿರ್ದೇಶಕರು ಜಿವನ್ ಜೋಸ್, ಮಕ್ಕಳ ವಿಶೇಷ ಪೊಲೀಸ್ ಘಟಕದ ಹೆಡ್ ಕಾನ್ಸ್ಟೇಬಲ್ ಟಿ.ಶ್ರೀನಿವಾಸ್, ಮಹಾರಾಣಿ ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಎಸ್. ಅನಿತಾ ಇನ್ನಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಸಂಗೀತ ಸ್ಪರ್ಧೆ

ಮೈಸೂರು: ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಸಂಸ್ಮರಣಾ 30ನೇ ರಾಷ್ಟ್ರೀಯ ಸಂಗೀತ ಸಮ್ಮೇಳನದ ಅಂಗವಾಗಿ ಸಂಗೀತ ಸ್ಪರ್ಧೆ ಏರ್ಪಡಿಸಿದೆ. ವಚನಗಾಯನ, ಶಾಸ್ತ್ರೀಯ ಸಂಗೀತ ಗಾಯನ ಹಾಗೂ ಶಾಸ್ತ್ರೀಯ ವಾದ್ಯ ಸಂಗೀತ ಈ ಮೂರು ಪ್ರಕಾರಗಳಿಗಾಗಿ ನಡೆಸಲಾಗುವುದು. ಸ್ಪರ್ಧೆಯನ್ನು 10 ವರ್ಷದಿಂದ 15 ವರ್ಷದ ಒಳಗಿನವರಿಗೆ ಹಾಗೂ 15ರಿಂದ 20 ವರ್ಷದ ಒಳಗಿನವರಿಗಾಗಿ 2 ವಯೋ ಗುಂಪುಗಳಲ್ಲಿ ನಡೆಸಲಾಗುವುದು. ಒಬ್ಬ ಅಭ್ಯರ್ಥಿ ಎಲ್ಲಾ ಸ್ಪರ್ಧೆಗೂ ಭಾಗವಹಿಸಬಹುದಾಗಿದೆ. ಆಸಕ್ತರು ನಿಗದಿತ ಶುಲ್ಕ ಪಾವತಿಸಿ ಅರ್ಜಿ ಫಾರಂ ಪಡೆದು, ವಯಸ್ಸಿನ ಸೂಕ್ತ ದಾಖಲಾತಿಯೊಂದಿಗೆ ತಮ್ಮ ಭಾವಚಿತ್ರದೊಡನೆ ತುಂಬಿದ ಅರ್ಜಿಯನ್ನು ಜೆಎಸ್‌ಎಸ್ ಸಂಗೀತ ಸಭಾ ಕಚೇರಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಆವರಣ, ಜೆಎಸ್‌ಎಸ್ ಬುಕ್‌ಹೌಸ್ ಪಕ್ಕ. ಈ ವಿಳಾಸಕ್ಕೆ 31.10.2025 ರೊಳಗಾಗಿ ಸಲ್ಲಿಸಬೇಕು. ವಿವರಗಳಿಗೆ ಮೊ. 99009 53152 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

20.10.2025 ಸೋಮವಾರ, ಮಳೆ ನಕ್ಷತ್ರ: ಚಿತ್ತ 11.10.2025ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮೈಗ್ರೇನ್ ಹಾಗೂ ಎಲ್ಲಾ ಪ್ರಕಾರದ ತಲೆನೋವುಗಳಿಗೆ ಚಿಕಿತ್ಸಾ ಶಿಬಿರ, ಲಕ್ವ/ಪ್ಯಾರಾಲಿಸಿಸ್, ಕಾರ್ನಿಯಾದ ಅಪಾರ ದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ)ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಮಕ್ಕಳಲ್ಲಿ ಕಂಡು ಬರುವ ಸೆರೆಬ್ರಲ್ ಪಾಲ್ಸಿ (ಮಾಂಸ ಖಂಡಗಳ ದೌರ್ಬಲ್ಯ, ನಿಲ್ಲಲು ಹಾಗೂ ನಡೆದಾಡಲು ಸಾಧ್ಯವಾಗದಿರುವುದು, ಕುಂಠಿತ ಬೆಳವಣಿಗೆ), ವಯಸ್ಕರಲ್ಲಿ ಕಂಡು ಬರುವ ಸಂಧಿನೋವು, ಮಂಡಿ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ವ್ಯವಸ್ಥಾಪಕರು :** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.
- **ರುದ್ರಾಕ್ಷಿ ಸಂಸ್ಥೆ :** ದೀಪಾವಳಿ ಪ್ರಯುಕ್ತ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸಿಪಾಯಿ ಗ್ರಾಂಡೆ, ಜೆಎಸ್‌ಎಸ್ ಆಸ್ಪತ್ರೆ ಎದುರು, ಬೆಳಗ್ಗೆ 10.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 4.30 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿಶೇಷ ಕಾರ್ಯಕ್ರಮ, ಎಂ.ಎಸ್.ಸುನಿಲ್–ನಾಗಸ್ವರ ವಾದನ, ಹೆಚ್.ಎಂ.ಮಹದೇವ–ಡೋಲು, 5.00–ಕೆ.ಪಿ.ನಾರಾಯಣ ಹಾಗೂ ಸಂಗಡಿಗರು, ನಾಗಸ್ವರ ವಾದನ, 5.30–ಹೆಚ್.ಸಿ.ಸತೀಶ್ ಹಾಗೂ ಸಂಗಡಿಗರು, ನಾಗಸ್ವರ ವಾದನ, 6.10–ಚಿಂತನ, ಪರಮೇಶ್ವರ್ ಸಾಲಿಮಠ್, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಕೆ.ಪಿ.ರೇವತಿ, ವ್ಯಾಖ್ಯಾನ–ಡಾ.ಎನ್.ಎಸ್.ತಾರಾನಾಥ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 7.45–ಹಾಸನಾಂಬೆ ದಿನ ವಿಶೇಷ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ ಹಾಸನ, 8.30–ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಹಾಗೂ ಎಂ.ಎಸ್.ಕೆ.ಪ್ರಭು ನಡೆಸಿದ್ದ ಸಂವಾದದ 4ನೇ ಭಾಗ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಆರ್.ರಂಗಸ್ವಾಮಿ ಹಾಗೂ ಸಂಗಡಿಗರು, ನಾಗಸ್ವರ ವಾದನ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, 12.05–ವನಿತಾ ವಿಹಾರ: ದೀಪಾವಳಿ ಅಂದು ಇಂದು ಧಾರವಾಡದ ತೇಜಸ್ವಿನಿ ಮಹಿಳಾ ಮಂಡಲದ ಸದಸ್ಯರಿಂದ ಕಾರ್ಯಕ್ರಮ ವೈವಿಧ್ಯ. ಪ್ರಸ್ತುತಿ–ಮಂಜುಳಾ ಪುರಾಣಿಕ್, 12.35–ದೇವರನಾಮ–ಬಿ.ಆರ್.ಗೀತಾ, 12.45–ನಮ್ಮ ಆರೋಗ್ಯ ವಿಶ್ವ ಆಸ್ಟಿಯೋಪೊರೋಸಿಸ್ ದಿನಾಚರಣೆ ಸಂದರ್ಭದಲ್ಲಿ ಆಸ್ಟಿಯೋಪೊರೋಸಿಸ್ ಹಾಗೂ ಆಸ್ಟಿಯೋ ಮೆಲೇಸಿಯಾ ರೋಗಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮೂಳೆ ಮತ್ತು ಕೀಲು ವಿಭಾಗದ ಪ್ರೊ.ಡಾ.ಶೇಷಗಿರಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು, ಜಯಂತಿ.ವಿ.ಭಟ್, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00– ಕರ್ನಾಟಕ ಶಾಸ್ತ್ರೀಯ ಸಂಗೀತ: ನಿಲಯದ ಕಲಾವಿದರಿಂದ ವಾದ್ಯವೃಂದ ನಿರ್ದೇಶನ ತುಮಕೂರು.ಬಿ.ರವಿಶಂಕರ್, 4.00–ಮಹಿಳಾರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ–ಮೈಸೂರಿನ ವಕೀಲರು ಹಾಗೂ ಕಾನೂನು ಶಿಕ್ಷಕರಾದ ಸಿರಿ ವಾನಳ್ಳಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ಸಹನಾ, 4.30–ಹಿಂದಿ ಚಿತ್ರಗೀತೆಗಳು, 4.45–ಹಿಂದಿ ಪಾಠ, ಪ್ರಸ್ತುತಿ: ಡಾ.ಮಾಧವಿ ಭಂಡಾರಿ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ತೋಟಗಾರಿಕಾ ಬೆಳೆಗಳ ಬೇಸಾಯ ಅವಕಾಶಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲೆ, ವಿ.ಸಿ.ಫಾರಂ, ಕೃಷಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಜೆ.ಸಿ.ಬೊಮ್ಮೇಶ್ ಮತ್ತು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಬಿ.ದಿವ್ಯಾ, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ–ದೀಪಾವಳಿ ಹಬ್ಬದ ಸಂದರ್ಭದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ ನಡೆಸಿಕೊಡುತ್ತಾರೆ : ಮೈಸೂರಿನ ಶ್ರೀಗಣೇಶ ಸಂಗೀತ ನೃತ್ಯಾಲಯ ಚಾರಿಟೆಬಲ್ ಟ್ರಸ್ಟ್‌ನ ವಿದ್ಯಾರ್ಥಿಗಳು. 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು ಎಸ್.ರಾಜಲಕ್ಷ್ಮಿ–ವೀಣಾವಾದನ, 10.00–ನಿನಾದ: ವೈಣಿಕ ವಾಗ್ಗೇಯ ವಾಹಿನಿ. 10.30–ಸವಿನೆನಪು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 20 ಸೋಮವಾರ 2025

ಸಂಪುಟ: 46 | ಸಂಚಿಕೆ: 183 | ಪುಟಗಳು: 12


₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಪಥಸಂಚಲನಕ್ಕೆ ಆರ್‌ಎಸ್‌ಎಸ್‌ಗೆ ಆಸ್ಪದ



ಕಲಬುರಗಿ, ಅ.19– ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲೂಕು ಕೇಂದ್ರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಪಥಸಂಚಲನ ಕುರಿತು ವಿಚಾರಣೆ ನಡೆಸಿದ ಹೈಕೋರ್ಟ್‌ನ ಕಲಬುರಗಿ ಪೀಠ ನವೆಂಬರ್ 2ರಂದು ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ನೀಡಿದೆ.

ಆರ್‌ಎಸ್‌ಎಸ್ ಪಥಸಂಚಲನ ನಿಗದಿಯಾದ ಭಾನುವಾರವೇ ತನಗೂ 'ಭೀಮ ಪಥಸಂಚಲನ' ನಡೆಸಲು ಅನುಮತಿ ನೀಡುವಂತೆ ದಲಿತ ಪರ ಸಂಘಟನೆ ಭೀಮ್ ಆರ್ಮಿ ತಹಸೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿತ್ತು.

ಒಂದೇ ದಿನ ಏಕಕಾಲಕ್ಕೆ ಎರಡು ಸಂಘಟನೆಗಳು ಕಾರ್ಯಕ್ರಮ ಆಯೋಜಿಸುವುದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಲಿದೆ ಎಂಬ ಪೊಲೀಸ್ ವರದಿ ಆಧರಿಸಿ ತಹಶೀಲ್ದಾರ್ ನಾಗಯ್ಯ ಹಿರೇಮಠ ಅವರು ಪಥಸಂಚಲನ ನಡೆಸಲು ಎರಡೂ ಸಂಘಟನೆಗಳಿಗೆ ಅನುಮತಿ ನಿರಾಕರಿಸಿದ್ದರು. ಇದನ್ನು ಪ್ರಶ್ನಿಸಿ ಆರ್‌ಎಸ್‌ಎಸ್ ಜಿಲ್ಲಾ ಸಂಚಾಲಕ ಅಶೋಕ ಪಾಟೀಲ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಪ್ರಕರಣದ ತುರ್ತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂಜಿಎಸ್ ಕಮಲ್ ಅವರಿದ್ದ ನ್ಯಾಯಪೀಠವು, ಸದ್ಯ ಆರ್‌ಎಸ್‌ಎಸ್ ನ.2ರಂದು ಪಥಸಂಚಲನ ಆಯೋಜಿಸಲು ನಿಗದಿಪಡಿಸಲಾಗಿದೆ. ಅದಕ್ಕೆ ಅನುಮತಿ ನೀಡಲು ರೂಟ್ ಮ್ಯಾಪ್ ಹಾಗೂ ತಹಶೀಲ್ದಾರ್ ಕೇಳಿದ್ದ ವಿವರಣೆಗಳೊಂದಿಗೆ ಹೊಸದಾಗಿ ಅರ್ಜಿದಾರರು ಅರ್ಜಿ ಸಲ್ಲಿಸಬೇಕು. ಅದನ್ನು ಕಲಬುರಗಿ ಜಿಲ್ಲಾಧಿಕಾರಿ ಪರಿಗಣಿಸಬೇಕು. ಈ ಕುರಿತ ವರದಿಯನ್ನು ಅ.24ರ ಮಧ್ಯಾಹ್ನ 2.30ಕ್ಕೆ ವರದಿ ಸಲ್ಲಿಸಬೇಕು ಎಂದು ಸೂಚಿಸಿ ವಿಚಾರಣೆಯನ್ನು ಅ.24ಕ್ಕೆ ಮುಂದೂಡಿತು. ವಿಚಾರಣೆ ವೇಳೆ, ಕಾನೂನು ಸುವ್ಯವಸ್ಥೆ ಕಾಪಾಡಬೇಕಾಗಿರುವುದರಿಂದ ಹಲವು ಸಂಘಟನೆಗಳು ಒಂದೇ ದಿನ, ಒಂದೇ ಸ್ಥಳ ಮತ್ತು ಒಂದೇ ಮಾರ್ಗದಲ್ಲಿ ರ್‍ಯಾಲಿ ನಡೆಸಲು ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಸರ್ಕಾರದ ಪರ ವಕೀಲರು ತಿಳಿಸಿದರು. ಅದಕ್ಕೆ ಸಂಘಟನೆಗಳಿಗೆ ಪ್ರತ್ಯೇಕ ದಿನಾಂಕಗಳಂದು ಅವಕಾಶ ಕಲ್ಪಿಸಬೇಕು ಎಂದು ಹೈಕೋರ್ಟ್ ತಿಳಿಸಿತು. ಸರ್ಕಾರದ ಪರವಾಗಿ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಅರ್ಜಿದಾರರ ಪರ ಅರುಣ್ ಶ್ಯಾಮ್ ಹಾಜರಾಗಿದ್ದರು.

ಪ್ರಜಾತಂತ್ರದ ಹಕ್ಕು ಕಸಿಯಲು ಹೊರಟವರಿಗೆ ಮುಖಭಂಗ



ಬೆಂಗಳೂರು, ಅ.19– ಚಿತ್ತಾಪುರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಪಥಸಂಚಲನಕ್ಕೆ ಅನುಮತಿ ನೀಡಿದ ಹೈಕೋರ್ಟ್ ತೀರ್ಪು ಜನತಂತ್ರದ ವಿಜಯವಾಗಿದೆ ಎಂದು ಬಿಜೆಪಿ ಹೇಳಿದೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ಚಿತ್ತಾಪುರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪಥಸಂಚಲನಕ್ಕೆ ಅನುಮತಿ ನೀಡಿದ ಘನ ಉಚ್ಚ ನ್ಯಾಯಾಲಯದ ತೀರ್ಪು ಜನತಂತ್ರದ ವಿಜಯವಾಗಿದೆ. ಪ್ರಜಾತಂತ್ರದ ಹಕ್ಕು ಕಸಿಯಲು ಹೊರಟ ಕಾಂಗ್ರೆಸ್ ಸರ್ಕಾರಕ್ಕೆ ಉಚ್ಚ ನ್ಯಾಯಾಲಯ ಚಾಟಿ ಬೀಸಿ ಸಂವಿಧಾನದ ಘನತೆಯನ್ನು ಎತ್ತಿ ಹಿಡಿದಿದೆ ಎಂದು ಹೇಳಿದ್ದಾರೆ. ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ನಿರ್ಬಂಧಿಸಲು ಹೊರಟವರಿಗೆ ಮುಖಭಂಗವಾಗಿದೆ ಇಂದಿನ ನ್ಯಾಯಾಲಯದ ತೀರ್ಪು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ವಾಧಿಕಾರಿ ಆಡಳಿತ ನಡೆಸಲು ಅವಕಾಶವಿಲ್ಲ ಎಂಬ ಸ್ಪಷ್ಟ ಸಂದೇಶ ಸಾರಿದೆಯಲ್ಲದೇ, ದಿನಬೆಳಗಾದರೆ ಸಂವಿಧಾನದ ■ 6ನೇ ಪುಟಕ್ಕೆ

ಹಾಸನಾಂಬೆ ದೇವಾಲಯದಲ್ಲಿ ಕಾಲ್ತುಳಿತ ಸಾಧ್ಯತೆ

ಜಿಲ್ಲಾಡಳಿತಕ್ಕೆ ಪೋಲೀಸ್ ವರಿಷ್ಠಾಧಿಕಾರಿ ಮುನ್ನೆಚ್ಚರಿಕೆ ಪತ್ರ

● ಅಹಿತಕರ ಘಟನೆ ನಡೆದರೆ ಪೊಲೀಸ್ ಇಲಾಖೆ ಹೊಣೆಯಲ್ಲ ● ದೀಪಾವಳಿ ರಜೆಗಳ ಕಾರಣ ಜನಸಂದಣಿ ಹೆಚ್ಚಾಗಿ ಕಾಲ್ತುಳಿತ ಸಂಭವಿಸುವ ಸಾಧ್ಯತೆ ● ರೂ.300, ರೂ.1000 ಟಿಕೆಟ್ ದರ್ಶನದ ಸಾಲು 3–4 ಕಿ.ಮೀ. ಮೀರಿ ಮುಖ್ಯ ರಸ್ತೆಗೆ



ಲತಾ ಕುಮಾರಿ





ಮೊಹಮ್ಮದ್ ಸುಜೀತಾ

ಹಾಸನ, ಅ.19– ಸಾಲು ಸಾಲು ರಜೆ ಹಿನ್ನೆಲೆ ಹಾಸನಾಂಬೆ ದರ್ಶನಕ್ಕೆ ಹೊರ ಜಿಲ್ಲೆಗಳಿಂದ ಬರುತ್ತಿರುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದೆ. ಭಾರೀ ಪ್ರಮಾಣದಲ್ಲಿ ಭಕ್ತಸಾಗರವೇ ಹರಿದುಬರುತ್ತಿದೆ. ಹೀಗಾಗಿ ಜಿಲ್ಲಾಧಿಕಾರಿಗೆ ಜಿಲ್ಲಾ ಎಸ್‌ಪಿ ಪತ್ರ ಬರೆದು ಕಾಲ್ತುಳಿತದ ಅಪಾಯದ ಬಗ್ಗೆ ಮುನ್ನೆಚ್ಚರಿಕೆ ನೀಡಿದ್ದಾರೆ.

ಹೊರ ಜಿಲ್ಲೆಗಳಿಂದ ದರ್ಶನಕ್ಕೆ ಬರುವ ಭಕ್ತರನ್ನು ನಿಯಂತ್ರಿಸಬೇಕು. ವಿಶೇಷ ಬಸ್‌ಗಳನ್ನು ತಡೆಹಿಡಿಯಬೇಕು. ಅನಾಹುತವಾದರೆ ನಾವು ಹೊಣೆಯಲ್ಲ ಎಂದು ಹಾಸನ ಎಸ್‌ಪಿ ಮೊಹಮ್ಮದ್ ಸುಜೀತಾ ಜಿಲ್ಲಾಧಿಕಾರಿ ಲತಾ ಕುಮಾರಿ ಅವರಿಗೆ ಪತ್ರ ಬರೆದಿದ್ದಾರೆ.

ದರ್ಶನಕ್ಕೆ ವ್ಯವಸ್ಥೆ ಮಾಡಿರುವ ಸ್ಥಳಾವಕಾಶ ಕಡಿಮೆ ಇದೆ. ಬ್ಯಾರಿಕೇಡ್ ದಾಟಿ ಸರತಿ ಸಾಲುಗಳು ಮುಂದೆ ಹೋಗುತ್ತಿವೆ. ದೀಪಾವಳಿ ರಜೆಯಲ್ಲೂ ಭಾರಿ ಪ್ರಮಾಣದ ಭಕ್ತರು ಬಂದರೆ ಎಲ್ಲಾ ರೀತಿಯ ಸರತಿ ಸಾಲುಗಳಲ್ಲೂ ನೂಕು ನುಗ್ಗಲಾಗುತ್ತದೆ. ಹೀಗಾಗಿ ಕಾಲ್ತುಳಿತದ ಘಟನೆ ಜರುಗುವ ಅಪಾಯ ಇರುತ್ತದೆ. ಹೀಗಾಗಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ವಿಶೇಷ ಬಸ್‌ಗಳನ್ನು ನಿಯಂತ್ರಿಸಿ ಎಂದು ಪತ್ರ ಬರೆಯಲಾಗಿದೆ.

ಜಿಲ್ಲಾಡಳಿತಕ್ಕೆ ಎಸ್‌ಪಿ ಬರೆದ ಪತ್ರದಲ್ಲಿ ಏನಿದೆ?: ಹಾಸನ ಜಿಲ್ಲಾ ಎಸ್‌ಪಿ ಮೊಹಮ್ಮದ್ ಸುಜಿತಾ ಅವರು ಜಿಲ್ಲಾಧಿಕಾರಿಗೆ ಅ.17ರಂದು ಬರೆದ ಪತ್ರದಲ್ಲಿ, ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಹಾಸನಾಂಬೆ ದರ್ಶನಕ್ಕೆ ಆಗಮಿಸುತ್ತಿದ್ದಾರೆ. ದೇವಸ್ಥಾನದ ಬಳಿ ಸ್ಥಳಾವಕಾಶ ಕಡಿಮೆ ಇದ್ದು, ರೂ.300 ಮತ್ತು ರೂ.1000 ಟಿಕೆಟ್‌ಗಳ ■ 6ನೇ ಪುಟಕ್ಕೆ

ಸಾರಿಗೆ ಬಸ್‌ಗಳ ಸರಣಿ ಅಪಘಾತ: ಇಬ್ಬರು ಮಹಿಳೆಯರ ಸಾವು

ಮಳವಳ್ಳಿ ಬಳಿ ದುರಂತ, 70 ಕ್ಕೂ ಹೆಚ್ಚು ಮಂದಿಗೆ ಗಾಯ



ಮಳವಳ್ಳಿ, ಅ.19–ತಾಲೂಕಿನ ಬಾಚನಹಳ್ಳಿ ಬಳಿ ಸಾರಿಗೆ ಬಸ್‌ಗಳ ನಡುವೆ ಸಂಭವಿಸಿದ ಸರಣಿ ಅಪಘಾತದಲ್ಲಿ ಇಬ್ಬರು ಮಹಿಳೆಯರು ಸಾವನ್ನಪ್ಪಿ, 70ಕ್ಕೂ ಅಧಿಕ ಮಂದಿ ಗಾಯಗೊಂಡಿರುವ ಘಟನೆ ಭಾನುವಾರ ಸಂಜೆ ನಡೆದಿದೆ.

ತಾಲೂಕಿನ ಬಾಚನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ–948ರಲ್ಲಿ ಭಾನುವಾರ ಸಂಜೆ ಕೊಳ್ಳೇಗಾಲ ಕಡೆಯಿಂದ ಬೆಂಗಳೂರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನ ಟೈರ್ ಸ್ಫೋಟಗೊಂಡು ಚಾಲಕನ ನಿಯಂತ್ರಣ ತಪ್ಪಿ ಮಳವಳ್ಳಿಯಿಂದ ಕೊಳ್ಳೇಗಾಲ ಕಡೆಗೆ ಹೋಗುತ್ತಿದ್ದ ಮತ್ತೊಂದು ಸಾರಿಗೆ ಬಸ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ. ■ 6ನೇ ಪುಟಕ್ಕೆ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಅ.31ರವರೆಗೆ ವಿಸ್ತರಣೆ

ಸಮೀಕ್ಷಾ ಕಾರ್ಯದಿಂದ ಶಿಕ್ಷಕರಿಗೆ ಮುಕ್ತಿ, ಇತರೆ ಇಲಾಖೆಯ ಸಿಬ್ಬಂದಿ ಬಳಕೆ




ಸಿದ್ದರಾಮಯ್ಯ

ಬೆಂಗಳೂರು, ಅ.19– ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ (ಜಾತಿವಾರು ಸಮೀಕ್ಷೆ) ಅವಧಿಯನ್ನು ಇದೇ 31ರವರೆಗೆ ವಿಸ್ತರಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ತಿಳಿಸಿದರು. ದಸರಾ ರಜೆ ಕಳೆದು ಶಾಲೆಗಳು ಆರಂಭವಾಗಿರುವ ಕಾರಣ ಮುಂದಿನ ಒಂಬತ್ತು ದಿನ ನಡೆಯಲಿರುವ ಸಮೀಕ್ಷಾ ಕಾರ್ಯದಲ್ಲಿ ಶಿಕ್ಷಕರನ್ನು ಬಳಕೆ ಮಾಡಿಕೊಳ್ಳದಿರಲು ತೀರ್ಮಾನಿಸಲಾಗಿದೆ ಎಂದರು.

ಸಮೀಕ್ಷಕರಿಗೆ 3 ದಿನ ರಜೆ: ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಸಿಬ್ಬಂದಿಗೆ ದೀಪಾವಳಿ ಹಬ್ಬದ ಕಾರಣ ಇದೇ 20, 21 ಮತ್ತು 22ರಂದು ರಜೆ ನೀಡಲಾಗಿದೆ. 23ರಿಂದ ಮತ್ತೆ ಸಮೀಕ್ಷೆ ಆರಂಭವಾಗಲಿದೆ. ಆಯಾ ಜಿಲ್ಲಾಧಿಕಾರಿಗಳು ವಿವಿಧ ಇಲಾಖೆಗಳ ಸಿಬ್ಬಂದಿ ಬಳಸಿಕೊಂಡು ಸಮೀಕ್ಷೆ ಕಾರ್ಯ ಪೂರ್ಣಗೊಳಿಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ■ 6ನೇ ಪುಟಕ್ಕೆ

ಅತಿವೃಷ್ಟಿ: ಕರ್ನಾಟಕಕ್ಕೆ 384 ಕೋಟಿ ಬಿಡುಗಡೆ ಮಾಡಿದ ಕೇಂದ್ರ



ಅಮಿತ್ ಶಾ

ನವದೆಹಲಿ, ಅ.19– ರಾಜ್ಯದಲ್ಲಿ ಅತಿವೃಷ್ಟಿಯಿಂದ ಉಂಟಾಗಿರುವ ಹಾನಿಗೆ 384 ಕೋಟಿ ಬಿಡುಗಡೆ ಮಾಡಲು ಕೇಂದ್ರ ಗೃಹ ಸಚಿವಾಲಯ ಅನುಮೋದನೆ ನೀಡಿದೆ. ಮಹಾರಾಷ್ಟ್ರ ಹಾಗೂ ಕರ್ನಾಟಕಕ್ಕೆ ಅತಿವೃಷ್ಟಿಯಿಂದ ಉಂಟಾಗಿರುವ ಹಾನಿಗೆ ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್) ಅಡಿಯಲ್ಲಿ ಒಟ್ಟು 1,950 ಕೋಟಿ ಮುಂಗಡವಾಗಿ ಬಿಡುಗಡೆ ಮಾಡಲು ಗೃಹ ಸಚಿವ ಅಮಿತ್ ಶಾ ಅನುಮತಿ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನೈರುತ್ಯ ಮುಂಗಾರಿನಲ್ಲಿ ಅತಿವೃಷ್ಟಿ ಹಾಗೂ ಪ್ರವಾಹದಿಂದ ತೊಂದರೆಗೊಳಗಾದ ಜನರಿಗೆ ತಕ್ಷಣ ಪರಿಹಾರ ನೀಡುವ ಸಲುವಾಗಿ ಕರ್ನಾಟಕಕ್ಕೆ ■ 6ನೇ ಪುಟಕ್ಕೆ

ಮೈಸೂರಿನ ಹುಣಸೂರು ತಾಲೂಕಿನ ಕಲ್ಕುಣಿಕೆಯಲ್ಲಿ ಕಳ್ಳತನ

ಎರಡು ದಶಕದ ಹಿಂದಿನ ಬೆರಳಚ್ಚು ಸಂಗ್ರಹದಿಂದ ಖದೀಮನ ಪತ್ತೆ

ಮೈಸೂರು, ಅ.19(ಆರ್‌ಕೆ, ಬಿಎಲ್‌ಯು)– ಕಳೆದ ಎರಡು ದಶಕ (2005) ಹಿಂದೆ ಸಂಗ್ರಹಿಸಲಾಗಿದ್ದ ಆರೋಪಿಯ ಬೆರಳಚ್ಚಿನ ಆಧಾರದ ಮೇಲೆ ಈಗ ಕಳ್ಳತನ ಮಾಡಿರುವ ಖದೀಮನನ್ನು ಪೊಲೀಸರು ಪತ್ತೆ ಹಚ್ಚಿರುವ ಅಪರೂಪದ ಪ್ರಕರಣ ಮೈಸೂರಿನಲ್ಲಿ ನಡೆದಿದೆ. ಹತ್ತಾರು ವರ್ಷ ಕಳೆದರೂ ಪೊಲೀಸರಲ್ಲಿರುವ ಬೆರಳಚ್ಚು ಎಂದಿಗೂ ಮಸುಕಾಗುವುದಿಲ್ಲ ಎಂಬುದನ್ನು ಈ ಪ್ರಕರಣ ಸಾಬೀತುಪಡಿಸುತ್ತದೆ.

ಕಳ್ಳತನ, ಕೊಲೆ, ಅತ್ಯಾಚಾರ ಸೇರಿದಂತೆ ಯಾವುದೇ ಅಪರಾಧ ಕೃತ್ಯ ನಡೆದಾಗ ಅಲ್ಲಿ ದೊರೆಯುವ ಸಾಕ್ಷ್ಯಾಧಾರಗಳನ್ನು ಪೊಲೀಸರು


ಎಷ್ಟೇ ವರ್ಷವಾದರೂ ಬೆರಳಚ್ಚು ಮಸುಕಾಗಲ್ಲ



ಕಲೆ ಹಾಕುತ್ತಾರೆ. ಈ ಮೂಲಕ ಆಧುನಿಕ ತಂತ್ರಜ್ಞಾನದಿಂದ ಆರೋಪಿಗೆ ಕೋಳ ತೊಡಿಸುವ ಸುಲಭ ಮಾರ್ಗವನ್ನು ಪೊಲೀಸರು ಕಂಡುಕೊಂಡಿದ್ದಾರೆ. ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕಿನ ಹೆಬ್ಬಾಳ ಕೊಪ್ಪಲಿನ ರಾಮಕೃಷ್ಣೇಗೌಡರ ಪತ್ನಿ ಬೇಬಿ ಅವರು ಅ.8ರಂದು ಕುಟುಂಬ ಸಮೇತ ಹೊರ ಊರಿಗೆ ಹೋಗಿದ್ದರು. ಅ.11 ರಂದು ಅವರು ಮನೆಗೆ ಹಿಂದಿರುಗಿದ ವೇಳೆ ಕಳ್ಳರು ಮನೆಯ ಬಾಗಿಲು ಮೀಟಿ ಒಳ ನುಗ್ಗಿ, ಮನೆಯೊಳಗಿನ ಕಬ್ಬಿಣದ ಬೀರು ಬಾಗಿಲು ಮೀಟಿ 20 ಸಾವಿರ ರೂ. ನಗದು ಸೇರಿದಂತೆ 7.50 ಲಕ್ಷ ಮೌಲ್ಯದ ಚಿನ್ನಾಭರಣ ದೋಚಿದ್ದರು. ಕಪಾಟು ಮೀಟುವ ಸಂದರ್ಭದಲ್ಲಿ ಅದರ ಮೇಲಿದ್ದ ಕಳ್ಳನ ಬೆರಳಚ್ಚು ಅಥವಾ ■ 6ನೇ ಪುಟಕ್ಕೆ

10 ಪ್ರಕರಣಗಳಲ್ಲಿ ಬೇಕಾಗಿರುವ ಖದೀಮ

ಈಗ ಪತ್ತೆಯಾಗಿರುವ ಆರೋಪಿ 10ಕ್ಕೂ ಹೆಚ್ಚು ಅಪರಾಧ ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾದ ವ್ಯಕ್ತಿಯಾಗಿದ್ದಾನೆ. ಅಡಿಷನಲ್ ಎಸ್ಪಿ ನಾಗೇಶ್ ಅವರು ಆರೋಪಿ ಹರೀಶ್ ಪತ್ತೆಗಾಗಿ ಎರಡು ವಿಶೇಷ ತಂಡ ರಚಿಸಿದ್ದಾರೆ. ಆರೋಪಿ ಹರೀಶ್ ವಾಸ ಮಾಡುತ್ತಿದ್ದ ಕಲ್ಕುಣಿಕೆಗೆ ಭೇಟಿ ನೀಡಿರುವ ಪೊಲೀಸರು ಹಲವು ಮಾಹಿತಿ ಕಲೆ ಹಾಕಿದ್ದಾರೆ. ಪೊಲೀಸರು ಶೀಘ್ರದಲ್ಲೇ ಆರೋಪಿ ಪತ್ತೆ ಮಾಡುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



'ಮೈಸೂರುಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ

ಕೆ.ಬಿ.ಗಣಪತಿ ಸ್ಮರಣಾರ್ಥ ಓಟದ ಸ್ಪರ್ಧೆ

● ನೂರಾರು ವಿದ್ಯಾರ್ಥಿಗಳು ಭಾಗಿ ● ಬಹುಮಾನಗಳ ಕೊಳ್ಳೆ ಹೊಡೆದ ಕುರುಬೂರು ವಿದ್ಯಾರ್ಥಿನಿಯರು





ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ ಸ್ಮರಣಾರ್ಥ ರಸ್ತೆ ಓಟದ ಸ್ಪರ್ಧೆ ನಡೆಸಲಾಯಿತು.

ಮೈಸೂರು, ಅ.19(ಎಂಕೆ)– ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ದಿವಂಗತ ಕೆ.ಬಿ.ಗಣಪತಿ (ಕೆಬಿಜಿ) ಅವರ ಸ್ಮರಣಾರ್ಥ ರಸ್ತೆ ಓಟದ ಸ್ಪರ್ಧೆ ನಡೆಸಲಾಯಿತು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ 1.5 ಕಿಲೋ ಮೀಟರ್ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ 2 ಕಿಲೋ ಮೀಟರ್ ರಸ್ತೆ ಓಟದ ಸ್ಪರ್ಧೆಗೆ ಹಸಿರು ಬಾವುಟ ತೋರುವ ಮೂಲಕ ಚಾಲನೆ ನೀಡಲಾಯಿತು.

ಹಳೆ ಜಿಲ್ಲಾಧಿಕಾರಿ ಕಚೇರಿಯಿಂದ ಆರಂಭವಾದ 2 ಕಿಲೋ ಮೀಟರ್ ಓಟದ ಸ್ಪರ್ಧೆ ಮೈಸೂರು ವಿವಿ ಕ್ರಾಫರ್ಡ್ ಹಾಲ್ ಮುಂದೆ ಸಾಗಿ ಏಕಲವ್ಯ ವೃತ್ತದ ಮೂಲಕ ಕಾಸ್ಮೊಪಾಲಿಟನ್ ಕ್ಲಬ್ ಮಾರ್ಗವಾಗಿ ಜೆಎಲ್‌ಬಿ ರಸ್ತೆ ಮೂಲಕ ಮೆಟ್ರೊಪೋಲ್ ಸರ್ಕಲ್‌ನಿಂದ ಹುಣಸೂರು ರಸ್ತೆ ಕಡೆಗೆ ತಿರುಗಿ, ಎನ್‌ಸಿಸಿ ಕಚೇರಿ ಸಮೀಪದಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಅಂತ್ಯವಾಯಿತು.

ವಿವಿಧ ಶಾಲಾ–ಕಾಲೇಜುಗಳಿಂದ ಅತ್ಯಂತ ಉತ್ಸಾಹದೊಂದಿಗೆ ಭಾಗವಹಿಸಿದ್ದ ನೂರಾರು ವಿದ್ಯಾರ್ಥಿಗಳು, ರಸ್ತೆ ಓಟದಲ್ಲಿ ಹಾಗೂ ಐದು ವರ್ಷದೊಳಗಿನ ಮಕ್ಕಳಿಗಾಗಿ ನಡೆದ 100 ಮೀಟರ್ ಓಟ, ಕಿರಿಯ ಪ್ರಾಥಮಿಕ ಶಾಲೆಯ ಬಾಲಕ–ಬಾಲಕಿಯರಿಗೆ ನಡೆದ 400 ಮೀಟರ್ ಓಟ, ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ಬಾಲಕ–ಬಾಲಕರಿಗೆ 800 ಮೀಟರ್ ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಿ, ಗೆದ್ದು ಬೀಗಿದರು.

2 ಕಿಲೋ ಮೀಟರ್ ರಸ್ತೆ ಓಟ: ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ 2 ಕಿಲೋ ಮೀಟರ್ ಓಟದ ಸ್ಪರ್ಧೆಯಲ್ಲಿ ಕೆ.ಯು.ಓಂಕಾರ್(ಮಹಾಜನ ಪಿಯು ಕಾಲೇಜು) ಪ್ರಥಮ, ವರುಣ್ (ವಿದ್ಯಾ ಜ್ಯೋತಿ ಪಿಯು ಕಾಲೇಜು) ದ್ವಿತೀಯ, ಎಂ.ದಿಲೀಪ್(ವಿವೇಕಾನಂದ ಕಾಲೇಜು) ತೃತೀಯ, ಆರ್.ಸೃಜನ್(ವಿವೇಕಾನಂದ ಕಾಲೇಜು), ಪಿ.ಯಶ್ವಂತ್(ವಿವೇಕಾನಂದ ಕಾಲೇಜು) ಹಾಗೂ ಆರ್.ಕೌಶಿಕ್ (ವಿಜಯ ವಿಠಲ ಕಾಲೇಜು) ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದರೆ ವಿದ್ಯಾರ್ಥಿನಿಯರ ವಿಭಾಗದಲ್ಲಿ ಎನ್.ಮಾನಸ(ಕುರುಬೂರ್ ಕ್ಲಬ್) ಪ್ರಥಮ, ಎಸ್.ಅಂಕಿತ (ಕುರುಬೂರ್ ಕ್ಲಬ್) ದ್ವಿತೀಯ, ದೀಪಶ್ರೀ (ಕುರುಬೂರ್ ಕ್ಲಬ್) ತೃತೀಯ, ಎಂ.ಅನನ್ಯ (ಕುರುಬೂರ್ ಕ್ಲಬ್), ಮಾನಸ (ಕುರುಬೂರ್ ಕ್ಲಬ್) ಹಾಗೂ ಎನ್.ವೈಷ್ಣವಿ (ಮೈಸೂರು) ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದರು.

1.5 ಕಿಲೋ ಮೀಟರ್ ರಸ್ತೆ ಓಟ: ಪ್ರೌಢಶಾಲೆ ವಿದ್ಯಾರ್ಥಿಗಳ 1.5 ಕಿಲೊ ಮೀಟರ್ ರಸ್ತೆ ಓಟದ ಸ್ಪರ್ಧೆಯಲ್ಲಿ ಪಿ.ಲಶಿತ್ ಕಿಶೋರ್(ವಿಜಯ ವಿಠಲ ವಿದ್ಯಾಶಾಲಾ) ಪ್ರಥಮ, ■ 6ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಗುಂಡ : ನನಗಾಗಿ ಪ್ರತಿದಿನ 50ರಿಂದ 60 ಹುಡುಗಿಯರು ಕಾಯ್ತಾ ಇರ್ತಾರೆ ಗೊತ್ತಾ?

ತಿಮ್ಮ : ಎಂಥ ಲಕ್ಕಿ ಮಾರಾಯ ನೀನು. ಅಷ್ಟೊಂದು ಹುಡುಗಿಯರು ನಿನಗಾಗಿ...? ಅದ್ಹೇಗೆ?

ಗುಂಡ : ನಾನು ಕಾಲೇಜ್ ಬಸ್ ಡ್ರೈವರ್!

ಮೈಸೂರು ಮಿತ್ರ

ಸೋಮವಾರ, 20 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಒಳ್ಳೆಯ ಸಮಯಕ್ಕಿಂತ ಒಳ್ಳೆಯ ಮನುಷ್ಯನ ಜೊತೆ ಸಂಬಂಧವಿರಲಿ. ಏಕೆಂದರೆ, ಒಳ್ಳೆಯ ಮನುಷ್ಯ ಒಳ್ಳೆಯ ಸಮಯವನ್ನು ಕೊಡಬಲ್ಲ. ಆದರೆ, ಒಳ್ಳೆಯ ಸಮಯ ಒಳ್ಳೆಯ ಮನುಷ್ಯನನ್ನು ಕೊಡದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾವಿರ ಕುದುರೆ ಸರದಾರ, ಮನೆಯಲ್ಲಿ ಹೆಂಡ್ತಿಗೆ ಪಿಂಜಾರ

ನಿಮ್ಮ ಪತ್ರಗಳು

ನೀರು ಗಂಟಿಗೂ ಸಂಬಳ ಕೊಡಲಾಗದ ಸ್ಥಿತಿ ರಾಜ್ಯ ಸರ್ಕಾರಕ್ಕೆ ಬಂದಿದೆಯೆ?

ಮಾನ್ಯರೆ,

27 ತಿಂಗಳ ಸಂಬಳ ಬಾಕಿಯಾದ ಹಿನ್ನೆಲೆಯಲ್ಲಿ ನೀರುಗಂಟಿ ಚಿಕ್ಕೂಸ ನಾಯಕ ಎಂಬುವರು ನೇಣಿಗೆ ಶರಣಾಗಿರುವ ಹೃದಯ ವಿದ್ರಾವಕ ಘಟನೆ ವರದಿ ಯಾಗಿದ್ದು, ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿದೆ.

ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರೇ,

ಏಕೆ ಸ್ವಾಮಿ ಹೀಗಾಯ್ತು? ತಿಂಗಳಿಗೆ ಕೇವಲ 5000 ರೂಪಾಯಿಗಳ ಸಂಬಳವನ್ನೂ ಒಬ್ಬ ಬಡವ ನೌಕರನಿಗೆ ನಿಮ್ಮ ನೇತೃತ್ವದ ಸರ್ಕಾರದಲ್ಲಿ ಕೊಡಲು ಸಾಧ್ಯವಾಗದೇ ಇರುವಾಗ ನೀವು ಇನ್ನೇನು ಅಭಿವೃದ್ಧಿ ಮಾಡುತ್ತೀರಿ? ನಿಮಗೆ ನಿಮ್ಮ ಕುರ್ಚಿಯೇ ಅಲುಗಾಡುತ್ತಿರುವಾಗ ಬೇರೆ ಚಿಂತನೆಗಳನ್ನು ಮಾಡಲು ಸಾಧ್ಯವೇ?

ಈ ಘಟನೆಯಿಂದ ಈ ಸರ್ಕಾರ ಹೃದಯಹೀನ ಸರ್ಕಾರ ಎಂದು ಮತ್ತೊಮ್ಮೆ ಸಾಬೀತಾಗಿದೆ. ನಿಮ್ಮ ಆಡಳಿತದಲ್ಲಿ ಹಲವಾರು ಸರ್ಕಾರಿ ನೌಕರರಿಗೆ ಬರಲಿರುವ ಸಂತಸದ ದೀಪಾವಳಿ ಹಬ್ಬವು ಅವರ ಬಾಳಿನಲ್ಲಿ ಬೆಳಕನ್ನು ತರದೆ ಕತ್ತಲೆಯ ಕೂಪವಾಗಿ ಪರಿಣಮಿಸಿರುವುದು ಒಂದು ದುರಂತವಾಗಿದೆ. ಚಿಕ್ಕೂಸ ನಾಯಕ ಅವರು ತಮ್ಮ ಅನಾರೋಗ್ಯದ ನಿಮಿತ್ತ ಅವರ ಸೇವಾ ಅವಧಿಯು ಮುಗಿಯುವ ಮುನ್ನವೇ ಸ್ವಯಂ ನಿವೃತ್ತಿಯನ್ನು ಪಡೆದಿದ್ದರು ಎನ್ನಲಾಗಿದೆ.

ನಿಮ್ಮ ಸರ್ಕಾರವು ಆರ್‌ಎಸ್‌ಎಸ್ ಎಂಬ ದೇಶ ಭಕ್ತ ಸಂಘಟನೆಯನ್ನು, ಬೇರೆಯವರ ಮಾತನ್ನು ಕೇಳಿಕೊಂಡು ನಿಷೇಧಿಸಲು ಹೊರಟಿದ್ದೀರಿ. ಈ ಸಂಸ್ಥೆಯ ನಿಷೇಧವನ್ನು ಮಾಡುವುದು ಸಂವಿಧಾನ ವಿರೋಧಿ ನಡೆಯಾಗುತ್ತದೆ ಎಂದು ನಿವೃತ್ತ ನ್ಯಾಯಾಧೀಶರಾದ ಶ್ರೀಯುತ. ಸಂತೋಷ ಹೆಗಡೆಯವರು ಹೇಳಿರುವುದನ್ನು ನೀವು ಗಮನಿಸಿದ್ದೀರಾ!? ಸರ್ಕಾರಿ ಸಂಸ್ಥೆಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸದಸ್ಯರಾಗುವುದು ತಪ್ಪಲ್ಲ ಎಂದು ಅವರು ಹೇಳಿದ್ದಾರೆ. ಹೀಗಿದ್ದರೂ ನೀವು ಮಾತ್ರ ನಿಮ್ಮ ಕುರ್ಚಿ ಭದ್ರ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿರುವುದು ಸುಳ್ಳೇ?

ಇನ್ನಾದರೂ ನೀವು ಇಂತಹ ಕೆಲಸಗಳನ್ನು ಮಾಡುವುದನ್ನು ಬಿಟ್ಟು ರಾಜ್ಯದ ಅಭಿವೃದ್ಧಿ ಕಡೆಗೆ ಗಮನ ನೀಡಲಿ ಎಂದು ರಾಜ್ಯದ ಜನತೆ ಆಶಿಸುತ್ತಿದ್ದಾರೆ. ಆ ದೇವರು ನಿಮಗೆ ಒಳ್ಳೆಯ ಬುದ್ಧಿ ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ.

–ಬೇಲೂರು ದ.ಶಂ.ಪ್ರಕಾಶ್, ಹೊಸಬಂಡಿಕೇರಿ, ಮೈಸೂರು.

ಕಾಡಂಚಿನ ಗ್ರಾಮಗಳ ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಲಿ

ಮಾನ್ಯರೆ,

ಮೈಸೂರು ಜಿಲ್ಲೆಯ ಸರಗೂರು ತಾಲೂಕಿನ ಕಾಡಂಚಿನ ಗ್ರಾಮವಾದ ಬಡಗಲಪುರ ರೈತರೊಬ್ಬರ ಮೇಲೆ ಜಮೀನಿನಲ್ಲಿ ಹುಲಿ ದಾಳಿ ಮಾಡಿರುವಂತಹ ಧಾರುಣ ಘಟನೆ ಸಾರ್ವಜನಿಕರನ್ನು ಬೆಚ್ಚಿಬೀಳಿಸಿದೆ. ಆ ದೃಶ್ಯಗಳನ್ನು ನೋಡುತ್ತಿದ್ದರೆ ಕರುಳು ಚುರುಕ್ ಎನ್ನುತ್ತದೆ. ಮನಸ್ಸು ಭಾರವಾಗುತ್ತದೆ. ಕಣ್ಣಂಚಿನಲ್ಲಿ ನೀರು ಜಿನುಗುತ್ತದೆ. 2 ಕಣ್ಣುಗಳನ್ನು ಕಳೆದುಕೊಂಡು ಮುಖ ವಿಕಾರವಾಗಿ ಅವರ ಜೀವನವೇ ಕುರುಡಾಗಿದೆ. ಕುಟುಂಬದ ರೋದನೆ ಮುಗಿಲು ಮುಟ್ಟಿದೆ. ಸಾರ್ವಜನಿಕರು ಮಮ್ಮಲು ಮರುಗುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕಾಡಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಉಪಟಳವು ಹೆಚ್ಚಾಗಿದ್ದು, ಗ್ರಾಮದ ಜನರು ಭಯಭೀತರಾಗಿ ಬದುಕುವಂತಾಗಿದೆ. ತಮ್ಮ ತಮ್ಮ ಜಮೀನುಗಳಿಗೆ ಕೃಷಿಯ ಕಾರ್ಯ ಚಟುವಟಿಕೆಗಳಿಗೆ ತೆರಳಲು ಭಯ ಪಡುತ್ತಿದ್ದಾರೆ. ಇಂತಹ ಘಟನೆಗಳು ಆಗಾಗ ನಡೆಯುತ್ತಿದ್ದರೂ ಸರ್ಕಾರ ಮಾತ್ರ ಕಣ್ಮುಚ್ಚಿ ಕುಳಿತಿದೆ. ರೈತರ ಕಷ್ಟಗಳು ಒಂದೇ ಎರಡೇ, ಹತ್ತಾರು ಕಷ್ಟಗಳ ನಡುವೆ ನೋವಿನಿಂದ ಬದುಕುತ್ತಿದ್ದಾನೆ. 'ಬಡವನ ಕಷ್ಟ ದವಡೆಗೆ ಮೂಲ' ಎಂಬ ಮಾತಿನಂತೆ ಅವರ ಬವಣೆಗಳನ್ನು ಕೇಳುವವರು ಯಾರು? ಕಷ್ಟಪಟ್ಟು ಸಾಲ ಸೋಲ ಮಾಡಿ ಜಮೀನಿನಲ್ಲಿ ಉತ್ತು ಬಿತ್ತಿ ಬೆವರಿನ ಹನಿಗಳ ಮೂಲಕ ಬೆಳೆಗಳನ್ನು ಬೆಳೆಯಲು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾನೆ. ಬೆಳೆಗಳು ಬಂದಂತಹ ಸಂದರ್ಭದಲ್ಲಿ ಕಾಡು ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಕಷ್ಟವಾಗುತ್ತಿದ್ದು ಅವನನ್ನೇ ಕಾಡು ಪ್ರಾಣಿಗಳು ಬಲಿ ಪಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಇಂತಹ ಸಂದರ್ಭದಲ್ಲಿ ಅಷ್ಟೋ ಇಷ್ಟೋ ಪರಿಹಾರವನ್ನು ರೈತರಿಗೆ ಕೊಟ್ಟು ಸರ್ಕಾರವು ಕೈ ತೊಳೆದುಕೊಳ್ಳುತ್ತಿದೆ. ಕಾಡಂಚಿನ ಗ್ರಾಮದ ರೈತರು ಪ್ರತಿ ನಿತ್ಯ ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದಾರೆ. ಸಾವು ಬದುಕಿನ ಮಧ್ಯೆ ಹೋರಾಟವನ್ನು ನಡೆಸುತ್ತಿದ್ದಾರೆ. ಅರಣ್ಯ ಇಲಾಖೆಯವರು ರೈತರೊಂದಿಗೆ ಅನೇಕ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಬೇಜವಾಬ್ದಾರಿತನವನ್ನು ತೋರುತ್ತಿದೆ ಎಂದು ಅಲ್ಲಿನ ನಿವಾಸಿಗಳು ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. ದಯವಿಟ್ಟು ಕಾಡಂಚಿನ ಗ್ರಾಮದ ರೈತರ ಬದುಕು ಹಸನಾಗಲು ಸರ್ಕಾರವು ಶಾಶ್ವತವಾದ ಪರಿಹಾರವನ್ನು ನೀಡಬೇಕೆಂದು ನನ್ನ ಆಶಯವಾಗಿರುತ್ತದೆ.

–ಎನ್.ಪಿ.,ಪರಶಿವಮೂರ್ತಿ, ನಂಜೀಪುರ, ಸರಗೂರು ತಾಲೂಕು.

ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗಲಿದೆ ಶಿಕ್ಷಣ ಸಚಿವರ ನಿರ್ಧಾರ

ಮಾನ್ಯರೆ,

ಶಿಕ್ಷಣ ಸಚಿವರಾದ ಮಧು ಬಂಗಾರಪ್ಪನವರು ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಬದಲಾವಣೆಯನ್ನು ತಂದಿದ್ದಾರೆ. ಇದರಿಂದ ಶಿಕ್ಷಣದ ಗುಣಮಟ್ಟ ಏರಿಕೆಯಾಗಲು ಹೇಗೆ ಸಾಧ್ಯ. ಸಚಿವರ ಹೇಳಿಕೆಯಂತೆ ಇವರ ಮಾತು ಕೇಳಿ ಕೆಲ ಮಕ್ಕಳು ಕುಣಿದು ಕುಪ್ಪಳಿಸಿದ್ದು ಸತ್ಯ. ಎಸ್‌ಎಸ್‌ಎಲ್‌ಸಿಯಲ್ಲಿ 33 ಪರ್ಸೆಂಟ್ ಸಾಕಂತೆ. ಪಿಯುಸಿಯಲ್ಲಿ ಈ ಪರ್ಸೆಂಟೇಜ್‌ಗೆ ಯಾವ ಕಾಲೇಜಿನಲ್ಲೂ ಸೀಟು ಸಿಗುವುದಿಲ್ಲ. ನಂತರ ಆ ವಿದ್ಯಾರ್ಥಿಗಳ ಭವಿಷ್ಯ ಏನಾಗಬಹುದು. ತೂಕಡಿಸುವವನಿಗೆ ಹಾಸಿಗೆ ಹಾಸಿದಂತಾಗಿದೆ. ವಿದ್ಯಾಭ್ಯಾಸದಲ್ಲಿ ಉನ್ನತಿ ಸಾಧಿಸಿದರೆ ಯೋಚನೆಯ ಮಟ್ಟ ಬೆಳೆದು ಸಮಾಜದ ಅಭಿವೃದ್ಧಿಗೆ ಕಾರಣವಾಗುತ್ತಾನೆ. ಸಮಾಜದ ಒಳಿತನ್ನೆ ಬಯಸುತ್ತಾನೆ. ಆದರೆ ಈ ತರಹದ ಪರ್ಸೆಂಟೇಜ್ ಬಂದರೆ ಮುಂದಿನ ವಿದ್ಯಾಭ್ಯಾಸದಲ್ಲಿ ತೊಡಕು ಅನುಭವಿಸುತ್ತಾನೆ. ಆ ಮಕ್ಕಳ ಭವಿಷ್ಯವೇನು, ಎಲ್ಲರಿಗೂ ಈ ತರಹದ ಯೋಚನೆಗಳು ಶುರುವಾಗಿದೆ. ಇದಕ್ಕೆ ನಿಮ್ಮ ಹೇಳಿಕೆ ಏನು ತಿಳಿಸುತ್ತೀರಾ.

–ಎಂ.ಎಸ್.ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಜ್ಞಾನದ ಬಗ್ಗೆ ಅಹಂಕಾರವಿದ್ದರೆ ಅಹಂಕಾರದ ಬಗ್ಗೆ ಜ್ಞಾನವಿರಲಿ...!

ಕನ್ನಡ ನಾಡಿನ ಹೆಸರಾಂತ ಹಾಸ್ಯ ಸಾಹಿತಿಗಳಾದ ಬೀಚಿ (ರಾಯಸಂ ಭೀಮಸೇನ ರಾವ್) ಅವರು ಮನುಷ್ಯ ಬಹಳ ವಿಚಿತ್ರ, ಅವನಿಗೆ ಜ್ಞಾನದ ಬಗ್ಗೆ ಅಹಂಕಾರವಿದೆ, ಆದರೆ ತನ್ನ ಅಹಂಕಾರದ ಬಗ್ಗೆ ಜ್ಞಾನವಿಲ್ಲ ಎಂಬ ಮಾರ್ಮಿಕವಾದ ನುಡಿಯೊಂದನ್ನು ಹೇಳಿದ್ದಾರೆ. ಹೌದು, ಮನುಷ್ಯ ತನ್ನ ಸುತ್ತಲಿನವರಿಗಿಂತ ಸ್ವಲ್ಪ ವಿಶೇಷತೆಯನ್ನು ಮೈಗೂಡಿಸಿಕೊಂಡಾಗ ಸ್ವಲ್ಪ ಗರ್ವ ಪಡುವುದು ಸಹಜ. ವಿಶೇಷ ಸಾಧನೆ ಮಾಡಿದರಂತೂ ಅಹಂಕಾರದ ಜೊತೆಗೆ Attitude ಸೇರಿಕೊಂಡು ಸಾರ್ವಜನಿಕವಾಗಿ ಅವರ ವರ್ತನೆಯೇ ಬದಲಾಗಿಬಿಡುತ್ತದೆ. ಹಣ, ಖ್ಯಾತಿ, ಅಧಿಕಾರವು ಯೋಗ್ಯತೆ ಮೀರಿ ದೊರಕಿದರೆ ಮನುಷ್ಯನ ಹೃದಯ ಮೌನವಾಗಿಬಿಡುತ್ತದೆ, ಮಿದುಳು ಮಾತನಾಡಲು ಶುರುಮಾಡುತ್ತದೆ, ಅದು ಅಹಂಕಾರದ ಪರಮಾವಧಿಯನ್ನು ಪ್ರದರ್ಶಿಸುತ್ತಿರುತ್ತದೆ.

ಪ್ರತಿಯೊಬ್ಬರದು ಭಿನ್ನ ವ್ಯಕ್ತಿತ್ವ. ಎಲ್ಲರೂ ಒಂದೇ ರೀತಿ ಇರಲು ಸಾಧ್ಯವಿಲ್ಲ, ಆ ರೀತಿ ಇದ್ದರೆ ಅರ್ಥವೂ ಇರುವುದಿಲ್ಲ. ಭಿನ್ನ ಸಾಮರ್ಥ್ಯ ಇರುವುದರಿಂದಲೇ ಈ ಜಗತ್ತು ಇಷ್ಟು ಸುಂದರವಾಗಿರುವುದು. ಜ್ಞಾನ ಸಂಪಾದನೆ ವಿಚಾರದಲ್ಲಿ ಒಬ್ಬೊಬ್ಬರ ಸಾಮರ್ಥ್ಯ ಒಂದೊಂದು ರೀತಿ ಇರುತ್ತದೆ. ಜ್ಞಾನವು ಒಂದು ನದಿಯಾದರೆ, ಅದರಿಂದ ತಮ್ಮ ಶಕ್ತಿ ಹಾಗೂ ಯುಕ್ತಿಗೆ ಅನುಸಾರವಾಗಿ ಅಲ್ಲಿಂದ ನೀರನ್ನು ಮೊಗೆಯುತ್ತಾರೆ. ಒಬ್ಬನೇ ಮನುಷ್ಯ ಒಂದು ನದಿಯ ನೀರನ್ನು ಪೂರ್ತಿಯಾಗಿ ಪಡೆಯಲು ಸಾಧ್ಯವಿಲ್ಲ, ಅಂದರೆ ಪ್ರಪಂಚದ ಎಲ್ಲಾ ಜ್ಞಾನವನ್ನು ಒಂದು ಜೀವಮಾನದಲ್ಲಿ ಒಬ್ಬನೇ ಗಳಿಸಲು ಸಾಧ್ಯವಿಲ್ಲ. 'ಮರಕ್ಕಿಂತ ಮರ ದೊಡ್ಡದಿರುತ್ತದೆ' ಎಂಬ ಮಾತಿನಂತೆ ಜ್ಞಾನದ ವಿಚಾರದಲ್ಲಿಯೂ ಒಬ್ಬರಿಗಿಂತ ಒಬ್ಬರು ಮೇಲೆ ಇದ್ದೇ ಇರುತ್ತಾರೆ. ಅವರನ್ನು ಕಂಡಿಲ್ಲ ಎಂದ ಮಾತ್ರಕ್ಕೆ ತಮಗಿಂತ ಜ್ಞಾನಿಗಳಿಲ್ಲ ಎಂದು ಭಾವಿಸುವುದು ಅಜ್ಞಾನದ ಪರಮಾವಧಿ.

ಇಂದು ಸಮಸ್ಯೆ ಉಂಟಾಗುತ್ತಿರುವುದು ಸಮುದ್ರದ ಕಪ್ಪೆಗಳಿಂದ ಅಲ್ಲ, ಬಾವಿ ಕಪ್ಪೆಗಳಿಂದ. ತಾನೇ ಎಲ್ಲರಿಗಿಂತ ಗ್ರೇಟ್ ಎಂದು ಭಾವಿಸುವವರು ಬಾವಿ ಕಪ್ಪೆಗಳು ಅಷ್ಟೆ. ತುಸು ಸಾಧನೆ ಮಾಡಿ ಬೀಗುವವರಿಗೆ ಅನೇಕ ತೊಂದರೆಗಳು ಉಂಟಾಗುತ್ತವೆ. ಆ ರೀತಿ ಅಹಂಕಾರ ಪಡುವುದರಿಂದ ಅವರ ಮುಂದಿನ ಭವಿಷ್ಯ ಮಂಕಾಗುವ ಸಾಧ್ಯತೆಯೂ ಹೆಚ್ಚು. ಭಾರತದ ಮೊದಲ ಉಪರಾಷ್ಟ್ರಪತಿ ಹಾಗೂ ಶಿಕ್ಷಣ ತಜ್ಞರೂ ಆದ ಸರ್ವಪಲ್ಲಿ ರಾಧಾಕೃಷ್ಣನ್ ಅವರು ನಾವು ಮಾಡುವ ಅಲ್ಪ ಸಾಧನೆಯು, ಮುಂದೆ ಮಾಡಬೇಕಾದ ಬೃಹತ್ ಸಾಧನೆಗೆ ಕುರುಡಾಗಬಾರದು ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ. ಎಷ್ಟೋ ಜನ ಅಲ್ಪಸಾಧನೆಗೆ ತೃಪ್ತರಾಗಿ, ಅದರಿಂದ ಕುರುಡಾಗಿ ಮುಂದೆ ಮಾಡಬಹುದಾದ ದೊಡ್ಡ ಸಾಧನೆಯಿಂದ ವಂಚಿತರಾಗು ತ್ತಾರೆ. ತಮ್ಮ ಭವಿಷ್ಯದ ಸಾಧನೆಗೆ ತಮ್ಮ ಒಣಜಂಭದಿಂದ ತಾವೇ ಕೊಳ್ಳಿ ಇಟ್ಟುಕೊಳ್ಳುತ್ತಾರೆ. ಮನುಷ್ಯನಿಗೆ ಜ್ಞಾನ, ಹಣ, ಖ್ಯಾತಿ ನಿರೀಕ್ಷೆ ಮೀರಿ ಪ್ರಾಪ್ತಿಯಾದಾಗ ಬಾಗಿ ನಡೆದರೆ ಬೆಲೆ ಜಾಸ್ತಿ, ಬೀಗಿ ನಡೆದರೆ ಬೆಲೆ ಕಡಿಮೆ, ನೆಲೆಯೂ ಕಡಿಮೆಯೆ. ದೊಡ್ಡವರು ಎನಿಸಿಕೊಳ್ಳಲು ಬುದ್ಧಿ ವಂತಿಕೆ, ದೊಡ್ಡ ಹುದ್ದೆ, ಹೆಚ್ಚಿನ ಸಂಪತ್ತು ಇದ್ದರೆ ಸಾಲದು, ಹೃದಯವಂತಿಕೆ, ವಿನಯ, ನಮ್ರತೆ, ಕೃತಜ್ಞತೆ ಇರಬೇಕು.

ಯಶಸ್ಸು ತಲೆಗೆ ಹತ್ತಬಾರದು, ಸೋಲು ಹೃದಯ ಹೊಕ್ಕಬಾರದು ಎಂಬ ಮಾತೊಂದಿದೆ. ಸಿನಿಮಾ ಕ್ಷೇತ್ರದಲ್ಲಿ ಬಹುಬೇಗ ಹಣ ಹಾಗೂ ಹೆಸರು ಮಾಡಿದ ಕೆಲವರು ತಮ್ಮ ಅಹಂಕಾರದಿಂದ ಅಷ್ಟೇ ಬೇಗ ಕೆಳಗಿಳಿದಿರುತ್ತಾರೆ. ಆದರೆ ಕೆಲವರು ಮಾತ್ರ ದಶಕಗಳ ಕಾಲ ಯಶಸ್ಸನ್ನು ಕಾಪಾಡಿಕೊಂಡಿದ್ದರೂ, ಎಂದಿಗೂ ಅಹಂಕಾರದಿಂದ ವರ್ತಿಸುವುದಿಲ್ಲ. ಜನರ ಕಣ್ಣಿನಲ್ಲಿ ಬೆಳ್ಳಿ ಪರದೆಯ ಮೇಲೆ ಮಾತ್ರ ಹೀರೋ ಆಗಿ ಕಾಣದೆ ನಿಜ ಜೀವನದಲ್ಲಿಯೂ ಹೀರೋ ಆಗಿ ಕಂಡವರು ಕನ್ನಡ ಚಿತ್ರರಂಗದ ಕರ್ನಾಟಕ ರತ್ನ, ಪದ್ಮಭೂಷಣ ಡಾ.ರಾಜ್‌ಕುಮಾರ್. ನೂರಾರು ಯಶಸ್ವಿ ಚಿತ್ರಗಳನ್ನು ನೀಡಿದರೂ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಅವರಿಗೆ ಸಂದರೂ, ಎಂದೂ ಅಹಂಕಾರಪಡಲಿಲ್ಲ. ಕೇವಲ ನಾಯಕರಾಗಿರದೆ ಗಾಯಕರೂ ಆಗಿದ್ದ ಅವರು ಅಭಿಮಾನಿಗಳನ್ನು ಅನ್ನದಾತರು, ದೇವರು ಎಂದು ಕರೆದು ಇನ್ನೂ ದೊಡ್ಡವರಾದರು. ಅವರಿಗಿದ್ದ ಕಲಾಕ್ಷೇತ್ರದ ಜ್ಞಾನದ ಬಗ್ಗೆಯಾಗಲಿ, ಬಿರುದು ಬಾವಲಿಗಳ ಬಗ್ಗೆಯಾಗಲಿ ಅವರು ಎಂದಿಗೂ ಗರ್ವಪಡಲಿಲ್ಲ. ಅದು ಅವರ ಮೇರು ವ್ಯಕ್ತಿತ್ವ ತೋರುತ್ತದೆ. ಹಾಗೆಯೇ ತಮಿಳುನಾಡಿನ ಸೂಪರ್‌ಸ್ಟಾರ್ ರಜನಿಕಾಂತ್ ಅವರು ತೆರೆ ಮೇಲೆ ಎಷ್ಟೇ ಸ್ಟೈಲ್ ಮಾಡಿದರೂ, ಅಹಂಕಾರದ ಪಾತ್ರಗಳನ್ನು ಮಾಡಿದರೂ, ನಿಜ ಜೀವನದಲ್ಲಿ ಮಾತ್ರ ತಮ್ಮ ಸರಳ, ಸಜ್ಜನಿಕೆಯಿಂದ ಇತರರಿಗೆ ಮಾದರಿಯಾದವರು. ಗುರುಗಳ ಬಗ್ಗೆ, ಆಧ್ಯಾತ್ಮಿಕ ಜಿಜ್ಞಾಸುಗಳ ಬಗ್ಗೆ ಅಪಾರ ಗೌರವ ತೋರುವ ಅವರು ಹಿಮಾಲಯ ಭೇಟಿಗೆ ತೆರಳುವಾಗ ಯಾವುದೇ ಐಷಾರಾಮಿ ಹೋಟೆಲ್ ಮೊರೆ ಹೋಗದೆ ರಸ್ತೆ ಬದಿಯಲ್ಲಿ ತಮ್ಮ ಹಳೆಯ ಸ್ನೇಹಿತರ ಜೊತೆ ಒಡಗೂಡಿ ಊಟತಿಂಡಿ ಮಾಡುವುದು ಅವರ ನಿರಹಂಕಾರವನ್ನು ಬಿಂಬಿಸುತ್ತದೆ. ಈ ಮಹನೀಯರಿಗೆ ತದ್ವಿರುದ್ಧವಾದ ಜೀವನ ನಡೆಸಿದವರು ಹಿಂದಿ ಚಿತ್ರ ರಂಗದ ಸಿನಿತಾರೆ ರಾಜೇಶ್ ಖನ್ನಾ ಅವರು. ಯಶಸ್ಸಿನ ಉತ್ತುಂಗದಲ್ಲಿ ಇದ್ದಾಗ ಸಾವಿರಾರು ಅಭಿಮಾನಿಗಳು ಅವರ ದರ್ಶನಕ್ಕಾಗಿ ಅವರ ಮನೆ ಬಳಿ ಹೋದಾಗ ತುಂಬಾ ಅಹಂಕಾರಿಯಾಗಿ ವರ್ತಿಸುತ್ತಿದ್ದರು, ಆದರೆ ಕೊನೆಗೆ ಅವರ ಅಂತಿಮಯಾತ್ರೆಗೆ ಅಷ್ಟಾಗಿ ಜನರೇ ಇರಲಿಲ್ಲ ಎಂಬುದು ವಿಡಂಬನೆಯಾಗಿ ಕಾಣುತ್ತದೆ. ಶರಣರ ಬಾಳನ್ನು ಮರಣದಲ್ಲಿ ಕಾಣು ಎಂಬ ಶರಣರ ಮಾತು ಇಲ್ಲಿ ಉಲ್ಲೇಖನೀಯ.



> “ ಕನ್ನಡ ಚಿತ್ರರಂಗದ ಕರ್ನಾಟಕ ರತ್ನ, ಪದ್ಮಭೂಷಣ ಡಾ.ರಾಜ್‌ಕುಮಾರ್ ನೂರಾರು ಯಶಸ್ವಿ ಚಿತ್ರಗಳನ್ನು ನೀಡಿದರೂ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಅವರಿಗೆ ಸಂದರೂ ಎಂದೂ ಅಹಂಕಾರ ಪಡಲಿಲ್ಲ. ಕೇವಲ ನಾಯಕರಾಗಿರದೆ ಗಾಯಕರೂ ಆಗಿದ್ದ ಅವರು ಅಭಿಮಾನಿಗಳನ್ನು ಅನ್ನದಾತರು, ದೇವರು ಎಂದು ಕರೆದು ಇನ್ನೂ ದೊಡ್ಡವರಾದರು. ಹಾಗೆಯೇ ತಮಿಳುನಾಡಿನ ಸೂಪರ್‌ಸ್ಟಾರ್ ರಜನಿಕಾಂತ್ ಅವರು ತೆರೆ ಮೇಲೆ ಎಷ್ಟೇ ಸ್ಟೈಲ್ ಮಾಡಿದರೂ, ಅಹಂಕಾರದ ಪಾತ್ರಗಳನ್ನು ಮಾಡಿದರೂ, ನಿಜ ಜೀವನದಲ್ಲಿ ಮಾತ್ರ ತಮ್ಮ ಸರಳ ಜೀವನದಿಂದ ಮಾದರಿಯಾದವರು. ಗುರುಗಳ ಬಗ್ಗೆ, ಆಧ್ಯಾತ್ಮಿಕ ಜಿಜ್ಞಾಸುಗಳ ಬಗ್ಗೆ ಅಪಾರ ಗೌರವ ತೋರುವ ಅವರು ಹಿಮಾಲಯ ಭೇಟಿಗೆ ತೆರಳುವಾಗ ಯಾವುದೇ ಐಷಾರಾಮಿ ಹೋಟೆಲ್ ಮೊರೆ ಹೋಗದೆ ರಸ್ತೆ ಬದಿಯಲ್ಲಿ ತಮ್ಮ ಹಳೆಯ ಸ್ನೇಹಿತರ ಜೊತೆ ಒಡಗೂಡಿ ಊಟತಿಂಡಿ ಮಾಡುವುದು ಅವರ ನಿರಹಂಕಾರ ಬಿಂಬಿಸುತ್ತದೆ.

ವೀಕೆಂಡ್ ವಿಥ್ ರಮೇಶ್ ಎಂಬ ಟಿ.ವಿ.ಶೋ ಒಂದರಲ್ಲಿ ವಿವಿಧ ಕ್ಷೇತ್ರಗಳ ವಿಶೇಷ ಸಾಧಕರನ್ನು ಗುರುತಿಸಿ ವಿಭಿನ್ನ ರೀತಿಯಲ್ಲಿ ಸಂದರ್ಶನ ನಡೆಸಿ ಗೌರವಿಸಲಾಗುತ್ತದೆ. ಆ ಟಿ.ವಿ.ಶೋನಲ್ಲಿ ಕಲೆ, ಸಾಹಿತ್ಯ, ಸಂಗೀತ, ಸಿನಿಮಾ, ರಾಜಕಾರಣ, ಧರ್ಮಕ್ಷೇತ್ರ.... ಹೀಗೆ ಬಹು ಕ್ಷೇತ್ರಗಳ ಸಾಧಕರಿಗೆ ಮನ್ನಣೆ ನೀಡಿ, ಅವರ ಕುಟುಂಬ, ಗುರುಗಳು, ಬಂಧು–ಬಳಗ, ಅವರ ಸಹಪಾಠಿಗಳು, ಆಪ್ತರನ್ನು ಕರೆಯಿಸಿ ಸಾಧಕರ ಕುರಿತಾಗಿ ಮಾತನಾಡಿಸಲಾಗುತ್ತದೆ. ಸಾಧಕರಲ್ಲಿ ಅನೇಕರು ತಮ್ಮ ಬಂಧುಗಳು ಹಾಗೂ ಸ್ನೇಹಿತರನ್ನು ಕಂಡಾಗ ಒಂದು ಅಪ್ಪುಗೆ ನೀಡಿದರೆ, ತಮ್ಮ ಗುರುಗಳನ್ನು ಕಂಡಾಗ ಕುರ್ಚಿಯಿಂದ ಇಳಿದು, ಅವರ ಕಾಲುಮುಟ್ಟಿ ನಮಸ್ಕರಿಸಿದ್ದನ್ನು ಕಾಣಬಹುದು. ಕೆಲವರಂತೂ ಶಿರಸಾಷ್ಟಾಂಗ ನಮಸ್ಕಾರ ಮಾಡಿದ್ದೂ ಉಂಟು. ಅವರಿಗೆ ತಮ್ಮ ಜ್ಞಾನದ ಬಗ್ಗೆ ಅರಿವಿತ್ತು, ಅಹಂಕಾರದ ಬಗ್ಗೆ ಜ್ಞಾನವೂ ಇತ್ತು. ಎಷ್ಟೇ ಸಾಧನೆ ಮಾಡಿದರೂ ಹೆತ್ತವರಿಗೆ ಮಕ್ಕಳು, ಗುರುಗಳಿಗೆ ಶಿಷ್ಯರು ಎಂಬುದನ್ನು ಮರೆತಿರಲಿಲ್ಲ. ಯಾವುದೇ ಬಿಗುಮಾನ ತೋರದೆ ತಮ್ಮ ವಿಧೇಯತೆ ಹಾಗೂ ಕೃತಜ್ಞತೆಯನ್ನು ತೋರಿ ವೀಕ್ಷಕರ ಕಣ್ಣಿನಲ್ಲಿ ಇನ್ನೂ ಮೇರುಸ್ಥಾನಕ್ಕೆ ಹೋದರು.

ಆದರೆ ಕೆಲವು ಸಾಧಕರು ಮಾತ್ರ ತಮ್ಮ ಗುರುಗಳು ತಮ್ಮ ಎದುರಿಗೆ ಬಂದಾಗ ನಮಸ್ಕಾರ ಮಾಡುವುದಿರಲಿ, ಕುರ್ಚಿಯಿಂ ದಲೇ ಕೆಳಗೆ ಇಳಿಯದೆ ಅಗೌರವ ತೋರಿದರು. ಗುರುಗಳೇ ನಮಸ್ಕರಿಸಿದರೂ ಪ್ರತಿಯಾಗಿ ಒಂದು ಕೃತಜ್ಞತೆಯನ್ನು ತೋರಲಿಲ್ಲ. ಇದು ಅವರಿಗೆ ಅವರ ಜ್ಞಾನದ ಬಗ್ಗೆ, ಸ್ಥಾನದ ಬಗ್ಗೆ ಇರುವ ಅಹಂಕಾರವನ್ನು ತೋರುತ್ತದೆ. ಯಶಸ್ಸು ತಲೆಗೆ ಹತ್ತಿದರೆ ಮನುಷ್ಯ ತನ್ನತನವನ್ನೇ ಕಳೆದುಕೊಳ್ಳುತ್ತಾನೆ, ಎಷ್ಟೇ ದೊಡ್ಡ ಸ್ಥಾನಕ್ಕೆ ಏರಿದರೂ ಸಣ್ಣತನ ತೋರುತ್ತಾನೆ ಎಂಬುದಕ್ಕೆ ಇವರು ಸಾಕ್ಷಿಯಾದರು. ಆ ಸಾಧಕರು ಜನರ ಕಣ್ಣಿನಲ್ಲಿ ಸಣ್ಣವರಾದರು.

ಅಹಂಕಾರಕ್ಕೆ ಉದಾಸೀನವೇ ಮದ್ದು ಎಂಬ ನಾಣ್ಣುಡಿಯಂತೆ ಅನೇಕರು ತಮ್ಮ ಅಹಂಕಾರದಿಂದಲೇ ಹಿಂಸೆ ಅನುಭವಿಸಿದ್ದಾರೆ. ಯಶಸ್ಸಿನ ಉತ್ತುಂಗದಲ್ಲಿದ್ದಾಗ ಯಾರನ್ನೂ ಲೆಕ್ಕಿಸದೇ ಬದುಕಿದ ಅವರು ಯಶಸ್ಸಿನ ಶಿಖರದಿಂದ ಕೆಳಗೆ ಇಳಿದಾಗ, ಎಲ್ಲರ ಬಳಿ ಹೋಗಲು ಇವರು ಬಯಸಿದರೂ ಜನ ಇವರ ಬಳಿ ಬರಲು ಬಯಸದೇ ದೂರ ಮಾಡುವುದು ಸಹಜ. ಯಾವುದೂ ಶಾಶ್ವತವಲ್ಲ, ಸ್ಥಾನಮಾನ, ಹಣ, ಅಂತಸ್ತು, ಅಧಿಕಾರ ಎಂಬ ಪಾಠವನ್ನು ಇತಿಹಾಸ ತುಂಬಾ ಚೆನ್ನಾಗಿ ಪಾಠ ಹೇಳಿದ್ದರೂ, ಜನ ಕಲಿಯದೇ ಇರುವುದು ದುರದೃಷ್ಟಕರ. ಇಡೀ ಜಗತ್ತನ್ನೇ ಗೆಲ್ಲುತ್ತೇನೆ ಎಂಬ ಹಠ ಮಾಡಿ ಹೊರಟ ಅಲೆಕ್ಸಾಂಡರ್ ಕೊನೆಗೆ ಬರಿಗೈಯಲ್ಲಿ ಸ್ಮಶಾನದ ಗೋರಿ ಸೇರಿದ್ದಕ್ಕಿಂತ ದೊಡ್ಡ ಪಾಠ ಬೇಕೆ? ಅಹಂಕಾರದಿಂದ ಮೆರೆದ ಇಂತಹ ಚಕ್ರವರ್ತಿಗಳ ಕಥೆ ಅಹಂಕಾರಿಗಳ ಕಣ್ಣು ತೆರೆಸುವಂತೆ ಇದೆ. ಆದರೂ ನಾನು ಎಂಬ ಅಹಂಕಾರ ಕಡಿಮೆಯಾಗದೆ ಇರುವುದು ವಿಪರ್ಯಾಸ. ಅಂದ ಮಾತ್ರಕ್ಕೆ ನಾನು ಎಂಬ ಸ್ವಾಭಿಮಾನ ಮರೆತು ಬದುಕಿ ಅಂತಲ್ಲ, ನಾನು ಎಂಬ ಅಭಿಮಾನ, ನಾನು ಎಂಬ ಹೆಮ್ಮೆ, ನಾನು ಎಂಬ ಸ್ವಾಭಿಮಾನ ಇರಬೇಕೇ ವಿನಃ ನಾನು ಎಂಬ ದುರಭಿಮಾನ, ದುರಹಂಕಾರ ಇರಬಾರದು. ಈ ನಾಡು ಕಂಡ ಶ್ರೇಷ್ಠ ಸಂತರಲ್ಲಿ ತ್ರಿವಿಧ ದಾಸೋಹಿಗಳಾದ ಸಿದ್ಧಗಂಗಾ ಮಠದ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಹಾಗೂ ಸುತ್ತೂರು ಮಠದ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದವರು. ಅನ್ನ, ಅಕ್ಷರ, ಆಶ್ರಯ ನೀಡಿ ಲಕ್ಷಾಂತರ ಕುಟುಂಬಗಳ ಮನೆಯ ಬೆಳಕಾದವರು, ಅವರು ತಾವು ಮಾಡಿದ ಸೇವೆಗೆ ಎಂದು ಬೀಗಲಿಲ್ಲ. ಜ್ಞಾನ ದಾಸೋಹಿಗಳಾದ ವಿಜಯಪುರದ ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳವರು ಜ್ಞಾನ ಭಂಡಾರಿಗಳು. ಲಕ್ಷಾಂತರ ಭಕ್ತರ ಜ್ಞಾನದಾಹವನ್ನು ನೀಗಿದವರು. ಅವರು ಎಂದಿಗೂ ತಮ್ಮ ಜ್ಞಾನದ ಬಗ್ಗೆ ಅಹಂಕಾರಪಡಲಿಲ್ಲ. ಇಂತಹ ಮಹಾತ್ಮರನ್ನು ಕಂಡು ಅಹಂಕಾರಿಗಳು ತಮ್ಮ ವ್ಯಕ್ತಿತ್ವದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಿದೆ. ಎಷ್ಟೇ ವಿದ್ಯಾವಂತರಾ ದರೂ, ಸಂಪತ್ತು ಹೊಂದಿದ್ದರೂ ಸಾಮಾಜಿಕ ಪ್ರಜ್ಞೆ ಇದ್ದರೆ ಮನುಷ್ಯ ಸಹಜವಾಗಿ ವರ್ತಿಸುತ್ತಾನೆ. ಇಲ್ಲವಾದರೆ ಮನುಷ್ಯ ಯಾವ ಕಾಡುಮೃಗಕ್ಕೂ ಕಡಿಮೆ ಏನಿಲ್ಲ. ಏನಂತೀರಿ?

ಹೂರಣ: ಗಳಿಸಿದ ಜ್ಞಾನವು ಮೊದಲು ಅಹಂಕಾರವನ್ನು ಮೆಟ್ಟಿ ನಿಲ್ಲುವುದನ್ನು ಕಲಿಸಬೇಕು.

ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲೂ ಮತಗಳ್ಳತನ

ಸಹಿ ಸಂಗ್ರಹ ಅಭಿಯಾನದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆರೋಪ

ಮೈಸೂರು, ಅ.19(ಜಿಎ)– ಮತಕಳ್ಳತನದಿಂದ ಕೃಷ್ಣರಾಜ ವಿಧಾನಸಭಾ ಕ್ಷೇತ್ರವೂ ಹೊರತಾಗಿಲ್ಲ. 25 ಸಾವಿರ ಕಳ್ಳ ಮತವನ್ನು ಬಿಜೆಪಿ ಸರ್ಕಾರ ಆಡಳಿತವಿದ್ದಾಗ ಸೇರಿಸಿದ್ದಾರೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆರೋಪಿಸಿದರು.

ಮತಗಳ್ಳತನ ಮಾಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ನರೇಂದ್ರ ಮೋದಿ ಸರ್ಕಾರದ ವಿರುದ್ಧ ದೇಶಾದ್ಯಂತ ಕಾಂಗ್ರೆಸ್ ವತಿಯಿಂದ ನಡೆಸುತ್ತಿರುವ ಮತಕಳ್ಳತನ ಸಹಿ ಸಂಗ್ರಹ ಅಭಿಯಾನದ ಅಂಗವಾಗಿ ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕೃಷ್ಣರಾಜ ಮತ್ತು ದೇವರಾಜ ಅರಸು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ವಿದ್ಯಾರಣ್ಯ ಪುರಂನ ಚಾಮುಂಡಿ ವನ(ಸ್ಟರ್ಲಿಂಗ್ ಥಿಯೇಟರ್ ಬಳಿ)ದಲ್ಲಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕಾಂಗ್ರೆಸ್ ಕಾರ್ಯಕರ್ತರು ಮತದಾರರ ಅಂತಿಮ ಪಟ್ಟಿಯನ್ನು ಇಟ್ಟುಕೊಂಡು ಮನೆ ಮನೆಗೆ ತೆರಳಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಶ್ರೀರಾಂಪುರ, ಕುವೆಂಪುನಗರ, ವಿವೇಕಾನಂದರ, ಎಸ್‌ಬಿಎಂ ಬಡಾವಣೆ, ಜೆ.ಪಿ.ನಗರ ಭಾಗದಲ್ಲಿ ಖಾಲಿ ನಿವೇಶನಗಳು, ವಾಸವಿಲ್ಲದ ಮನೆಗಳ ನಂಬರ್‌ಗಳಲ್ಲಿ 10ರಿಂದ 15ಮತಗಳನ್ನು ಸೇರಿಸಿದ್ದರು. ಕೆಲವೊಂದು ಮನೆಗಳಿಗೆ ಸಂಬಂಧ ಇಲ್ಲದಂತಹ ಬಿಜೆಪಿ ಪರ ಇರುವಂತಹ ಮತಗಳನ್ನು ಸೇರಿಸಿದ್ದರು. ಅಂತಹ ಕಳ್ಳ ಮತಗಳನ್ನು ಸಾಕ್ಷಿ ಸಮೇತ ಹುಡುಕಿ ಡಿಸಿ ಗಮನಕ್ಕೆ ತಂದರೂ ಡಿಲೀಟ್ ಮಾಡಲಿಲ್ಲ. ಆ ರೀತಿ ಇನ್ನೂ ಸಹ ಸಾವಿರಾರು ಕಳ್ಳ ಮತಗಳು ಅಲ್ಲಲ್ಲಿ ಉಳಿದಿವೆ. ನಾವು ಈ ರೀತಿ ಪತ್ತೆ ಹಚ್ಚಿ ಡಿಲೀಟ್ ಮಾಡಿಸಲು ಪ್ರಯತ್ನಿಸಿದಾಗ ಬಿಜೆಪಿಯವರು ನಮ್ಮ ಮತವನ್ನು ತೆಗೆಯುತ್ತಿದ್ದಾರೆ ಎಂಬ ನಾಟಕ ಮಾಡುವ ಮೂಲಕ ಸಿಂಪತಿ ಗಿಟ್ಟಿಸುವ ಸಲುವಾಗಿ ಪ್ರಚಾರ ಪಡೆದಿದ್ದರು. ನಮ್ಮ ಕಾರ್ಯಕರ್ತರು ಪ್ರತಿ ಬೂತ್‌ಗಳಲ್ಲಿಯೂ ಕಳ್ಳಮತ ಪತ್ತೆ ಹಚ್ಚಲು ಜಾಗೃತರಾಗಿದ್ದಾರೆ.



ಕೃಷ್ಣರಾಜ ಕ್ಷೇತ್ರದ ಕೃಷ್ಣರಾಜ ಮತ್ತು ದೇವರಾಜ ಅರಸು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ವಿದ್ಯಾರಣ್ಯಪುರಂನ ಚಾಮುಂಡಿವನದ ಬಳಿ ಮತ ಕಳ್ಳತನ ಸಹಿ ಸಂಗ್ರಹ ಅಭಿಯಾನ ನಡೆಯಿತು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಜನಪರ ಕಾಳಜಿ ಇಲ್ಲ. ಅಭಿವೃದ್ಧಿ ಬಗ್ಗೆ ಚಿಂತನೆಯೂ ಇಲ್ಲ. ಕೋಮು ಸಾಮರಸ್ಯವನ್ನು ಕದಡಿ ಧರ್ಮವನ್ನು ಒಡೆದು ಆಳುವುದೇ ಬಿಜೆಪಿ ಸರ್ಕಾರದ ಉದ್ದೇಶ. ಮತಕಳ್ಳತನದ ಮೂಲಕ ಬಿಜೆಪಿ ಪ್ರಜಾಪ್ರಭುತ್ವದ ಕಗ್ಗೊಲೆಗೆ ಕೈ ಹಾಕಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಾಡಿದಂತಹ ಅಧಿಕಾರ ದುರುಪಯೋಗ ಹಿಂದಿನ ಯಾವ ಸರ್ಕಾರಗಳು ಮಾಡಿಲ್ಲ. ಇಡಿ, ಸಿಬಿಐನಂತಹ ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದಲ್ಲದೆ, ಪ್ರಸ್ತುತ ಮತಕಳ್ಳತನದಂತಹ ಸಂವಿಧಾನ ವಿರೋಧಿ ಚಟುವಟಿಕೆಗೆ ಕೈ ಹಾಕಿರುವುದು ನ್ಯಾಯಾಂಗ ವ್ಯವಸ್ಥೆಯನ್ನು ಹಾಳುಗೆಡುವ ತಂತ್ರವಾಗಿದೆ ಎಂದು ಕಿಡಿಕಾರಿದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿಯೂ ಮತಕಳ್ಳತನವನ್ನು ಮುಂದುವರೆಸುವ ಬಿಜೆಪಿ ತಂತ್ರಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಬಿಡುವುದಿಲ್ಲ. ಈಗಾಗಲೇ ದೇಶದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ 5ರಿಂದ 10ಸಾವಿರ ಮತಕಳ್ಳತನ ಮಾಡಿದ್ದು, ಒಂದೊಂದು ಲೋಕಸಭೆ ಕ್ಷೇತ್ರದಲ್ಲೂ 50ಸಾವಿರ ಮತಕಳ್ಳತನ ಮಾಡಿದೆ. ಆ ಮೂಲಕ ದೇಶದಲ್ಲೆಡೆ ಹಲವಾರು ಬಿಜೆಪಿ ಸಂಸದರ ಗೆಲುವಿಗೆ ಸಹಕಾರಿ ಯಾಗಿದೆ. ಇಂತಹ ಮತಕಳ್ಳತನವನ್ನು ತಡೆಗಟ್ಟಲು ಪ್ರತಿ ವಾರ್ಡ್, ಬೂತ್‌ಗಳಲ್ಲಿಯೂ ಕಾಂಗ್ರೆಸ್ ಸಕ್ರಿಯವಾಗಿ ಕೆಲಸ ನಿರ್ವಹಿಸಿ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕಿದೆ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕೃಷ್ಣರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ದೇವರಾಜ ಅರಸು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್‌ಗಳಾದ ಟಿ.ಬಿ. ಚಿಕ್ಕಣ್ಣ, ನಾರಾಯಣ್, ಮಾಜಿ ಉಪ ಮೇಯರ್ ಸಿದ್ದರಾಜು, ಆರ್.ಸಿ.ಜೋಗಿ ಮಹೇಶ್, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಲತಾ ಮೋಹನ್, ಕೆಪಿಸಿಸಿ ಮಾಜಿ ಸದಸ್ಯೆ ವೀಣಾ, ನಾಗರತ್ನ ಮಂಜುನಾಥ್, ಕಮಲ, ಮಲ್ಲಾಜಮ್ಮ, ಪಾಲಿಕೆ ಮಾಜಿ ಸದಸ್ಯರಾದ ಎಂ.ಸುನೀಲ್, ಜೆ.ಗೋಪಿ, ಶೋಭಾ ಸುನೀಲ್, ಆರ್.ಹೆಚ್.ಕುಮಾರ್, ನಿರಾಲ್ ಶಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಭವ್ಯ, ಇಂದಿರಾ, ಜ್ಯೋತಿ, ಲಕ್ಷ್ಮಿ, ಸರಸ್ವತಿ, ಮುಖಂಡರಾದ ಶಂಕರ್ ಬಾಸ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹಮ್ಮದ್ ಫಾರೂಖ್, ಸೋಮು ಕುರುಬಾರಳ್ಳಿ, ಮುಖಂಡರಾದ ವಿಶ್ವನಾಥ್, ವಿಜಯ್‌ಕುಮಾರ್, ರವಿಶಂಕರ್, ಡೈರಿ ವೆಂಕಟೇಶ್, ರಮೇಶ್ ರಾಮಪ್ಪ, ಜಗನ್ನಾಥ್ ಭೋವಿ, ಮಹೇಂದ್ರ ಗೌಡ, ಸಿದ್ಧರಾಮು, ಕೇಬಲ್ ಮಹದೇವು, ಹರವೆ ಸಿದ್ದು, ಯುವ ಕಾಂಗ್ರೆಸ್ ಉಪಾಧ್ಯಕ್ಷ ರಾಕೇಶ್, ನವೀನ್ ಎಂ.ಕೆಂಪಿ, ಲಖನ್, ಹೇಮಾ ಪುಟ್ಟಸ್ವಾಮಿ, ಹೇಮಂತ್‌ಗೌಡ, ಮಲ್ಲೇಶ್ (ಮಲ್ಲ), ಟ್ರೇಡ್ ಕಾಂಗ್ರೆಸ್ ಅಧ್ಯಕ್ಷ ಮದನ್, ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ ಮನೋಜ್ ಪೈ, ರವೀಶ್, ಅರುಣ್ ಗಂಗಾಧರ್, ಅಜಯ್, ಕುಮಾರ್ (ಕುಮ್ಮಿ), ಕಲೀಂ ಷರೀಫ್, ನಾಸೀರ್, ಯೋಗೇಶ್, ರೂಪೇಶ್, ಸೇವಾದಳ ಮೋಹನ್, ರವಿ ಕುರುಬಾರಳ್ಳಿ, ನವೀನ್ ಅಪ್ಪುಗೌಡ, ರಮೇಶ್, ಕಾಳೇಗೌಡ, ವಿವೇಕ್, ಚಿಕ್ಕಲಿಂಗು ಮತ್ತಿತರರು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಸೋಮವಾರ 20 ಅಕ್ಟೋಬರ್ 2025

ಮೋದಿ ಜನ್ಮದಿನ ಪ್ರಯುಕ್ತ ವಾಲಿಬಾಲ್ ಪಂದ್ಯಾವಳಿ



ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಕುವೆಂಪು ಯೂತ್ಸ್ ತಂಡಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಟ್ರೋಫಿ ಹಾಗೂ ಬಹುಮಾನ ವಿತರಿಸಿದರು.

ಮೈಸೂರು, ಅ.19(ಎಸ್‌ಪಿಎನ್)– ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 75ನೇ ಜನ್ಮ ದಿನಾಚರಣೆ ಅಂಗವಾಗಿ ಕುವೆಂಪು ಯೂತ್ಸ್ ವತಿಯಿಂದ ಆಯೋಜಿಸಿದ್ದ ವಾಲಿಬಾಲ್ ಪಂದ್ಯಾವಳಿಯಲ್ಲಿ ಕುವೆಂಪು ಯೂತ್ಸ್ ತಂಡ ಪ್ರಥಮ ಗಳಿಸಿದರೆ, ಮಲೆಮಹದೇಶ್ವರ ತಂಡ ದ್ವಿತೀಯ ಸ್ಥಾನ ಗಳಿಸಿದೆ.

ಈ ಪಂದ್ಯಾವಳಿಯಲ್ಲಿ ಸ್ವಾಮಿ ವಿವೇಕಾನಂದ ತಂಡ ತೃತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಈ ಪಂದ್ಯಾವಳಿಯಲ್ಲಿ ಟೀಂ ಚಾಮುಂಡಿ, ಟೀಂ ಶಿವ, ಕುವೆಂಪು ತಂಡಗಳನ್ನು ಭಾಗವಹಿಸಿ ಪರಾಜಯಗೊಂಡವು. ವಿಜೇತ ತಂಡಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಬಹುಮಾನ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಕುವೆಂಪುನಗರ ಸಮಸ್ಯೆಗಳಿಗೆ ಸದಾ ಸ್ಪಂದಿಸುತ್ತೇನೆ. ಈ ಕ್ರೀಡಾಂಗಣ ಅಭಿವೃದ್ಧಿ ನನ್ನ ಶಾಸಕ ನಿಧಿಯಿಂದ ಒಟ್ಟು 10 ಲಕ್ಷ ಅನುದಾನ ಬಿಡುಗಡೆಗೊಳಿಸುತ್ತೇನೆ. ಈ ಅನದಾನ ಕ್ರೀಡಾಂಗಣದ ಸಮಗ್ರ ಅಭಿವೃದ್ಧಿಗೆ ಸಹಾಯವಾಗಲಿದೆ ಎಂದರು.

ಕುವೆಂಪುನಗರ ವ್ಯಾಪ್ತಿಯಲ್ಲಿ ಕ್ರೀಡಾಂಗಣಗಳ ಕೊರತೆಯಿದ್ದು, ಈ ಕ್ರೀಡಾಂಗಣದ ಅಭಿವೃದ್ಧಿಯಿಂದ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯಲಿದೆ ಎಂದರು. ಈ ವೇಳೆ ಕುವೆಂಪು ಯೂತ್ಸ್‌ನ ಗೋಕುಲ್ ಗೋವರ್ದನ್, ಜಯರಾಂ, ಹೇಮಂತ್, ಸುಮಿತ್ರ, ರೂಪ, ನಾಗೇಶ್, ನಾಗರಾಜು, ಮುಂತಾದವರು.

ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಮಹಿಳೆ ಕಣ್ಣಿಗೆ ಖಾರದ ಪುಡಿ ಎರಚಿ ಸರ ಅಪಹರಣ

ಮೈಸೂರು, ಅ.19(ಎಸ್‌ಬಿಡಿ)– ಸ್ಕೂಟರ್‌ನಲ್ಲಿ ಬರುತ್ತಿದ್ದ ಮಹಿಳೆ ಕಣ್ಣಿಗೆ ಖಾರದಪುಡಿ ಎರಚಿ, ಚಿನ್ನದ ಸರ ಕಿತ್ತುಕೊಂಡು ಹೋಗಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಲಲಿತಾದ್ರಿಪುರ ಹಾಗೂ ಆಲನಹಳ್ಳಿ ಸಂರ್ಕಿಸುವ ಕಚ್ಚಾ ರಸ್ತೆಯಲ್ಲಿ ಶನಿವಾರ ಬೆಳಗ್ಗೆ ಈ ಘಟನೆ ನಡೆದಿದ್ದು, ಗಿರಿದರ್ಶಿನಿ ಬಡಾವಣೆಯ ನಿವಾಸಿ ಸಿ.ಸೌಮ್ಯಾ(39) ಅವರ ಚಿನ್ನದ ಸರದ ಭಾಗಾರ್ಧ ಖದೀಮನ ಪಾಲಾಗಿದೆ.

ಸೌಮ್ಯಾ ಅವರು ಸ್ಕೂಟರ್‌ನಲ್ಲಿ ತಮ್ಮ ಮಗ ಹಾಗೂ ತಂಗಿಯ ಮಗನನ್ನು ಲಲಿತಾದ್ರಿಪುರದ ಖಾಸಗಿ ಶಾಲೆಗೆ ಬಿಟ್ಟು, ಕಚ್ಚಾ ರಸ್ತೆಯಲ್ಲಿ ಮನೆಗೆ ವಾಪಸ್ಸಾಗುವಾಗ ಖದೀಮನೊಬ್ಬ ಅವರ ಕಣ್ಣಿಗೆ ಖಾರದಪುಡಿ ಎರಚಿದ್ದಾನೆ. ಪರಿಣಾಮ ಸೌಮ್ಯಾ ಸ್ಕೂಟರ್‌ನೊಂದಿಗೆ ಕೆಳಗೆ ಬಿದ್ದಿದ್ದಾರೆ. ತಕ್ಷಣ ಖದೀಮ ಚಿನ್ನದ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾನೆ. ಆದರೆ ಎಚ್ಚೆತ್ತುಕೊಂಡ ಸೌಮ್ಯಾ, ಸರವನ್ನು ಬಿಗಿಯಾಗಿ ಹಿಡಿದುಕೊಂಡಿದ್ದಾರೆ. ಆದರೂ ಬಿಡದ ಖದೀಮ ಸರವನ್ನು ಜೋರಾಗಿ ಎಳೆದಿದ್ದರಿಂದ ಅದು ತುಂಡಾಗಿದೆ. ಒಟ್ಟು 45 ಗ್ರಾಂ ಚಿನ್ನದ ಸರದಲ್ಲಿ 20 ಗ್ರಾಂನಷ್ಟು ಭಾಗ ಖದೀಮನ ಕೈಸೇರಿದ್ದು, ತಕ್ಷಣ ಆತ ಸ್ಥಳದಿಂದ ಪರಾರಿಯಾಗಿದ್ದಾನೆ.

ಕೆಲ ಹೊತ್ತಿನ ಬಳಿಕ ಸುಧಾರಿಸಿಕೊಂಡು ಸೌಮ್ಯಾ ಅವರು, ಮನೆಯವರಿಗೆ ವಿಷಯ ತಿಳಿಸಿದ ನಂತರ ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಸ್ಥಳ ಪರಿಶೀಲನೆ ನಡೆಸಿರುವ ಪೊಲೀಸರು, ಖದೀಮನ ಬಂಧನಕ್ಕೆ ಶೋಧ ಕಾರ್ಯ ಮುಂದುವರೆಸಿದ್ದಾರೆ.

ಮೊದಲ ಏಕದಿನ ಪಂದ್ಯ: ಭಾರತ ವಿರುದ್ಧ ಆಸೀಸ್‌ಗೆ ಸುಲಭ ಗೆಲುವು



ಮಿಚೆಲ್ ಸ್ಟಾರ್ಕ್‌ಗೆ ವಿಕೆಟ್ ಒಪ್ಪಿಸಿ ಹೊರನಡೆಯುತ್ತಿರುವ ವಿರಾಟ್ ಕೊಹ್ಲಿ. ಮತ್ತೊಂದು ಚಿತ್ರದಲ್ಲಿ ಆಸೀಸ್ ಆಟಗಾರರ ಸಂಭ್ರಮ

ಪರ್ತ್, ಅ.19(ವಿವಿಹೆಚ್)– ಭಾರತ ಹಾಗೂ ಆಸ್ಟ್ರೇಲಿಯಾ ನಡುವಣ ಮೊದಲ ಏಕದಿನ ಪಂದ್ಯದಲ್ಲಿ ಪಾರುಪತ್ಯ ಸಾಧಿಸಿದ ಅತಿಥೇಯ ಆಸ್ಟ್ರೇಲಿಯಾ ತಂಡಕ್ಕೆ 7 ವಿಕೆಟ್‌ಗಳ ಅಂತರದ ನಿರಾಯಾಸ ಗೆಲುವು ದಕ್ಕಿತು.

ಇಲ್ಲಿನ ಪರ್ತ್ ಕ್ರೀಡಾಂಗಣ ದಲ್ಲಿ ನಡೆದ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದ್ದರಿಂದ ಪಂದ್ಯವನ್ನು ತಲಾ 26 ಓವರ್‌ಗಳಿಗೆ ಇಳಿಸಲಾಯಿತು. ದಿಗ್ಗಜ ಬ್ಯಾಟರ್‌ಗಳ ವೈಫಲ್ಯದಿಂದ 9 ವಿಕೆಟ್ ನಷ್ಟಕ್ಕೆ ಭಾರತ ಕೇವಲ 136 ರನ್ ಗಳಿಸಿತು. ಡಕ್ವರ್ಥ್ ನಿಯಮದನ್ವಯ ಆಸೀಸ್‌ಗೆ 131 ರನ್ ಗುರಿ ನಿಗದಿಪಡಿಸಲಾಯಿತು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಆಸೀಸ್ 21.1 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 131 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಆ ಮೂಲಕ ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ 1–0 ಅಂತರದಿಂದ ಮುನ್ನಡೆ ಸಾಧಿಸಿತು.

ಈ ಹಿಂದೆ ಟೀಂ ಇಂಡಿಯಾವನ್ನು ಕಾಡಿದ್ದ ಟ್ರಾವಿಸ್ ಹೆಡ್ 8, ಮ್ಯಾಥ್ಯೂ ಶಾರ್ಟ್ 8 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಜೊತೆಯಾದ ನಾಯಕ ಮಿಚೆಲ್ ಮಾರ್ಷ್ ಔಟಾಗದೇ 46(52 ಎಸೆತ), ಜೋಸ್ ಫಿಲಿಪ್ 37(29) ತಂಡದ ಗೆಲುವಿಗೆ ಸಹಕರಿಸಿದರು. ಮ್ಯಾಥ್ಯೂ ರೆನ್ಷಾ 21(24) ರನ್ ಗಳಿಸಿ ನಾಟ್‌ಔಟ್ ಆಗಿ ಉಳಿದು ತಂಡಕ್ಕೆ ಗೆಲುವು ತಂದುಕೊಟ್ಟರು.

ಟೀಂ ಇಂಡಿಯಾ ಪರ ಅರ್ಶದೀಪ್ ಸಿಂಗ್, ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ತಲಾ ಒಂದೊಂದು ವಿಕೆಟ್ ಪಡೆದರು.

ನಡೆಯದ ರೋಹಿತ್–ಕೊಹ್ಲಿ ಆಟ: ಇನ್ನು ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡಕ್ಕೆ ನಿರೀಕ್ಷಿತ ಆರಂಭ ಸಿಗಲಿಲ್ಲ. ಚಾಂಪಿಯನ್ಸ್ ಟ್ರೋಫಿ ಬಳಿಕ ಇದೇ ಮೊದಲ ಬಾರಿಗೆ ಬ್ಯಾಟಿಂಗ್ ಮಾಡಿದ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ನಿರಾಸೆ ಮೂಡಿಸಿ ಹೊರನಡೆದರು.

ರೋಹಿತ್ ಶರ್ಮಾ 14 ಎಸೆತಗಳಲ್ಲಿ 8 ರನ್ ಗಳಿಸಿ ಹೆಜಲ್‌ವುಡ್‌ಗೆ ವಿಕೆಟ್ ಒಪ್ಪಿಸಿ ಹೊರ ನಡೆದರೇ, ವಿರಾಟ್ ಕೊಹ್ಲಿ 8 ಎಸೆತಗಳಲ್ಲಿ ಶೂನ್ಯ ಸಂಪಾದಿಸಿ ಪೆವಿಲಿಯನ್‌ಗೆ ಹಿಂತಿರುಗಿದರು. ನಾಯಕ ಗಿಲ್(10), ಶ್ರೇಯಸ್ ಅಯ್ಯರ್(11), ವಾಷಿಂಗ್ಟನ್ ಸುಂದರ್ (10) ರನ್ ಗಳಿಸಲು ಪರದಾಡಿದರು.

ಈ ವೇಳೆ ಒಂದಾದ ಅಕ್ಷರ್ ಪಟೇಲ್ ಹಾಗೂ ಕನ್ನಡಿಗ ಕೆ.ಎಲ್.ರಾಹುಲ್ ತಂಡದ ಮೊತ್ತ ನೂರರ ಗಡಿ ದಾಟಲು ಸಹಕರಿಸಿದರು. ಅಕ್ಷರ್ 38 ಎಸೆತಗಳಲ್ಲಿ 31 ರನ್ ಬಾರಿಸಿದರೆ, ಕೆ.ಎಲ್.ರಾಹುಲ್ 31 ಎಸೆತ ಎದುರಿಸಿ 2 ಬೌಂಡರಿ, 2 ಸಿಕ್ಸರ್ ಸಹಿತ 38 ರನ್ ಕಲೆಹಾಕಿ ಅಲ್ಪ ಹೋರಾಟ ನೀಡಿದರು. ಕೊನೆಯಲ್ಲಿ ನಿತೀಶ್ ರೆಡ್ಡಿ ಔಟಾಗದೇ 19(11) ರನ್ ಗಳಿಸಿದರು.

ಆಸೀಸ್ ಪರ ಮ್ಯಾಥ್ಯೂ ಕೂನೆಮನ್ ಮಿಚೆಲ್ ಓವನ್ ಹಾಗೂ ಹೆಜಲ್‌ವುಡ್ ತಲಾ ಎರಡು ವಿಕೆಟ್, ನಥನ್ ಎಲ್ಲಿಸ್ ಮತ್ತು ಮಿಚೆಲ್ ಸ್ಟಾರ್ಕ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಮಿಚೆಲ್ ಮಾರ್ಷ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕೆ.ಎನ್. ಗೋವಿಂದಾಚಾರ್ ನಿಧನ



ಮೈಸೂರು, ಅ.19– ಮೈಸೂರಿನ ನಜರ್‌ಬಾದ್ ನಿವಾಸಿ ಜ್ಯೋತಿಷಿ ಕೆ.ಎನ್ ಗೋವಿಂದಾಚಾರ್(90) ಭಾನುವಾರ ಕೆ.ಆರ್ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗು ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಚಿನ್ನಬೆಳ್ಳಿ ಕೆಲಸಗಾರರ ಸಂಘದ ಅಧ್ಯಕ್ಷ ಗೋಲ್ಡನ್ ಸುರೇಶ್ ಹಾಗೂ ಲಯನ್ ಪ್ರವೀಳ ಸಂತಾಪ ಸೂಚಿಸಿದ್ದಾರೆ.

ದೀಪಾವಳಿ ಹಬ್ಬದ ಪ್ರಯುಕ್ತ ಸಾಲು ರಜೆ

ಸಾಂಸ್ಕೃತಿಕ ನಗರಿ ಮೈಸೂರಿಗೆ ಪ್ರವಾಸಿಗರ ಲಗ್ಗೆ

ಇನ್ನು ಮೂರ್‍ನಾಲ್ಕು ದಿನ ಮೈಸೂರಲ್ಲಿ ಪ್ರವಾಸಿಗರ ದಿಬ್ಬಣ



ಮೈಸೂರು ಅರಮನೆಗೆ ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದ್ದರು.



ಮೃಗಾಲಯ ವೀಕ್ಷಣೆಗಾಗಿ ಒಳ ಹೋಗುತ್ತಿರುವ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು.

ಮೈಸೂರು,ಅ.19(ಪಿಎಂ)– ದೀಪಾವಳಿ ಪ್ರಯುಕ್ತ ಸಾಲು ಸಾಲು ರಜೆ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿಗೆ ಪ್ರವಾಸಿಗರು ಲಗ್ಗೆ ಇಟ್ಟಿದ್ದು, ಮೈಸೂರು ಅರಮನೆ ಸೇರಿದಂತೆ ನಗರದ ಪ್ರವಾಸಿ ಸ್ಥಳಗಳಲ್ಲಿ ಭಾನುವಾರ ಜನ ದಟ್ಟಣೆ ಕಂಡುಬಂದಿತು.

ಭಾನುವಾರದ ರಜೆ ಜೊತೆಗೆ ಸೋಮವಾರ ನರಕ ಚತುರ್ದಶಿ ಹಾಗೂ ಬುಧವಾರ ಬಲಿಪಾಡ್ಯಮಿ ಹಿನ್ನೆಲೆಯಲ್ಲಿ ಸರ್ಕಾರಿ ರಜೆ ಇದೆ. ಮಂಗಳವಾರ ಒಂದು ದಿನ ರಜೆ ಹಾಕಿಕೊಂಡರೆ, ಒಟ್ಟಾರೆ ನಾಲ್ಕು ದಿನಗಳು ಪ್ರವಾಸಕ್ಕೆ ಯೋಜನೆ ಮಾಡಿಕೊಳ್ಳುವ ಅವಕಾಶವಿರುವ ಕಾರಣ ಅದರಂತೆ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನ ಮೈಸೂರಿಗೆ ಆಗಮಿಸಿದ್ದಾರೆ. ಇನ್ನೂ ಮೂರ್‍ನಾಲ್ಕು ದಿನಗಳು ಮೈಸೂರಿನಲ್ಲಿ ಪ್ರವಾಸಿಗರ ದಿಬ್ಬಣ ಮುಂದುವರೆಯಲಿದೆ.

ಮೈಸೂರು ಅರಮನೆ, ಮೃಗಾಲಯ, ದಸರಾ ವಸ್ತು ಪ್ರದರ್ಶನ ಸೇರಿದಂತೆ ನಗರದ ಪ್ರವಾಸಿ ತಾಣಗಳಲ್ಲಿ ಭಾನುವಾರ ಜನದಟ್ಟಣೆ ಇದ್ದಿತು. ಇದೇ ರೀತಿಯ ದಟ್ಟಣೆ ಬುಧವಾರದವರೆಗೂ ಕಂಡು ಬರಲಿದೆ. ಪ್ರವಾಸಿಗರು, ಸ್ಥಳೀಯರು ಹಾಗೂ ನೆರೆ ಜಿಲ್ಲೆಯವರು ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ ಹಿನ್ನೆಲೆಯಲ್ಲಿ ಕೆಆರ್ ವೃತ್ತ ಸೇರಿದಂತೆ ನಗರ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿಯೂ ವಾಹನ ದಟ್ಟಣೆ ಇದ್ದಿತು. ವಾಹನ ನಿಲುಗಡೆ ಸ್ಥಳಗಳಲ್ಲಿಯೂ ವಾಹನಗಳ ಹೆಚ್ಚಿನ ಸಂಖ್ಯೆಯಲ್ಲಿ ಗೋಚರಿಸಿದವು.

ಶಾಲೆಗಳು ಹಾಗೂ ಕಚೇರಿಗಳಿಗೆ ದೀಪಾವಳಿ ರಜೆ ಇರುವ ಕಾರಣ ಕುಟುಂಬ ಸಮೇತರಾಗಿ ಪ್ರವಾಸಿಗರು ಮೈಸೂರಿನತ್ತ ಮುಖ ಮಾಡಿದ್ದಾರೆ. ಜೊತೆಗೆ ಯುವ ಜನರು ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳು ಸಹ ಪ್ರವಾಸಕ್ಕಾಗಿ ಮೈಸೂರಿಗೆ ಆಗಮಿಸಿದ್ದಾರೆ. ಅದೇ ರೀತಿ ಮೈಸೂರು ಜಿಲ್ಲೆ ಹಾಗೂ ನೆರೆ ಜಿಲ್ಲೆಯ ಪ್ರವಾಸಿ ತಾಣಗಳಿಗೂ ಇನ್ನು ನಾಲ್ಕು ದಿನಗಳು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಲಿದ್ದಾರೆ.

ಭಾನುವಾರ ಚಾಮುಂಡಿಬೆಟ್ಟಕ್ಕೂ ಹೆಚ್ಚಿನ ಭಕ್ತಾದಿಗಳು ಭೇಟಿ ನೀಡಿ ತಾಯಿ ಚಾಮುಂಡೇಶ್ವರಿ ದರ್ಶನದೊಂದಿಗೆ ಬೆಟ್ಟದ ಪ್ರಾಕೃತಿಕ ಸೌಂದರ್ಯ ಕಣ್ತುಂಬಿಕೊಂಡಿದ್ದಾರೆ. ದಸರಾ ವಸ್ತು ಪ್ರದರ್ಶನ ವೀಕ್ಷಣೆಗೂ ಶನಿವಾರ ಹಾಗೂ ಭಾನುವಾರ 20 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಜನ ಭೇಟಿ ನೀಡಿದ್ದರು.

15,903 ಮಂದಿ ಅರಮನೆಗೆ ಭೇಟಿ: ಅ.18ರ ಶನಿವಾರಕ್ಕೆ ಹೋಲಿಸಿದರೆ ಅ.19ರ ಭಾನುವಾರದಂದು ಅರಮನೆ ಹಾಗೂ ಮೃಗಾಲಯಕ್ಕೆ ಭೇಟಿ ನೀಡಿದ್ದವರ ಸಂಖ್ಯೆ ಹೆಚ್ಚಳಗೊಂಡಿತ್ತು. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಅವರು, 8,234 ಹಿರಿಯರು, 1,008 ಮಕ್ಕಳು, ವಿದೇಶಿಗರು ಹಾಗೂ ಅವರ ಮಕ್ಕಳು ಸೇರಿದಂತೆ ಅ.18ರ ಶನಿವಾರ 10,406 ಮಂದಿ ಅರಮನೆಗೆ ಭೇಟಿ ನೀಡಿದ್ದರು. ಭಾನುವಾರ (ಅ.19) 15,903 ಮಂದಿ ಭೇಡಿ ನೀಡಿದ್ದಾರೆ. ಈ ಪೈಕಿ 13,690 ಹಿರಿಯರು, 2,017 ಮಕ್ಕಳು, 190 ವಿದೇಶಿಗರು ಹಾಗೂ ಅವರ ವಿದೇಶಿ ಮಕ್ಕಳು ಒಳಗೊಂಡಿದ್ದಾರೆ. ವಿಐಪಿ ಹೊರತಾಗಿ ಎರಡು ದಿನಗಳಲ್ಲಿ ಇಷ್ಟು ಸಂಖ್ಯೆಯಲ್ಲಿ ಅರಮನೆ ವೀಕ್ಷಣೆ ಮಾಡಲಾಗಿದೆ ಎಂದು ಹೇಳಿದರು.

20,738 ಮಂದಿ ಮೃಗಾಲಯಕ್ಕೆ ಭೇಟಿ: 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷಾ ಅವರು ಮಾತನಾಡಿ, ಮೃಗಾಲಯಕ್ಕೆ ಶನಿವಾರ (ಅ.18) 13,256 ಮಂದಿ ಭೇಟಿ ನೀಡಿದ್ದರು. ಇಂದು (ಅ.19) 20,738 ಮಂದಿ ಮೃಗಾಲಯಕ್ಕೆ ಭೇಟಿ ನೀಡಿದ್ದಾರೆ. ದೀಪಾವಳಿ ರಜೆ ಹಿನ್ನೆಲೆಯಲ್ಲಿ ಬುಧವಾರದವರೆಗೂ ಇದೇ ರೀತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಮೃಗಾಲಯಕ್ಕೆ ಭೇಟಿ ನೀಡುವ ಸಾಧ್ಯತೆ ಹೆಚ್ಚಿದೆ ಎಂದು ಮಾಹಿತಿ ನೀಡಿದರು.

ದಸರಾ ಮನೆ ಮನೆ ಗೊಂಬೆ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ



ದಸರಾ ಪ್ರಯುಕ್ತ ಹೆಚ್.ವಿ.ರಾಜೀವ ಸ್ನೇಹ ಬಳಗ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ದಸರಾ ಮನೆ ಮನೆ ಗೊಂಬೆ ಸ್ಪರ್ಧೆ'ಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಅ.19(ಎಸ್‌ಬಿಡಿ)– ದಸರಾ ಪ್ರಯುಕ್ತ ಹೆಚ್.ವಿ.ರಾಜೀವ ಸ್ನೇಹ ಬಳಗ, ವಿಪ್ರ ಮಹಿಳಾ ಸಂಗಮ ಮತ್ತು ಕೃಷ್ಣ ಕಾಲಿಂಗ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ದಸರಾ ಮನೆ ಮನೆ ಗೊಂಬೆ ಸ್ಪರ್ಧೆ'ಯ ಬಹುಮಾನ ವಿತರಣಾ ಸಮಾರಂಭವು ಕುವೆಂಪುನಗರದ ಪ್ರಮತಿ ವಿದ್ಯಾ ಸಂಸ್ಥೆಯಲ್ಲಿ ಭಾನುವಾರ ನಡೆಯಿತು.

ಹೆಚ್.ವಿ.ರಾಜೀವ್ ಅವರು ನಿಯೋಜಿಸಿದ್ದ ತಂಡಗಳು ದಸರಾ ಗೊಂಬೆ ಕೂರಿಸಿದ್ದ 150ಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಿ, ಅತ್ಯುತ್ತಮ ರೀತಿಯಲ್ಲಿ ಅಚ್ಚುಕಟ್ಟಾಗಿ ದಸರಾ ಗೊಂಬೆ ಕೂರಿಸಿದ್ದವರನ್ನು ಕಿರುಪಟ್ಟಿ ಮಾಡಿದ್ದವು. ಅದರಲ್ಲಿ ಶ್ರೀಮತಿ ಗೀತಾ ಶ್ರೀಹರಿ ಪ್ರಥಮ, ಶ್ರೀಮತಿ ವಿ. ಆರ್.ಪಾರ್ವತಿ ದ್ವಿತೀಯ ಹಾಗೂ ಶ್ರೀಮತಿ ಹೇಮಲತಾ ಕುಮಾರಸ್ವಾಮಿ ತೃತೀಯ ಬಹುಮಾನ ಪಡೆದಿದ್ದು, ಇವರಿಗೆ ಕ್ರಮವಾಗಿ 25 ಸಾವಿರ, 15 ಸಾವಿರ ಹಾಗೂ 10 ಸಾವಿರ ನಗದು ಬಹುಮಾನ ನೀಡಿ, ಅಭಿನಂದಿಸಲಾಯಿತು.


ಇದರೊಂದಿಗೆ ವಿಶೇಷವಾಗಿ 65 ವರ್ಷ ಮೇಲ್ಪಟ್ಟ ಏಳು ಮಂದಿ ಹಿರಿಯರಿಗೆ ತಲಾ 5 ಸಾವಿರ, ಸುಮಾರು 25 ಜನರಿಗೆ ತಲಾ 1 ಸಾವಿರ ಹಾಗೂ 17 ಮಂದಿಗೆ 500 ರೂ. ಬಹುಮಾನ ನೀಡಿ, ಪ್ರೋತ್ಸಾಹಿಸಲಾಯಿತು. ಅಲ್ಲದೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಪ್ರಮಾಣ ಪತ್ರ ವಿತರಿಸಿ, ಪ್ರಶಂಸಿಸಲಾಯಿತು.

ಸಮಾರಂಭದಲ್ಲಿ ಕಾರ್ಯಕ್ರಮದ ರೂವಾರಿಯಾದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಆಕಾಶವಾಣಿ ನಿವೃತ್ತ ಮಹಾನಿರ್ದೇಶಕಿ ಡಾ.ವಿಜಯಹರನ್, ನೃತ್ಯಾಲಯ ಟ್ರಸ್ಟ್‌ನ ನಿರ್ದೇಶಕಿ ಡಾ.ತುಳಸಿ ರಾಮಚಂದ್ರ, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಕೆ.ವಿ.ಲಕ್ಷ್ಮೀದೇವಿ, ಕೃಷ್ಣ ಕಾಲಿಂಗ್ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಕೆ.ಆರ್.ಗಣೇಶ್‌ರಾವ್ ಸೇರಿದಂತೆ ಎಲ್ಲಾ ಸಂಘ ಸಂಸ್ಥೆಗಳ ಕಾರ್ಯಕಾರಿ ಸಮಿತಿ ಸದಸ್ಯರು, ಸ್ಪರ್ಧಿಗಳು, ಅವರ ಕುಟುಂಬದವರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಅ.19– ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿಯು 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಕುರುಬ ಜನಾಂಗದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜೆರಾಕ್ಸ್ ಅಂಕಪಟ್ಟಿ, ಜಾತಿ ದೃಢೀಕರಣ ಪತ್ರಗಳೊಂದಿಗೆ ಅ.30ರೊಳಗೆ ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದಮ್ಮ ದೇವಸ್ಥಾನ, ನಾರಾಯಣಶಾಸ್ತ್ರಿ ರಸ್ತೆ ಇಲ್ಲಿಗೆ ತಲುಪಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9342115656, 94803 25656, 8197967641 ಸಂಪರ್ಕಿಸಬಹುದು.

ಸೋಸಲೆ ಮಠದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ದೀಪಾವಳಿ ಸಂದೇಶ




ಮೈಸೂರು, ಅ.19(ಎಸ್‌ಬಿಡಿ)– ದೀಪದ ಬೆಳಕಲ್ಲಿ ಅಜ್ಞಾನ–ಅಂಧಕಾರ ಅಳಿದು ತತ್ವಜ್ಞಾನದ ಜ್ಯೋತಿ ಪ್ರಜ್ವಲಿಸಲಿ ಎಂದು ಆಶಿಸುವ ಮೂಲಕ ಮೈಸೂರಿನ ಸೋಸಲೆ ಶ್ರೀ ವ್ಯಾಸರಾಜರ ಮಹಾಸಂಸ್ಥಾನದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಎಲ್ಲರಿಗೂ ದೀಪಾವಳಿ ಸಂದೇಶ ತಿಳಿಸಿದ್ದಾರೆ.

ಅಶ್ವಯುಜ ಮಾಸದ ಚತುರ್ದಶಿ–ನರಕ ಚತುರ್ದಶಿ, ಅಮಾವಾಸ್ಯೆ– ಶ್ರೀ ಲಕ್ಷ್ಮೀ ಪೂಜೆಯ ದಿನ, ಕಾರ್ತಿಕ ಮಾಸದ ಪ್ರತಿಪದ ದಿನ–ಬಲಿಯನ್ನು ನಿಗ್ರಹ ಮಾಡಿದ ವಿಶೇಷ ಸಂದರ್ಭ. ಈ ಮೂರು ದಿನಗಳು ಅಖಂಡ ಭಾರತದಲ್ಲಿ ಮಾತ್ರವಲ್ಲ ವಿಶ್ವದಾದ್ಯಂತ 'ವಿಜಯ'ವನ್ನು ಸಂಭ್ರಮಿಸಲಾಗುತ್ತದೆ. ಧರ್ಮ ಸಂಸ್ಥಾಪನೆಗಾಗಿ, ದುಷ್ಟ ಸಂಹಾರ ಮತ್ತು ಶಿಷ್ಟರ ರಕ್ಷಣೆಗಾಗಿ ಭಗವಂತನು ಮಾಡಿದ ಅವತಾರಗಳ ವಿಜಯೋತ್ಸವದ ವಿಶೇಷ ದಿನಗಳಿವು.

ಈ ಸಂದರ್ಭದಲ್ಲಿ ದೀಪಗಳನ್ನು ಬೆಳಗುವುದು ನಮ್ಮ ಸನಾತನ ಸಂಸ್ಕೃತಿ. ದೀಪವು ಕತ್ತಲನ್ನು ಪರಿಹರಿಸುತ್ತದೆ ಎಂಬುದು ಸಂಕೇತ ಮಾತ್ರ. ಇಲ್ಲಿ ಅಡಗಿರುವ ಉದ್ದೇಶ ಎಂದರೆ ಅಜ್ಞಾನ ಮತ್ತು ಅಂಧಕಾರಗಳು ಪರಿಹಾರವಾಗಲಿ ಎಂಬುದು. ಜ್ಞಾನದದೀಪ ನಮ್ಮಲ್ಲಿ ಬೆಳಗಿದರೆ ಮಾತ್ರ ಜೀವನ ಸಾರ್ಥಕವಾಗುತ್ತದೆ. ಶ್ರೀ ಆಚಾರ್ಯ ಮಧ್ವರ ಅನುಗ್ರಹದಿಂದ ತತ್ವಜ್ಞಾನದ ಬೆಳಕು ಜಗತ್ತಿನ ಎಲ್ಲರಲ್ಲಿಯೂ ಪ್ರಜ್ವಲಿಸಲಿ ಎಂಬುದೇ ನಮ್ಮ ಆಶಯ ಎಂದು ಶ್ರೀಗಳು ನುಡಿದಿದ್ದಾರೆ.


ನೊಂದ ಕುಟುಂಬಕ್ಕೆ ಸಾಂತ್ವನ



ಮೈಸೂರು ತಾಲೂಕು ಜಯಪುರ ಹೋಬಳಿ ಮಾರ್ಬಳ್ಳಿ ಗ್ರಾಮದ ರಾಮನಾಯಕ ಅವರು ಇತ್ತೀಚೆಗೆ ಅನಾರೋಗ್ಯದಿಂದ ನಿಧನ ಹೊಂದಿದ್ದು, ಅವರ ಕುಟುಂಬಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ ಸಾಂತ್ವನ ಹೇಳಿ, ಆರ್ಥಿಕ ಸಹಾಯ ಮಾಡಿದರು. ಈ ವೇಳೆ ಬರಡನಪುರ ಬಸವರಾಜಪ್ಪ ಮತ್ತು ಮಾರ್ಬಳ್ಳಿ ಗ್ರಾಮಸ್ಥರು ಇದ್ದರು.

ಮೈಸೂರಲ್ಲಿ ದೀಪಾವಳಿ ಹಬ್ಬದ ಖರೀದಿ ಜೋರು

● ತರಕಾರಿ–ಹಣ್ಣು, ಪೂಜಾ ಸಾಮಗ್ರಿ ಬೆಲೆ ಬಹುತೇಕ ಯಥಾಸ್ಥಿತಿ ; ಸೇವಂತಿಗೆ ಹೂ ತುಸು ದುಬಾರಿ ● ವಿವಿಧ ವಿನ್ಯಾಸಕ್ಕೆ ಅನುಗುಣವಾಗಿ ಮಣ್ಣಿನ ದೀಪಗಳು ತರಾವರಿ ಬೆಲೆಯಲ್ಲಿ ಮಾರಾಟ





ಮಾರುಕಟ್ಟೆಯಲ್ಲಿ ಬಾಳೆಹಣ್ಣು, ತರಕಾರಿ, ಪೂಜಾ ಸಾಮಗ್ರಿ ಖರೀದಿಸುತ್ತಿರುವ ಗ್ರಾಹಕರನ್ನು ಚಿತ್ರಗಳಲ್ಲಿ ಕಾಣಬಹುದು.

ಮೈಸೂರು,ಅ.19(ಪಿಎಂ)– ಹಣತೆಯ ಹಬ್ಬ ದೀಪಾವಳಿ ಪ್ರಯುಕ್ತ ಹಣ್ಣು, ಹೂ ಹಾಗೂ ತರಕಾರಿ ಸೇರಿದಂತೆ ಸಾಮಗ್ರಿಗಳ ಖರೀದಿ ನಗರದಲ್ಲಿ ಭಾನುವಾರ ಜೋರಾಗಿತ್ತು. ನಗರದ ದೇವರಾಜ ಮಾರುಕಟ್ಟೆಯಲ್ಲಿ ಭಾನುವಾರ ಬೆಳಗ್ಗೆ ಸಂದರ್ಭಕ್ಕೆ ಹೋಲಿಸಿದರೆ ಸಂಜೆ ವೇಳೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಖರೀದಿಯಲ್ಲಿ ತೊಡಗಿದ್ದರು.

ದೇವರಾಜ ಮಾರುಕಟ್ಟೆ ಮಾತ್ರವಲ್ಲದೇ, ನಾನಾ ಬಡಾವಣೆಗಳ ವಿವಿಧ ರಸ್ತೆ ಬದಿಗಳಲ್ಲಿಯೂ ವ್ಯಾಪಾರ ಜೋರಾಗಿತ್ತು. ಅಂಗಡಿ ಮುಂಗಟ್ಟುಗಳಲ್ಲಿಯೂ ಜನಜಂಗುಳಿ ಕಂಡುಬಂತು. ಅಗ್ರಹಾರ ವೃತ್ತದ ವಾಣಿವಿಲಾಸ ಮಾರುಕಟ್ಟೆ, ಮಂಡಿ ಮೊಹಲ್ಲಾದ ಮಂಡಿ ಮಾರುಕಟ್ಟೆ ಹಾಗೂ ಎಂಜಿ ರಸ್ತೆ ಮಾರುಕಟ್ಟೆಯಲ್ಲಿಯೂ ಖರೀದಿ ಭರಾಟೆ ಇದ್ದಿತು.

ಶನಿವಾರಕ್ಕೆ ಹೋಲಿಸಿದರೆ ಭಾನುವಾರ ದೇವರಾಜ ಮಾರುಕಟ್ಟೆಯಲ್ಲಿ ದಟ್ಟಣೆ ಕಂಡು ಬಂತು. ಅಂತೆಯೇ ಚಿಕ್ಕಗಡಿಯಾರ ವೃತ್ತದಲ್ಲೂ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಹೂ, ಹಣ್ಣು, ತರಕಾರಿ ಖರೀದಿ ಜೊತೆಗೆ ಮಣ್ಣಿನ ಹಣತೆಗಳ ಖರೀದಿ ವಿಶೇಷವಾಗಿ ಕಂಡಿತು.

ದೇವರಾಜ ಮಾರುಕಟ್ಟೆಯ ಪೂಜಾ ಸಾಮಗ್ರಿ ಮಳಿಗೆಯ ರಾಕೇಶ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ವಿವಿಧ ವಿನ್ಯಾಸ ಹಾಗೂ ಆಕಾರಗಳಿಗೆ ಅನುಗುಣವಾಗಿ ಮಣ್ಣಿನ ದೀಪಗಳು ನಾನಾ ಬೆಲೆಯಲ್ಲಿ ಲಭ್ಯವಿವೆ ಎಂದು ತಿಳಿಸಿದರು.

10 ರೂ.ಗೆ ನಾಲ್ಕು ದೀಪಗಳು, 10 ರೂ.ಗೆ 1 ಹಾಗೂ 10 ರೂ.ಗೆ 2 ದೀಪಗಳೂ ಲಭ್ಯವಿವೆ. ಹಬ್ಬದ ಕಾರಣಕ್ಕೆ ಪೂಜಾ ಸಾಮಗ್ರಿಗಳಲ್ಲಿ ಯಾವುದೇ ಹೆಚ್ಚಳ ಉಂಟಾಗಿಲ್ಲ. ಶನಿವಾರಕ್ಕೆ ಹೋಲಿಸಿದರೆ ಮಾರುಕಟ್ಟೆಗೆ ಹೆಚ್ಚಿನ ಗ್ರಾಹಕರು ಇಂದು ಭೇಟಿ ನೀಡಿದ್ದಾರೆ. ಹಬ್ಬದ ಕಾರಣಕ್ಕೆ ನಾಳೆಯೂ (ಸೋಮವಾರ) ಹೆಚ್ಚು ಗ್ರಾಹಕರು ಮಾರುಕಟ್ಟೆಗೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಹೇಳಿದರು.

ಇಲ್ಲಿನ ಮತ್ತೊಬ್ಬ ವ್ಯಾಪಾರಿ ಮಾತನಾಡಿ, ಮಣ್ಣಿನ ದೀಪಗಳು ಜೊತೆಗೆ (ಎರಡಕ್ಕೆ) 50ರಿಂದ 100 ರೂ. ಸೇರಿದಂತೆ ವಿವಿಧ ರೀತಿಯಲ್ಲಿರುವುದಕ್ಕೆ ತರಾವರಿ ಬೆಲೆಯಲ್ಲಿ ಲಭ್ಯವಿವೆ ಎಂದು ತಿಳಿಸಿದರು. ದೇವರಾಜ ಮಾರುಕಟ್ಟೆ ಹೂ ವ್ಯಾಪಾರಿ ವಿಜಯಕುಮಾರ್ ಮಾತನಾಡಿ, ಸೇವಂತಿಗೆ ಹೂ ಮಾರಿಗೆ 60 ರೂ. ಇದೆ. ನಿನ್ನೆ (ಶನಿವಾರ) 40ರಿಂದ 50 ರೂ. ಇದ್ದರೆ, ಬುಧವಾರ 30 ರೂ. ಇತ್ತು. ಮಳೆ ಇಲ್ಲವಾದರೆ ಮೈಸೂರಿನಿಂದ ಬೇರೆ ಸ್ಥಳಗಳಿಗೆ ಸೇವಂತಿಗೆ ರಫ್ತು ಆಗಲಿದ್ದು, ಮಳೆಯಾದರೆ ಹೊರಗಡೆಗೆ ಹೋಗದೇ ಎಲ್ಲಾ ಮೈಸೂರಿನ ಮಾರುಕಟ್ಟೆಗಳಿಗೆ ಬರಲಿದೆ. ಆಗ ಮೈಸೂರಿನಲ್ಲಿ ಬೆಲೆ ಕಡಿಮೆಯೇ ಇರಲಿದೆ. ಮಳೆ ಮೇಲೆ ಬೆಲೆ ಅವಲಂಬಿಸಿದೆ ಎಂದು ವಿವರಿಸಿದರು.

ದೇವರಾಜ ಮಾರುಕಟ್ಟೆಯ ತರಕಾರಿ ವ್ಯಾಪಾರಿ ಜಬ್ಬರ್ ಮಾತನಾಡಿ, ಹಬ್ಬದ ಕಾರಣಕ್ಕೆ ತರಕಾರಿಗಳ ದರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಉಂಟಾಗಿಲ್ಲ. ಬೀನ್ಸ್, ಕ್ಯಾರಟ್ ಕೆಜಿಗೆ ತಲಾ 10 ರೂ. ಇದೆ. ನಿನ್ನೆಯೂ ಅಷ್ಟೇ ಇತ್ತು. ಆಲೂಗಡ್ಡೆ ಕೆಜಿಗೆ ನಿನ್ನೆ 30 ರೂ. ಇದ್ದರೆ, ಇಂದು 40 ರೂ.ಗೆ ಏರಿಕೆಯಾಗಿದೆ. ಉಳಿದಂತೆ ಯಾವುದೇ ತರಕಾರಿಗಳ ದರದಲ್ಲಿ ಅಂತಹ ಏರಿಕೆ ಸದ್ಯ ಉಂಟಾಗಿಲ್ಲ ಎಂದರು. ಇಲ್ಲಿನ ಬಾಳೆ ಹಣ್ಣು ವ್ಯಾಪಾರಿ ಪ್ರಕಾಶ್ ಮಾತನಾಡಿ, ಎಲಕ್ಕಿ ಬಾಳೆ ಹಣ್ಣು ಬೆಲೆಯಲ್ಲಿ ಏರಿಕೆಯಾಗಿಲ್ಲ. 30ರಿಂದ 40 ರೂ.ವರೆಗೆ ಕೆಜಿ ಬಾಳೆಹಣ್ಣು ಮಾರಾಟ ಮಾಡಲಾಗುತ್ತಿದೆ ಎಂದು ಹೇಳಿದರು.

ರಾಜ್ಯದಲ್ಲಿ ಅತಿವೃಷ್ಟಿಗೆ 14 ಲಕ್ಷ ಹೆಕ್ಟೇರ್ ಕೃಷಿ ಭೂಮಿ ನಾಶ

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ

ಮಂಡ್ಯ, ಅ.19– ರಾಜ್ಯದಲ್ಲಿ ಸುರಿದ ಭಾರಿ ಮಳೆಯಿಂದಾಗಿ 14 ಲಕ್ಷ ಹೆಕ್ಟೇರ್ ಕೃಷಿ ಭೂಮಿ ನಷ್ಟವಾಗಿದ್ದು, ಎನ್‌ಡಿಆರ್‌ಎಫ್ ಪರಿಹಾರ ನಿಧಿ ಅಲ್ಲದೆ ಹೆಚ್ಚುವರಿಯಾಗಿ 8500 ಕೋಟಿ ಪರಿಹಾರ ಹಣ ನಿಗದಿಪಡಿ ಸಿದ್ದು, ರಾಜ್ಯ ಸರ್ಕಾರ ಸಹ ಸರ್ವೆ ನಡೆಸುತ್ತಿದ್ದು, ರಸ್ತೆಗಳು, ಮನೆಗಳಿಗೆ ಹಾನಿ ಸಂಭವಿಸಿರುವುದು. ಇನ್ನಿತರೆ ಹಾನಿಯಾಗಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ನೀಡಿ ಹೆಚ್ಚುವ ಪರಿಹಾರಕ್ಕೆ ಒತ್ತಾಯಿಸಲಾಗುವುದು ಎಂದು ಸಚಿವ ಎನ್. ಚಲುವರಾಯ ಸ್ವಾಮಿ ತಿಳಿಸಿದರು.

ಉತ್ತರ ಕರ್ನಾಟಕ ಸೇರಿದಂತೆ ಸುಮಾರು 15 ಜಿಲ್ಲೆಗಳಲ್ಲಿ ಮಳೆಯಿಂದಾಗಿ ಭಾರೀ ಹಾನಿಯುಂಟಾಗಿದೆ. ಪರಿಹಾರ ವಿತರಣೆಗೆ ಬದ್ಧವಾಗಿದ್ದು, ಆಯಾ ಜಿಲ್ಲಾಡಳಿತಗಳು ಸರ್ವೆ ನಡೆಸಿ ಸರ್ಕಾರಕ್ಕೆ ವರದಿ ನೀಡಿದ ಕೂಡಲೇ ಪರಿಹಾರ ವಿತರಿಸಲಾಗುವುದು. ಪರಿಹಾರ ಕೊಡಲು ಸಮಯ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಧಾರವಾಡ ಜಿಲ್ಲೆಯಲ್ಲಿ ಹಾನಿ ಬಗ್ಗೆ ಸರ್ವೆ ಕಾರ್ಯ ಮುಗಿದು ವರದಿ ನೀಡಿದ್ದು, ಪರಿಹಾರ ಹಂಚಿಕೆ ಆರಂಭವಾಗಿದೆ ಎಂದು ಸುದ್ಧಿಗಾರರಿಗೆ ಹೇಳಿದರು.

ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾದ ಸರ್ಕಾರಿ ಅಧಿಕಾರಿಗಳ ಅಮಾ ನತು ವಿಚಾರದ ಬಗ್ಗೆ ಮಾತನಾಡಿ, ಅದು ಆ ಸಂಘಟನೆಯ ವೈಯುಕ್ತ ವಿಚಾರ. ಆರ್‌ಎಸ್‌ಎಸ್ ಬಿಜೆಪಿ ಅಂಗಸಂಸ್ಥೆಯಾಗಿ ಕೆಲಸ ಮಾಡುತ್ತಿದೆ. ಆರ್‌ಎಸ್‌ಎಸ್ ಚಟುವಟಿಕೆ ನಿಷೇಧ ಕುರಿತು ಸರ್ಕಾರದ ತೀರ್ಮಾನವೇ ಅಂತಿಮ ಎಂದರು.

ವಿಶೇಷ ಅನುದಾನ ತಂದಿದ್ದರೆ ಅದು ಸಾಧನೆ ಅಂತ ಬೊಬ್ಬೆ ಹೊಡೆಯುತ್ತಾರೆ. ಕಾರ್ಖಾನೆ ತಂದ ಬಗ್ಗೆ, ಉದ್ಯೋಗ ಸೃಷ್ಟಿಸಿದ ಬಗ್ಗೆ ಪಟ್ಟಿ ಬಿಡುಗಡೆ ಮಾಡಲಿ. ಸಿಎಸ್‌ಆರ್ ಫಂಡ್ ತಂದಿದ್ದನ್ನ ದೊಡ್ಡ ಸಾಧನೆ ಅಂತ ಕುಮಾರಸ್ವಾಮಿ ಹೇಳಿಕೊಳ್ಳಬಾರದು. ಪ್ರಗತಿಯಲ್ಲಿರುವ ಬೆಂಗಳೂರು –ಮೈಸೂರು ಹೆದ್ದಾರಿ ಸಮಸ್ಯೆಗಳನ್ನು ಬಗೆಹರಿಸಲು ಅವರಿಗೆ ಆಗುತ್ತಿಲ್ಲ. ಪ್ರಧಾನಿ ಬಳಿ ಕುಳಿತು ರಾಜ್ಯದ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಯಾವತ್ತು ಸಿಎಂ ಅವರನ್ನ ಕುಮಾರಸ್ವಾಮಿ ಭೇಟಿಯಾಗಿದ್ದಾರೆ? ರಾಜ್ಯದ ಅಭಿವೃದ್ಧಿ ಬಗ್ಗೆ ಯಾವುದಾದರೂ ಒಂದು ಪತ್ರ ಬರೆದಿದ್ದಾರಾ? ರಾಜ್ಯದ ಕೈಗಾರಿಕಾ ಸಚಿವರನ್ನ ಭೇಟಿಯಾಗಿದ್ದಾರಾ? ರಾಜ್ಯ ದಿಂದ ಹಲವಾರು ಪ್ರಸ್ತಾವನೆಗಳು ಕೇಂದ್ರಕ್ಕೆ ಸಲ್ಲಿಸಲಾಗಿದೆ. 2–3ಬಾರಿ ಮೋದಿಯವರನ್ನ ಸಿಎಂ ಭೇಟಿ ಮಾಡಿದ್ದಾರೆ. ರಾಜ್ಯದಲ್ಲಿ ಗೊಬ್ಬರ ಕೊರತೆಯಾದಾಗ ನಾನು ಹೆಚ್ಚಿಕೆಗೆ ಪತ್ರ ಬರೆದಿದ್ದೆ, ಅವರು ಕೊಡಿಸಲಿಲ್ಲ. ಕುಮಾರಸ್ವಾಮಿ ಜನಾನ ಮರಳು ಮಾಡುವುದರಲ್ಲಿ ನಿಸ್ಸೀಮರು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ಗುತ್ತಿಗೆದಾರ ಬಾಕಿ ಉಳಿಸಿಕೊಂಡ ವಿಚಾರದ ಬಗ್ಗೆ ಮಾತನಾಡಿ, ಗುತ್ತಿಗೆ ದಾರರ ಬಾಕಿ ಕ್ಲಿಯರ್ ಮಾಡಲು ಅಭಿವೃದ್ಧಿ ಕೆಲಸ ನಿಲ್ಲಿಸಬೇಕೇ? ದುಡ್ಡಿಲ್ಲದಿದ್ದರೂ ಟೆಂಡರ್ ಕರೆದು ಕೆಲಸ ಮಾಡಿದ್ದಾರೆ. ಕ್ಲಿಯರ್ ಮಾಡಲ್ಲ ಎಂದು ಹೇಳಲ್ಲ, ಮಾಡುತ್ತೇವೆ ಅಲ್ಲಿಯವರೆಗೂ ಕಾಯಲಿ ಎಂದರು.

ಕನ್ನಡದ ಕಂಪನ್ನು ಅಮೇರಿಕಾದಲ್ಲಿ ಹರಡುತ್ತಿರುವ ಅಕ್ಕ ಸಂಸ್ಥೆ



ಅಕ್ಕ ಸಂಸ್ಥೆಯ 5ಕೆ ವಾಕಥಾನ್ ಕಾರ್ಯಕ್ರಮಕ್ಕೆ ನಿರ್ಮಲಾನಂದನಾಥ ಸ್ವಾಮೀಜಿ, ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು.

ಮಂಡ್ಯ: ಕನ್ನಡದ ಕಂಪನ್ನು ಅಮೇರಿಕಾದಲ್ಲಿ ಹರಡುತ್ತಿರುವ ಅಕ್ಕ ಒಂದು ದೊಡ್ಡ ಸಂಸ್ಥೆಯಾಗಿದ್ದು ಅಕ್ಕ ಸಂಸ್ಥೆಗೆ ಸರ್ಕಾರ ಹಾಗೂ ಸ್ವಾಮೀಜಿಗಳ ಬೆಂಬಲ ವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ನಗರದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಅಮೆರಿಕದ ಅಕ್ಕ ಸಂಸ್ಥೆಯ ಬೆಳ್ಳಿ ಮಹೋತ್ಸವದ ಅಂಗವಾಗಿ ಆಯೋ ಜಿಸಲಾಗಿದ್ದ ಅಕ್ಕ 5ಕೆ ವಾಕಥಾನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರವಾಗಲಿ ಸಾರ್ವಜನಿಕರಾಗಲಿ ಒಂದು ಕಾರ್ಯಕ್ರಮವನ್ನು ಮಾಡಲು ಎಷ್ಟು ಶ್ರಮ ವಹಿಸಬೇಕಾಗುತ್ತದೆ. ಆದರೆ ವಿಶ್ವದ ದೊಡ್ಡಣ್ಣ ಅಮೆರಿಕದಲ್ಲಿ ಎಲ್ಲಾ ಕನ್ನಡಿಗರನ್ನು ಒಗ್ಗೂಡಿಸಿ ಅಕ್ಕ ಸಂಸ್ಥೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿರುವುದು ನಿಜಕ್ಕೂ ಶ್ಲಾಘನೀಯ. ಪ್ರಸ್ತುತ ಅಕ್ಕ ಸಂಸ್ಥೆ ಅಧ್ಯಕ್ಷರಾಗಿರುವ ಮಧುರಂಗಯ್ಯ ತಮ್ಮ ಪೂರ್ವ ವಿದ್ಯಾಭ್ಯಾಸವನ್ನು ಮಂಡ್ಯದಲ್ಲಿಯೇ ಮುಗಿಸಿದ್ದು ಕರ್ನಾಟಕಕ್ಕೆ ಉಪಯುಕ್ತವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಅದಕ್ಕಾಗಿಯೇ ಇಂದು ನಗರದಲ್ಲಿ 5ಕೆ ವಾಕಥಾನ್ ಹಮ್ಮಿಕೊಳ್ಳಲಾಗಿದೆ ಎಂದರು.

ಮಾಜಿ ಸಚಿವ ಪುಟ್ಟರಾಜು ಮಾತನಾಡಿ, ಕಳೆದ 25ವರ್ಷಗಳಿಂದ ಕನ್ನಡ ಕಂಪನ್ನು ಅಮೇರಿಕಾದಲ್ಲಿ ಅಕ್ಕ ಸಂಸ್ಥೆ ಸೂಸುತ್ತಿದೆ. ಕಳೆದ ಇಪ್ಪತ್ತು ವರ್ಷಗಳಿಂದ ನಾವೆಲ್ಲರೂ ಅಮೇರಿಕದಲ್ಲಿ ಅಕ್ಕ ಸಂಸ್ಥೆ ಆಯೋಜಿಸುವ ಕನ್ನಡ ಕಾರ್ಯಕ್ರಮಕ್ಕೆ ಹೋಗುತ್ತಿದ್ದೇವೆ. ಮಧುರಂಗಯ್ಯ ಸಾರಥ್ಯದಲ್ಲಿ ಅಕ್ಕ ಸಮ್ಮೇಳನದ ಕುರಿತು ದೊಡ್ಡ ಮಟ್ಟದಲ್ಲಿ ಜಾಗೃತಿ ಮೂಡಿಸಲಿ ಎಂದು ಆಶಿಸಿದರು. ನಟ ನೆನಪಿರಲಿ ಪ್ರೇಮ್ ಮಾತನಾಡಿ, ನಮ್ಮ ಊರು ನಮ್ಮ ದಾರಿ ಎಂಬ ಕಾರ್ಯಕ್ರಮವನ್ನು ಮಧುರಂಗಯ್ಯ ಇಲ್ಲಿ ಆಯೋಜಿಸಿದ್ದಾರೆ. ಕಾರಣ ಇಷ್ಟೇ ನಾವು ಎಷ್ಟೇ ಬೆಳೆದರು ನಮ್ಮ ಊರನ್ನು ಮರೆಯ ಬಾರದು ಎಂದು ಅಭಿಪ್ರಾಯಿಸಿದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶಾಸಕ ರವಿಕುಮಾರ್, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಸಿಇಓ ಕೆ.ಆರ್.ನಂದಿನಿ, ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಉಪ ವಿಭಾಗಾಧಿಕಾರಿ ಶಿವಮೂರ್ತಿ, ತಹಸೀಲ್ದಾರ್ ವಿಶ್ವನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಕಟ್ಟಡಕ್ಕೆ ಭೂಮಿಪೂಜೆ



ಅಕ್ಕಿಹೆಬ್ಬಾಳು ಹೋಬಳಿಯ ಆಲಂಬಾಡಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡಕ್ಕೆ ಡಾಲು ರವಿ ಭೂಮಿ ಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ, ಅ.19– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಆಲಂಬಾಡಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡದ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ ಭೂಮಿ ಪೂಜೆ ನೆರವೇರಿಸಿದರು.

ರೈತರ ಅಭಿವೃದ್ಧಿಗೆ ಕೃಷಿ ಜೊತೆಗೆ ಹೈನುಗಾರಿಕೆಯು ವರದಾನವಾದ ಉಪ ಕಸುಬಾಗಿದೆ. ಹಾಗಾಗಿ ರೈತರು ಬೇಸಾಯದ ಜೊತೆ ಜೊತೆಗೆ ಹೈನುಗಾರಿಕೆ, ಮೇಕೆ, ಕುರಿ, ಕೋಳಿ ಸಾಕಾಣಿಕೆಯನ್ನು ರೂಢಿಸಿಕೊಳ್ಳಬೇಕು. ಕೃಷಿಯಲ್ಲಿ ನಷ್ಟ ಉಂಟಾದರೂ ಆಗಬಹುದು. ಆದರೆ ನಮ್ಮ ಹೈನುಗಾರಿಕೆಯಲ್ಲಿ ಯಾವುದೇ ನಷ್ಟವಾಗುವುದಿಲ್ಲ. ನಮಗೆ ಗುಣಮಟ್ಟದ ಹಾಲು ಪೂರೈಕೆ ಮಾಡಿದರೆ ಸಾಕು, ಪ್ರತಿ ವಾರವೂ ಹಾಲಿನ ಹಣ ನೀಡುತ್ತೇವೆ. ಜೊತೆಗೆ ಸರ್ಕಾರದಿಂದಲೂ ಗುಣಮಟ್ಟದ ಹಾಲು ಪೂರೈಕೆ ಮಾಡಿದ ರೈತರಿಗೆ ಪ್ರತಿ ಲೀಟರ್‌ಗೆ 5ರೂ ಪ್ರೋತ್ಸಾಹ ಧನ ರೈತರಿಗೆ ಸಿಗುತ್ತದೆ. ಅಮೃತ ಸಮಾನವಾದ ಹಾಲಿಗೆ ಯಾರೂ ಸಹ ಕಲಬೆರಕೆ ಮಾಡಬಾರದು ಎಂದು ಡಾಲು ರವಿ ಸಲಹೆ ನೀಡಿದರು.

ಸಂಘದ ಅಧ್ಯಕ್ಷೆ ಲಲಿತ ಸೋಮಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯಿತಿ ಸದಸ್ಯರಾದ ಎ.ಟಿ.ಕರಿಶೆಟ್ಟರು, ನಾಗೇಶ್, ಸಂಘದ ಉಪಾಧ್ಯಕ್ಷೆ ರುಕ್ಮಿಣಿ ನಂಜೇಗೌಡ, ನಿರ್ದೇಶಕರಾದ ಪೂರ್ಣಿಮ ವಿಷಕಂಠಮೂರ್ತಿ, ಗೌರಮ್ಮ ಜಯರಾಂ, ಮಣಿಯಮ್ಮ ಅಣ್ಣೇಗೌಡ, ರಾಧಾ ನಂಜೇಗೌಡ, ಬಿ.ಎಂ.ಆಶಾ ಓಂಕಾರ ಮೂರ್ತಿ, ವೇದಾವತಿ ಕೃಷ್ಣೇಗೌಡ, ಲಲಿತಮ್ಮ ಶಿವಕುಮಾರ್, ಜಯಮ್ಮ ರಾಮಕೃಷ್ಣ, ಕಲಾವತಿ ಪ್ರಕಾಶ್, ಮುಖಂಡರು ಹಾಗೂ ನಾಮಧಾರಿ ಸಮುದಾಯದ ಅಧ್ಯಕ್ಷ ಕೆಂಡ ಗಣ್ಣಸ್ವಾಮಿ, ಮುಖಂಡರಾದ ಮುದ್ದೇಗೌಡ, ಲಕ್ಷ್ಮೀನಾರಾಯಣ್, ಯಜಮಾನ್ ಕೆಂಪಶೆಟ್ಟರು, ದೊಡ್ಡಭೈರಯ್ಯ, ಬಸವರಾಜು, ರಾಮಕೃಷ್ಣ, ಎ.ಇ.ಕೃಷ್ಣ, ರಾಜೇಗೌಡ, ಹೇಮಂತಕುಮಾರ್, ಎ.ಡಿ. ಗಣೇಶ್, ರವಿ ಕುಮಾರ್, ಯು.ಆರ್. ರಘುಪತಿ, ಎ.ಎಸ್. ಜವರಯ್ಯ, ಶಾಂತೇ ಗೌಡ, ಮಾಯೀಗೌಡ, ಆನಂದಾ ಚಾರ್, ಬಸವಾಚಾರ್,ಸೋಮಶೇಖರ್, ಸಂಘದ ಕಾರ್ಯದರ್ಶಿ ಮಹಾದೇವಮ್ಮ ಬಸವರಾಜು, ಹಾಲು ಪರೀಕ್ಷಕ ವೀಣಾ ಗುರುಮೂರ್ತಿ, ಸುಶೀಲಮ್ಮ ಕರಿನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಯಶಸ್ವಿಯಾಗಿ ನಡೆದ ಪಥ ಸಂಚಲನ



ಆರ್‌ಎಸ್‌ಎಸ್ ನಾಗಮಂಗಲದಲ್ಲಿ ಪಥಸಂಚಲನ ನಡೆಸಿತು.

ನಾಗಮಂಗಲ,ಅ.19–ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವದ ಪಥ ಸಂಚಲನ ಇಂದು ನಾಗಮಂಗಲದಲ್ಲಿ ನಡೆಯಿತು.

ಪಟ್ಟಣದ ಶ್ರೀ ಸೌಮ್ಯ ಕೇಶವ ಸ್ವಾಮಿ ದೇವಾಲಯ ಮುಂಭಾಗದಿಂದ ಹೊರಟು ಟಿ. ಮರಿಯಪ್ಪ ಸರ್ಕಲ್‌ನಿಂದ ಎಸ್‌ಬಿಐ ಬ್ಯಾಂಕ್ ಸರ್ಕಲ್ ಮುಖಾಂತರ ಮಂಡ್ಯ ವೃತ್ತದಿಂದ ಪಟ್ಟಣದ ಪ್ರಮುಖ ರಾಜಬೀದಿಗಳಲ್ಲಿ ಪಥ ಸಂಚಲನ ಹೊರಟು ಸೌಮ್ಯ ಕೇಶವ ಸ್ವಾಮಿ ದೇವಾಲಯದ ಮುಂಭಾಗದಲ್ಲಿ ಮುಕ್ತಾಯ ಮಾಡಲಾಯಿತು.

ಹಿರಿಯ ಸ್ವಯಂ ಸೇವಕ ನಾರಾಯಣ ಸ್ವಾಮಿ, ದಾಸಪ್ಪನವರ ನೇತೃತ್ವದಲ್ಲಿ 300ಕ್ಕೂ ಅಧಿಕ ಆರ್‌ಎಸ್‌ಎಸ್ ಸ್ವಯಂ ಸೇವಕರು ಭಾಗವಹಿಸಿದ್ದರು. ಜೆಸಿಬಿ ಮುಖಾಂತರ ಪುಷ್ಪಾರ್ಚನೆಯೊಂದಿಗೆ ಶುಭ ಹಾರೈಕೆ ಮಾಡಲಾಯಿತು.

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದಲ್ಲಿ ಸಿಐ ಶಿವಕುಮಾರ್ ಹಾಗೂ ಬೆಳ್ಳೂರಿನ ಸಿಐ ರವಿಕುಮಾರ್ ಪಥ ಸಂಚಲನದ ಬಂದೋಬಸ್ತ್ ಮಾಡಲಾಗಿತ್ತು.

ಪಾಂಡವಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ

ಪಾಂಡವಪುರ, ಅ.19–ಆರ್‌ಎಸ್‌ಎಸ್ ಸಂಘಟನೆ ನೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಗಣವೇಷದಲ್ಲಿ ಪಟ್ಟಣದಲ್ಲಿ ಪಥಸಂಚಲನ ನಡೆಸಿದರು.

ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ಸೇರಿದ ನೂರಾರು ಕಾರ್ಯಕರ್ತರು ಸಂಘದ ಪಾರ್ಥನೆ ಸಲ್ಲಿಸುವ ಮೂಲಕ ಪಥಸಂಚಲನಕ್ಕೆ ಚಾಲನೆ ನೀಡಿದರು.

ಹಳೇ ಬಸ್ ನಿಲ್ದಾಣದಿಂದ ಹೊರಟ ಪಥಸಂಚಲನವು ಪೇಟೆಬೀದಿ ಮೂಲಕ ಶಾಂತಿನಗರ, ಮಹಾಕಾಳೇಶ್ವರಿ ಬಡಾವಣೆ, ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ ಬೀದಿ, ಬಸವನಗುಡಿ ಬೀದಿ, ಫೆನ್ಸನ್ ಕಾಲೋನಿ, ಪೊಲೀಸ್ ಠಾಣೆ ರಸ್ತೆ, ಬೀರಶೆಟ್ಟಹಳ್ಳಿ, ಹಿರೇಮರಳಿ ಆಟೋ ಸರ್ಕಲ್, ಚರ್ಚ್ ರಸ್ತೆ, ಮಂಡ್ಯ ಸರ್ಕಲ್, ಐದುದೀಪದ ವೃತ್ತ ಮೂಲಕ ತ್ಯಾಗರಾಜ ಕಾಲೋನಿ ಮೂಲಕ ವಿಸಿ ಕಾಲೋನಿಯ ಬಳಿ ಇರುವ ಶ್ರೀರಾಮಮಂದಿರ ಬಳಿ ಆಗಮಿಸಿದ ಪಥಸಂಚಲನವನ್ನು ಮುಕ್ತಾಯಗೊಳಿಸಿದರು.



ಪಥಸಂಚಲನ ಮಾಡುವ ಮೂಲಕ ಸಂಘದ ನೂರು ವರ್ಷದ ಸಂಭ್ರಮಾಚರಣೆ ಮಾಡಿದರು.

ನಡುರಸ್ತೆಯಲ್ಲಿ ಶಿಸ್ತುಬದ್ಧವಾಗಿ ಕುಳಿತ ಕಾರ್ಯಕರ್ತರು ಬಾಳೆಹಣ್ಣು, ಬೆಲ್ಲದ ಪಾನಕ ಹಾಗೂ ಬೆಳಗಿನ ಉಪಹಾರವನ್ನು ಸವಿದರು. ಆರ್‌ಎಸ್‌ಎಸ್ ಕಾರ್ಯಕರ್ತರ ಪಥಸಂಚಲನ ಉದ್ದಕ್ಕೂ ಪೊಲೀಸ್ ಬಿಗಿಬಂದೋಬಸ್ತ್ ಮಾಡಿದ್ದರು.

ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್ ಮಾತನಾಡಿ, ಆರ್‌ಎಸ್‌ಎಸ್ ಸಂಘಟನೆ ಶಿಸ್ತು ರೂಢಿಸಿಕೊಂಡು ಕೆಲಸ ಮಾಡುತ್ತಿದೆ. ದೇಶದ ಸಂಸ್ಕೃತಿ, ಸಂಸ್ಕಾರವನ್ನು ಎತ್ತಿಹಿಡಿಯುವ ಕೆಲಸ ಮಾಡುತ್ತಿದೆ. ಮುಂದೆ ಒಳ್ಳೆಯ ರೀತಿಯಲ್ಲಿ ಭಾರತ ವಿಶ್ವಕ್ಕೆ ಮಾದರಿಯಾಗಬೇಕು ಎಂಬ ನಿಟ್ಟಿನಲ್ಲಿ ಆರ್‌ಎಸ್‌ಎಸ್ ಸಂಘಟನೆ ಸಂಕಲ್ಪ ತೊಟ್ಟು ಕೆಲಸ ಮಾಡಲಿದೆ ಎಂದರು.

ಬಿಜೆಪಿ ತಾಲೂಕು ಅಧ್ಯಕ್ಷ ಧನಂಜಯ್, ಮುಖಂಡರಾದ ಜೆ.ಶಿವಲಿಂಗೇಗೌಡ, ಎಚ್.ಎನ್.ಮಂಜುನಾಥ್, ಆನಂದ್, ಶಂಭೂನಹಳ್ಳಿ ಮಂಜುನಾಥ್, ಚಿಕ್ಕಮರಳಿ ನವೀನ್, ಸಂದೇಶ್, ಮಾರ್ಕಾಂಡಯ್ಯ, ಡೇರಿ ರಾಮು, ಸೋಮಶೇಖರ್ ಸೇರಿದಂತೆ ಹಲವು ಮುಖಂಡರು ಪಥಸಂಚಲನದಲ್ಲಿ ಭಾಗವಹಿಸಿದ್ದರು.

ಎಂ.ಮರಿಯಪ್ಪ ನಿಧನ



ಮೇಲುಕೋಟೆ, ಅ.19– ಯದುಶೈಲಾ ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಎಂ.ಮರಿಯಪ್ಪ (91) ಶನಿವಾರ ನಿಧನರಾಗಿದ್ದಾರೆ. ಆರೋಗ್ಯವಾಗಿಯೇ ಓಡಾಡಿಕೊಂಡಿದ್ದ ಮರಿಯಪ್ಪರವರು ಶನಿವಾರ ಮಧ್ಯಾಹ್ನ ದಿಢೀರ್ ಅನಾರೋಗ್ಯಕ್ಕೆ ಒಳಗಾಗಿ ಮೃತಪಟ್ಟಿದ್ದಾರೆ.

ಮೇಲುಕೋಟೆಯ ಮನೆಯಲ್ಲಿ ಭಾನುವಾರ 10 ಗಂಟೆಯವರೆಗೆ ಸಾರ್ವಜನಿಕ ದರ್ಶನಕ್ಕೆ ಅವಕಾಶಕಲ್ಪಿಸಿ ನಂತರ ಅವರ ತೋಟವಿರುವ ಕೆ.ಆರ್.ಪೇಟೆ ವಸಂತಪುರದಲ್ಲಿ ಕುಟುಂಬಸ್ಥರು ಹಾಗೂ ಅಪಾರಸಂಖ್ಯೆಯ ಅಭಿಮಾನಿಗಳ ಸಮ್ಮುಖದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಸಾಮಾಜಿಕ ಹೋರಾಟಗಾರ ಈಶ ಮುರಳಿ ಸೇರಿದಂತೆ ನಾಲ್ವರು ಪುತ್ರರು ಮತ್ತು ಓರ್ವ ಪುತ್ರಿ ಇದ್ದಾರೆ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಹೆಚ್.ಮಂಜುನಾಥ್, ಜೆಡಿಎಸ್ ತಾಲೂಕು ಅಧ್ಯಕ್ಷ ಮಲ್ಲೇಶ್ ಚೆಲುವನಾರಾಯಣಸ್ವಾಮಿ ದೇವಾಲಯದ ಸ್ಥಾನೀಕರು, ಅರ್ಚಕರು ಸೇರಿದಂತೆ ಹಲವು ಗಣ್ಯರು ಮರಿಯಪ್ಪರಿಗೆ ಅಂತಿಮ ಗೌರವ ಅರ್ಪಿಸಿದರು.

ಮೂರನೇ ಪುಟದಿಂದ

ದೇವಾಲಯದಲ್ಲಿ ಕಾಲ್ತುಳಿತ ಸಾಧ್ಯತೆ

ವಿಶೇಷ ದರ್ಶನದ ಸಾಲುಗಳು ಮೂರ್ನಾಲ್ಕು ಕಿಲೋಮೀಟರ್‌ವರೆಗೂ ಬೆಳೆದು ನಗರದ ಮುಖ್ಯ ರಸ್ತೆಯನ್ನು ತಲುಪಿವೆ ಎಂದು ವಿವರಿಸಿದ್ದಾರೆ.

ದೀಪಾವಳಿ ಹಬ್ಬದ ಸರಣಿ ರಜೆಗಳ ಹಿನ್ನೆಲೆಯಲ್ಲಿ ಭಕ್ತರ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ನೂಕುನುಗ್ಗಲು ಉಂಟಾಗಿ ಕಾಲ್ತುಳಿತದಂತಹ ಅಹಿತಕರ ಘಟನೆಗಳು ನಡೆಯಬಹುದು. ಹಾಗಾಗಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಹೊರ ಜಿಲ್ಲೆಗಳಿಂದ ಬರುವ ಕೆಎಸ್‌ಆರ್‌ಟಿಸಿ ಬಸ್‌ಗಳು ಹಾಗೂ ಭಕ್ತರ ಸಂಖ್ಯೆಯನ್ನು ನಿಯಂತ್ರಿಸಬೇಕು ಎಂದು ಎಸ್‌ಪಿ ತಮ್ಮ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಸವಾಲಾಗಿ ಪರಿಣಮಿಸಿದ ಜನಸಾಗರ: ಪ್ರತಿದಿನ ಸುಮಾರು ಮೂರರಿಂದ ಮೂರೂವರೆ ಲಕ್ಷ ಭಕ್ತರು ಹಾಸನಾಂಬೆಯ ದರ್ಶನಕ್ಕೆ ಆಗಮಿಸುತ್ತಿರುವುದರಿಂದ ಜಿಲ್ಲಾಡಳಿತಕ್ಕೆ ಪರಿಸ್ಥಿತಿ ನಿಭಾಯಿಸುವುದು ಕಷ್ಟಕರವಾಗಿದೆ. ಸುಗಮ ದರ್ಶನಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ಸರಣಿ ಸಭೆಗಳನ್ನು ನಡೆಸಿ, ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಭಕ್ತರ ಪ್ರವಾಹವನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಧರ್ಮದರ್ಶನದ ಸಾಲಿನಂತೆಯೇ ವಿಶೇಷ ದರ್ಶನದ ಸಾಲುಗಳಲ್ಲೂ ಗಂಟೆಗಟ್ಟಲೆ ಕಾಯಬೇಕಾಗಿದ್ದು, ದರ್ಶನ ಮುಗಿಸಿ ಬರುಷ್ಟರಲ್ಲಿ ಭಕ್ತರು ಹೈರಾಣಾಗುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಸಚಿವ ಕೃಷ್ಣ ಬೈರೇಗೌಡ ಮತ್ತು ಜಿಲ್ಲಾಧಿಕಾರಿ ಲತಾ ಕುಮಾರಿ ಅವರು, 'ಹಾಸನಾಂಬೆ ದರ್ಶನಕ್ಕೆ ಬರುವ ಭಕ್ತರು ದೀರ್ಘ ಸರತಿ ಸಾಲಿನಲ್ಲಿ ನಿಲ್ಲಲು ಮಾನಸಿಕವಾಗಿ ಸಿದ್ಧರಾಗಿ ಬನ್ನಿ' ಎಂದು ಪದೇ ಪದೇ ಮನವಿ ಮಾಡುತ್ತಿದ್ದಾರೆ.

ಪೊಲೀಸ್ ಇಲಾಖೆಯ ನಡೆಯ ಬಗ್ಗೆ ಚರ್ಚೆ: ಭಕ್ತರ ಸುರಕ್ಷತೆಗಾಗಿ ಹೆಚ್ಚಿನ ಕ್ರಮ ಕೈಗೊಳ್ಳಬೇಕಾದ ಪೊಲೀಸ್ ಇಲಾಖೆಯೇ ಹೀಗೆ ಅಸಹಾಯಕತೆ ವ್ಯಕ್ತಪಡಿಸಿ ಪತ್ರ ಬರೆದಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಇದು ಅಹಿತಕರ ಘಟನೆ ನಡೆದರೆ ತಮ್ಮ ಮೇಲಿನ ಹೊಣೆಯನ್ನು ತಪ್ಪಿಸಿಕೊಳ್ಳಲು ಪೊಲೀಸ್ ಇಲಾಖೆ ಮಾಡಿದ ಜಾಣ್ಮೆಯ ನಡೆಯೇ? ಎಂದು ಜನರು ಪ್ರಶ್ನಿಸುತ್ತಿದ್ದಾರೆ. ಇನ್ನಷ್ಟು ಸಿಬ್ಬಂದಿಯನ್ನು ನಿಯೋಜಿಸಿ ಭದ್ರತೆ ಒದಗಿಸುವ ಬದಲು ಈ ರೀತಿ ಕೈಚೆಲ್ಲುವುದು ಸರಿಯಲ್ಲ ಎಂದು ಹಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹಗಲಿರುಳು ಶ್ರಮಿಸುತ್ತಿರುವ ಸಚಿವರು: ಈ ಬಾರಿ ಜನಸ್ನೇಹಿ ದರ್ಶನ ವ್ಯವಸ್ಥೆ ಕಲ್ಪಿಸಲು ಶ್ರಮಿಸುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಹಾಸನದಲ್ಲೇ ಬೀಡುಬಿಟ್ಟು ಹಗಲಿರುಳು ವ್ಯವಸ್ಥೆಗಳನ್ನು ಪರಿಶೀಲಿಸುತ್ತಿದ್ದಾರೆ. ಆದರೂ ನಿರೀಕ್ಷೆ ಮೀರಿದ ಭಕ್ತರ ಆಗಮನವು ದೊಡ್ಡ ಸವಾಲಾಗಿ ಪರಿಣಮಿಸಿದೆ.

ಹೊರಟವರಿಗೆ ಮುಖಭಂಗ

ಬಗ್ಗೆ ಬೊಗಳೆ ಮಾತನಾಡುವವರಿಗೆ ತಕ್ಕ ಪಾಠ ಹೇಳಿದೆ. ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳಿಗೆ ಕಾನೂನು ಸುವ್ಯವಸ್ಥೆಯ ಷರತ್ತು ವಿಧಿಸಿ ಅನುಮತಿ ನೀಡಬೇಕಾಗಿರುವುದು ಸರ್ಕಾರದ ಕರ್ತವ್ಯ. ಆದರೆ ಕಾನೂನು ಸುವ್ಯವಸ್ಥೆಯ ಹೆಸರಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಸಿರುಗಟ್ಟಿಸಲು ಹೋದರೆ ದೇಶದ ಸಂವಿಧಾನ ಅದಕ್ಕೆ ಅವಕಾಶ ಕೊಡುವುದಿಲ್ಲ ಎಂಬ ಸಂದೇಶ ಇಂದಿನ ತೀರ್ಪಿನ ಮೂಲಕ ರವಾನೆಯಾಗಿದೆ, ರಾಷ್ಟ್ರಭಕ್ತ ಸಂಘಟನೆಗಳನ್ನು ಮೆಟ್ಟಿ ನಿಲ್ಲುವ ಕಾಂಗ್ರೆಸ್ ನ ಕುಟಿಲ ನೀತಿಯು ನ್ಯಾಯಾಲಯದ ತೀರ್ಪಿನಿಂದ ನಿಷ್ಕ್ರಿಯಗೊಂಡಂತಾಗಿದೆ ಎಂದು ತಿಳಿಸಿದ್ದಾರೆ.

ಶೈಕ್ಷಣಿಕ ಸಮೀಕ್ಷೆ ಅ.31ರವರೆಗೆ ವಿಸ್ತರಣೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿ ಹೊರತುಪಡಿಸಿ ರಾಜ್ಯದಾದ್ಯಂತ ಶೇಕಡ 95ರಷ್ಟು ಸಮೀಕ್ಷೆ ಪೂರ್ಣಗೊಂಡಿದೆ. ಕೆಲವು ಜಿಲ್ಲೆಗಳಲ್ಲಿ ಶೇಕಡಾ ನೂರರಷ್ಟು ಪೂರ್ಣಗೊಂಡಿದೆ. ರಾಮನಗರ (ಶೇ 86), ಧಾರವಾಡ (ಶೇ 88) ಮತ್ತು ಬೀದರ್‌ನಲ್ಲಿ (ಶೇ 79.46) ತುಸು ಕುಂಠಿತವಾಗಿದೆ ಬೆಂಗಳೂರಿನಲ್ಲಿ ತಡವಾಗಿ ಸಮೀಕ್ಷೆ ಆರಂಭವಾದ ಕಾರಣ ಶೇಕಡ 45ರಷ್ಟು ಪ್ರಗತಿ ಆಗಿದೆ ಬಾಕಿ ಇರುವ ಜಿಲ್ಲೆಗಳಲ್ಲಿ ಮಾತ್ರ ಅ. 31ರವರೆಗೆ ಸಮೀಕ್ಷೆ ನಡೆಯಲಿದೆ ಎಂದರು.

384 ಕೋಟಿ ಬಿಡುಗಡೆ ಮಾಡಿದ ಕೇಂದ್ರ

384.40 ಕೋಟಿ ಮತ್ತು ಮಹಾರಾಷ್ಟ್ರಕ್ಕೆ 1,566.40 ಕೋಟಿ ನೀಡಲು ಒಪ್ಪಿಗೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಪ್ರವಾಹ, ಭೂಕುಸಿತ, ಮೇಘಸ್ಫೋಟದಿಂದ ತೊಂದರೆಗೊಳಗಾದ ಜನರಿಗೆ ಎಲ್ಲ ರೀತಿಯ ಸಹಾಯ ನೀಡಲು ಕೇಂದ್ರ ಸಂಪೂರ್ಣ ಬದ್ಧವಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಪ್ರಸಕ್ತ ಸಾಲಿನಲ್ಲಿ ಈಗಾಗಲೇ ಎಸ್‌ಡಿಆರ್‌ಎಫ್ ಅಡಿಯಲ್ಲಿ 27 ರಾಜ್ಯಗಳಿಗೆ 13,603.20 ಕೋಟಿ ಮತ್ತು ಎನ್‌ಡಿಆರ್‌ಎಫ್ ಅಡಿಯಲ್ಲಿ 15 ರಾಜ್ಯಗಳಿಗೆ 2,189.28 ಕೋಟಿ ಬಿಡುಗಡೆ ಮಾಡಲಾಗಿದೆ. ಇದಲ್ಲದೆ 21 ರಾಜ್ಯಗಳಿಗೆ ಎಸ್‌ಡಿಎಂಎಫ್ ನಿಧಿಯಿಂದ 4,571.30 ಕೋಟಿ ಮತ್ತು ಒಂಬತ್ತು ರಾಜ್ಯಗಳಿಗೆ ಎನ್‌ಡಿಎಂಎಫ್ ಅಡಿಯಿಂದ 372.09 ಕೋಟಿ ಬಿಡುಗಡೆ ಮಾಡಲಾಗಿದೆ.

ಕೆ.ಬಿ.ಗಣಪತಿ ಸ್ಮರಣಾರ್ಥ ಓಟದ ಸ್ಪರ್ಧೆ

ಎಸ್.ಶ್ರೇಯಸ್ (ರೋಟರಿ ವೆಸ್ಟ್) ದ್ವಿತೀಯ, ಹೆಚ್.ವಿ. ಚಿರಾಗ್ (ವಿವಿಎಸ್ ಬಿಎಂಶ್ರೀ) ತೃತೀಯ, ಚಿರಂತನ್ ಹೆಚ್.ಜಿ. ಗೌಡ (ಕೆಎನ್‌ಸಿಐ ಜಿಎಸ್), ವಿ.ಸುದರ್ಶನ್ ಜೈನ್ (ಕ್ಯಾಪಿಟಲ್ ಪಬ್ಲಿಕ್ ಸ್ಕೂಲ್) ಹಾಗೂ ಎಂ.ಮೇಘನಾಥ್‌ಗೌಡ (ಕೆ.ಪಿ. ಕಾನ್ವೆಂಟ್) ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದರೆ, ವಿದ್ಯಾರ್ಥಿನಿಯರ ವಿಭಾಗದಲ್ಲಿ ಇಂಚರ (ಕುರುಬೂರ್ ಕ್ಲಬ್) ಪ್ರಥಮ, ಮಮತ (ಕುರುಬೂರ್ ಕ್ಲಬ್) ದ್ವಿತೀಯ, ಎಸ್. ಜಯಶ್ರೀ (ಶ್ರೀ ಚಾಮುಂಡೇಶ್ವರಿ ಸ್ಪೋರ್ಟ್ಸ್ ಕ್ಲಬ್) ತೃತೀಯ, ಹೆಚ್.ಸಹ (ಸೆಂಟ್ ಜೋಸೆಫ್ ಸ್ಕೂಲ್), ದಿವ್ಯಶ್ರೀ (ಶ್ರೀ ಚಾಮುಂಡೇಶ್ವರಿ ಸ್ಪೋರ್ಟ್ಸ್ ಕ್ಲಬ್) ಹಾಗೂ ವರ್ಷ (ಡಿಎವಿ ಪಬ್ಲಿಕ್ ಸ್ಕೂಲ್) ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದರು.

800 ಮೀಟರ್ ಓಟದ ಸ್ಪರ್ಧೆ: ಓವೆಲ್ ಮೈದಾನದಲ್ಲಿ ನಡೆದ ಹಿರಿಯ ಪ್ರಾಥಮಿಕ ಶಾಲಾ ಬಾಲಕರ 800 ಮೀಟರ್ ಓಟದ ಸ್ಪರ್ಧೆಯಲ್ಲಿ ಎನ್.ಸುಭಾಷ್ ಗೌಡ (ನ್ಯೂ ಆಕ್ಸ್‌ಫರ್ಡ್ ಪಬ್ಲಿಕ್ ಸ್ಕೂಲ್) ಪ್ರಥಮ, ಎಂ.ಎಸ್.ವಿಶಾಲ್ (ಬೆಡನ್ ಪೊವೆಲ್ ಪಬ್ಲಿಕ್ ಸ್ಕೂಲ್) ದ್ವಿತೀಯ, ಎನ್.ತನ್ಮಯ್ (ಭಾರತೀಯ ವಿದ್ಯಾ ಭವನ, ಮೈಸೂರು) ತೃತೀಯ, ಜಾನ್ವಿಕ್ (ಡಿಎವಿ ಪಬ್ಲಿಕ್ ಸ್ಕೂಲ್), ಕೆ.ಎಸ್.ಅನುಷ್ (ಬಿವಿಬಿ), ಎಸ್.ಎಂ.ಆಯುಷ್(ಬಿವಿಬಿ) ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದರೆ, ಬಾಲಕಿಯರ ವಿಭಾಗದಲ್ಲಿ ಆರ್.ನಿಹಾ (ಸೆಂಟ್ ಜೋಸೆಫ್ ಸ್ಕೂಲ್) ಪ್ರಥಮ, ಕೆ.ಎಂ.ಪ್ರಗತಿ (ವಿದ್ಯಾದರ್ಶಿನಿ, ಕುರುಬೂರು) ದ್ವಿತೀಯ, ಎಂ.ಮೇಘನಾ(ವಿದ್ಯಾ ದರ್ಶಿನಿ, ಕುರುಬೂರು) ತೃತೀಯ, ಎಸ್.ಪ್ರಕೃತಿ (ವಿದ್ಯಾ ದರ್ಶಿನಿ, ಕುರುಬೂರು), ಬಿಂದು(ವಿದ್ಯಾ ದರ್ಶಿನಿ, ಕುರುಬೂರು) ಹಾಗೂ ಎಂ.ಕೆ.ಗೌರಿ(ಬಿವಿಬಿ) ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದರು.



ವಿಜೇತ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿರುವುದನ್ನು ಚಿತ್ರದಲ್ಲಿ ಕಾಣಬಹುದು.

400 ಮೀಟರ್ ಓಟದ ಸ್ಪರ್ಧೆ: ಕಿರಿಯ ಪ್ರಾಥಮಿಕ ಶಾಲೆ ಬಾಲಕರ 400 ಮೀಟರ್ ಓಟದಲ್ಲಿ ಎನ್.ಪವನ್ (ಭಾರತೀಯ ವಿದ್ಯಾ ಭವನ, ಮೈಸೂರು) ಪ್ರಥಮ, ಯು.ರಿಷಾನ್ (ಸೆಂಟ್ ಜೋಸೆಫ್ ಸ್ಕೂಲ್) ದ್ವಿತೀಯ, ಆರ್ಯನ್ ಕವನ್ (ಡಿಪಿಐಆರ್‌ಎಸ್) ತೃತೀಯ, ಎಸ್. ಕಾಶಿಶ್(ಬಿವಿಬಿ), ಎಸ್.ಸೂರ್ಯ (ಎಂಡಬ್ಲೂಎಲ್‌ಎಸ್‌ಎಸ್), ಸಂಯೋಗ್ ಕುಟ್ಟಪ್ಪ (ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್) ಹಾಗೂ ಗಾನವ್ ಜಿ.ಗೌಡ (ಕೆಎನ್‌ಸಿ) ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದರೆ, ಬಾಲಕಿಯರ ವಿಭಾಗದಲ್ಲಿ ಇ.ಉತ್ರಾ (ಬಿವಿಬಿ) ಪ್ರಥಮ, ವೃದ್ಧಿ ಪೊನ್ನಣ್ಣ (ಜ್ಞಾನಗಂಗಾ ಸ್ಕೂಲ್) ದ್ವಿತೀಯ, ಸಿ.ಸಿಂಚನ (ಕುರುಬೂರ್ ಕ್ಲಬ್) ತೃತೀಯ, ಸಿಂಚನ (ಕುರುಬೂರ್ ಕ್ಲಬ್), ಶಾನ್ವಿ (ಕುರುಬೂರ್ ಕ್ಲಬ್) ಹಾಗೂ ಲಲಿತ (ಕ್ರೈಸ್ಟ್ ಪಬ್ಲಿಕ್ ಸ್ಕೂಲ್) ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದರು.

ಎಲ್ಲಾ ಪುಟಾಣಿಗಳಿಗೂ ಬಹುಮಾನ!: ಕಡೆಯಲ್ಲಿ 5 ವರ್ಷದೊಳಗಿನ ಪುಟಾಣಿಗಳಿಗೆ ನಡೆದ 100 ಮೀಟರ್ ಓಟದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಪದಕದ ಜೊತೆಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ನಂತರ ಲಯನ್ಸ್ ಹಾಲ್‌ನಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ರಸ್ತೆ ಹಾಗೂ ಇನ್ನಿತರೆ ವಿಭಾಗಗಳ ಓಟದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ಮತ್ತು ಬಹುಮಾನ ನೀಡಿ ಅಭಿನಂದಿಸಲಾಯಿತು.

ಹಸಿರು ಬಾವುಟ ತೋರುವ ರಸ್ತೆ ಓಟದ ಸ್ಪರ್ಧೆಗೆ ಚಾಲನೆ ನೀಡಿದ್ದ ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ರಸ್ತೆ ಓಟದ ಸ್ಪರ್ಧೆ ಆಯೋಜನೆ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಅಭಿನಂದನೆ ತಿಳಿಸಿದರು. ಪತ್ರಕರ್ತ ನರಸಿಂಹ ಮೂರ್ತಿ, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಪಿಸ್ತೂಲ್ ಸೂಟರ್ ಹೆಚ್.ಡಿ.ಅರವಿಂದ ಗೌಡ, ಮೈಸೂರು ಅಥ್ಲೆಟಿಕ್ಸ್‌ಕ್ಲಬ್ ಅಧ್ಯಕ್ಷ ಡಾ.ಚೈನ್ ಸಿಂಗ್ ರಾಜ್ ಪುರೋಹಿತ್, ಪೋಷಕ ಸಿ.ಕೃಷ್ಣ, ಕಾರ್ಯದರ್ಶಿ ಎಂ.ಯೋಗೇಂದ್ರ, ಸಂಘಟನಾ ಕಾರ್ಯದರ್ಶಿ ಜಿ.ಆರ್.ಪ್ರಭಾಕರ್, ಸಮಾಜ ಸೇವಕ ಹರೀಶ್ ಮೊಗಣ್ಣ ಹಾಗೂ ಮೈಸೂರು ಅಥ್ಲೆಟಿಕ್ಸ್ ಕ್ಲಬ್‌ನ ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಹಿಂದಿನ ಬೆರಳಚ್ಚು ಸಂಗ್ರಹದಿಂದ ಖದೀಮನ ಪತ್ತೆ

ಸ್ಪಷ್ಟ ಮುದ್ರೆಗಳ ಬಗ್ಗೆ ಮೈಸೂರು ಜಿಲ್ಲಾ ಬೆರಳಚ್ಚು ಘಟಕದ ಇನ್ಸ್‌ಪೆಕ್ಟರ್ ಎಂ.ಎನ್. ಬಾಲಸುಬ್ರಹ್ಮಣ್ಯ ಅವರು ಮಾಹಿತಿ ಕಲೆ ಹಾಕಿದರು. ಎಎಸ್‌ಐ ಹೆಚ್.ಆರ್.ಹರೀಶ್, ಸಿಬ್ಬಂದಿಗಳಾದ ಸತೀಶ್, ಮಧುಚಂದ್ರ ಅವರು ಸಹ ಮನೆಯಲ್ಲಿದ್ದ ಮತ್ತಷ್ಟು ಸಾಕ್ಷ್ಯಗಳನ್ನು ಕಲೆ ಹಾಕಿದ್ದರು. ಮತ್ತೊಂದೆಡೆ ಸೀನ್ ಆಫ್ ಕ್ರೈಂನಲ್ಲಿ ಶ್ವಾನದಳದ ಪ್ರಸನ್ನ ಅವರು ಶ್ವಾನದಿಂದ ಇನ್ನಷ್ಟು ಸಾಕ್ಷ್ಯಗಳನ್ನು ಕಲೆ ಹಾಕಿದರು.

ಬೆರಳಚ್ಚು ತಜ್ಞರಾದ ಬಾಲಸುಬ್ರಮ್ಮಣ್ಯ ಅವರು ತಮ್ಮಲ್ಲಿದ್ದ ಆರೋಪಿಗಳ ಬೆರಳಚ್ಚುಗಳನ್ನು ಇಲ್ಲಿ ಕಳ್ಳತನವಾಗಿರುವ ಬೆರಳಚ್ಚಿಗೆ ಮ್ಯಾಚ್ (ಹೊಂದಿಸಿ) ಮಾಡಿ ನೋಡಿದಾಗ ಹೆಬ್ಬಾಳ ಕೊಪ್ಪಲಿನಲ್ಲಿ ಕಳ್ಳತನ ಮಾಡಿರುವವನು ಹುಣಸೂರು ತಾಲೂಕು ಕಲ್ಕುಣಿಕೆಯ ನಿವಾಸಿ ಹರೀಶ್ ಎಂದು ಸ್ಪಷ್ಟವಾಯಿತು.

2005 ರಲ್ಲಿ ನಂಜನಗೂಡು ತಾಲೂಕು ಬದನವಾಳು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅನುಮಾನಾಸ್ಪದವಾಗಿ ವ್ಯಕ್ತಿಯೊಬ್ಬ ಓಡಾಡುತ್ತಿದ್ದ. ಆತನನ್ನು ಕರೆತಂದು ವಿಚಾರಣೆ ಮಾಡಿ ಆತನ ಬೆರಳಚ್ಚು ಸಂಗ್ರಹಿಸಿ ಜಿಲ್ಲಾ ಬೆರಳಚ್ಚು ಘಟಕದಲ್ಲಿ ಸಂಗ್ರಹಿಸಿಡಲಾಗಿತ್ತು. ಈ ವೇಳೆ ಬಾಲಸುಬ್ರಹ್ಮಣ್ಯ ಅವರು ತಮ್ಮ ಸಂಗ್ರಹದಲ್ಲಿರುವ ಆರೋಪಿಗಳ ಬೆರಳಚ್ಚುಗಳನ್ನು ಈಗ ಕಳ್ಳತನ ಆಗಿರುವ ಕಳ್ಳನ ಬೆರಳಚ್ಚಿಗೆ ಮ್ಯಾಚ್ ಮಾಡಿದಾಗ ಆರೋಪಿ ಹರೀಶ್ ಎಂಬುದು ಸ್ಪಷ್ಟವಾಯಿತು.

ಈ ಮೂಲಕ ಅಂದು ಸಂಗ್ರಹಿಸಿದ್ದ ಬೆರಳಚ್ಚಿನಿಂದ ಈಗ ನಡೆದಿರುವ ಪ್ರಕರಣ ಬೇಧಿಸಲು ಪೊಲೀಸರಿಗೆ ಸಹಾಯವಾಗಿದೆ. ಎಷ್ಟೇ ವರ್ಷವಾದರೂ ಸರಿ ಅಪರಾಧ ಕೃತ್ಯ ನಡೆದಾಗ ಅಲ್ಲಿ ಸಂಗ್ರಹಿಸುವ ಬೆರಳಚ್ಚು ಒಂದಲ್ಲಾ ಒಂದು ದಿನ ಉಪಯೋಗಕ್ಕೆ ಬರುತ್ತದೆ ಎಂಬುದು ಇದರಿಂದ ಸ್ಪಷವಾಗಿದೆ.

ಹಳೆ ಆರೋಪಿ ಪತ್ತೆ ಸುಲಭ, ಆದರೆ ಹೊಸದಾಗಿ ಕೃತ್ಯ ಎಸಗುವವನ ಸೆರೆ ಕಷ್ಟ

ಈಗಾಗಲೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಆರೋಪಿಯನ್ನು ಪತ್ತೆ ಮಾಡುವುದು ಪೊಲೀಸರಿಗೆ ಬಹಳ ಸುಲಭವಾಗುತ್ತದೆ. ಆದರೆ ಹೊಸದಾಗಿ ಅಪರಾಧ ಎಸಗುವ ಆರೋಪಿ ಪತ್ತೆ ಮಾಡುವುದು ಪೊಲೀಸರಿಗೆ ಕಷ್ಟದ ಕೆಲಸ.

ಅಪರಾಧ ನಡೆಸಿರುವ ಪ್ರತಿಯೊಬ್ಬ ಆರೋಪಿಯ ಬೆರಳಚ್ಚು, ಭಾವಚಿತ್ರ, ಆಧಾರ್ ಸಂಖ್ಯೆ ಸೇರಿದಂತೆ ಇತರೆ ಮಾಹಿತಿಯನ್ನು ಪೊಲೀಸರು ಸಂಗ್ರಹಿಸಿರುತ್ತಾರೆ.

ಎಲ್ಲೇ ಅಪರಾಧ ನಡೆದರೂ ಅಲ್ಲಿನ ಆರೋಪಿಯ ಬೆರಳಚ್ಚು ಹಾಗೂ ಭಾವಚಿತ್ರವನ್ನು ವಿವಿಧ ಪೊಲೀಸ್ ಠಾಣೆಗಳಲ್ಲಿ ಈಗಾಗಲೇ ಸಂಗ್ರಹಿಸಿರುವ ಬೆರಳಚ್ಚು ಹಾಗೂ ಭಾವಚಿತ್ರವನ್ನು ಆನ್‌ಲೈನ್ ಮೂಲಕ ಮ್ಯಾಚ್ ಮಾಡುತ್ತಾರೆ. ಆದರೆ ಹೊಸದಾಗಿ ಅಪರಾಧ ಕೃತ್ಯ ನಡೆಸಿದ ಆರೋಪಿ ಬಗ್ಗೆ ತಕ್ಷಣ ಸಾಕ್ಷ್ಯ ದೊರೆಯದ ಕಾರಣ ಆತನನ್ನು ಪತ್ತೆ ಮಾಡುವುದು ಕಷ್ಟ. ಆದರೂ ಒಂದಲ್ಲ ಒಂದು ದಿನ ಆದ ಪೊಲೀಸರ ಕೈಗೆ ಸಿಕ್ಕಿ ಬೀಳುವುದು ನಿಶ್ಚಿತ.

ಅಪಘಾತ: ಇಬ್ಬರು ಮಹಿಳೆಯರ ಸಾವು

ಅದೇ ವೇಳೆ ಮಳವಳ್ಳಿ ಕಡೆಯಿಂದ ಬಂದ ಇನ್ನೊಂದು ಸಾರಿಗೆ ಬಸ್ ಸಹ ಡಿಕ್ಕಿಯಾಗಿದೆ.

ಘಟನೆಯಲ್ಲಿ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಸುಮಾರು 60 ವರ್ಷದ ಮಹಿಳೆ ಮಳವಳ್ಳಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರೆ, ಸುಮಾರು 50 ವರ್ಷದ ಮತ್ತೊಬ್ಬ ಮಹಿಳೆಯು ಚಿಕಿತ್ಸೆ ಫಲಕಾರಿಯಾಗದೆ ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಗ್ರಾಮಾಂತರ ಪೊಲೀಸರು ಮೃತ ಮಹಿಳೆಯರ ವಿಳಾಸ ಪತ್ತೆಗೆ ಮುಂದಾಗಿದ್ದಾರೆ.

ಮೂರು ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದ ವಿವಿಧ ಜಿಲ್ಲೆಯ 8ಕ್ಕೂ ಅಧಿಕ ಮಂದಿ ಪ್ರಯಾಣಿಕರಿಗೆ ತೀವ್ರವಾಗಿ ಗಾಯಗಳಾಗಿವೆ. ಅಲ್ಲದೇ 70ಕ್ಕೂ ಅಧಿಕ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗಾಯಾಳುಗಳಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಕೆಲವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಾನವೀಯತೆ ಮೆರೆದ ಸಾರ್ವಜನಿಕರು: ಘಟನೆ ನಡೆದ ಕೂಡಲೇ ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ತೆರಳಿ ಸಾರ್ವಜನಿಕರ ಸಹಾಯದೊಂದಿಗೆ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವಲ್ಲಿ ಯಶಸ್ವಿಯಾದರು. ಅಲ್ಲದೇ ಘಟನೆಯಿಂದಾಗಿ ಒಂದು ಗಂಟೆಗೂ ಅಧಿಕ ಕಾಲ ರಾಷ್ಟ್ರೀಯ ಹೆದ್ದಾರಿ ಯಲ್ಲಿ ಸಂಚಾರ ಅಸ್ತವ್ಯಸ್ತವಾಗಿತ್ತು. ಬಸ್‌ನಲ್ಲಿದ್ದ ಗಾಯಾಳುಗಳನ್ನು ಸ್ಥಳೀಯರು ಅಂಬ್ಯುಲೆನ್ಸ್ ಹಾಗೂ ವಾಹನಗಳಲ್ಲಿ ಆಸ್ಪತ್ರೆಗೆ ಸೇರಿಸಿದರು. ಬಸ್‌ನ ಚಾಲಕರಿಗೂ ಸಹ ತೀವ್ರವಾಗಿ ಗಾಯವಾಗಿದೆ.

ಘಟನಾ ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಸಿಪಿಐ ಬಿ.ಎಸ್.ಶ್ರೀಧರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಮೈಸೂರು ಮಿತ್ರ

ದೀಪಾವಳಿಯಿಂದ ದೀಪಾವಳಿಗೆ ವರ್ಷ ಭವಿಷ್ಯ-2025

ಮೇಷ

ಈ ದೀಪಾವಳಿಯಿಂದ ಬರುವ ದೀಪಾವಳಿಯವರೆಗೆ ಗುರುಬಲದ ಕೊರತೆಯಿಂದ ನಿಮ್ಮ ಸಾಮಾಜಿಕ, ಸಾಂಸಾರಿಕ ಜೀವನ ಹೆಚ್ಚು ಪ್ರಕಾಶಮಾನವಾಗಿರದು. ಇದು ನಿಮ್ಮನ್ನು ನಾನಾ ವಿಧಿಗಳಿಂದ ಕಾಡುತ್ತದೆ. ಹೆಜ್ಜೆ ಹೆಜ್ಜೆಗೂ ಅಸಫಲತೆ ಹಾಗೂ ಅಡ್ಡಿ ಆತಂಕಗಳು ಎದುರಾಗುವುದು. ಕಷ್ಟಪಟ್ಟು ಗಳಿಸಿಕೊಂಡಿರುವ ನಿಮ್ಮ ಸಿರಿ, ಸಂಪದಗಳನ್ನು ಸರಿಯಾಗಿ ರಕ್ಷಿಸಿಕೊಳ್ಳಿ. ಜೀವೇ ಶಾಂತಿ ಪೀಡಿತಃ ಎಂಬ ಋಷಿವಾಣಿಯಂತೆ ನಿಮ್ಮ ಆತ್ಮವಿಶ್ವಾಸ ಕುಗ್ಗುವುದು. ಯಾರನ್ನೂ ಎದುರು ಹಾಕಿಕೊಳ್ಳದಿರಿ. ನಿಮ್ಮ ಬುದ್ಧಿಶಕ್ತಿ ಸಮಯೋಚಿತವಾಗಿ ಕಾರ್ಯ ನಿರ್ವಹಿಸದು. ವ್ಯಾಪಾರ, ವ್ಯವಹಾರಗಳಲ್ಲಿ ಅಲ್ಪ ಪ್ರಗತಿ. ವ್ಯಾಜ್ಯಗಳಿಂದ ಬವಣೆ ಪಡುವಿರಿ. ಧರ್ಮೋ ರಕ್ಷತಿ ರಕ್ಷಿತಃ ಎಂಬ ಆರ್ಯವಾಣಿಯಂತೆ ನಡೆಯಿರಿ.



ಈ ವರ್ಷ ಪೂರ್ತಿ ಯಮಾಗ್ರಜನಾದ ಶ್ರೀ ಶನಿಯ ಫಲ ಅಷ್ಟೇನು ಅನುಕೂಲವಾಗಿರದು. ಧನ ಸಂಪತ್ತಿನ ಕೇತುವಿನಿಂದ ದುಃಖ, ಭಯ, ಚಿಂತೆಗಳು ಕಾಡುವುದು. ಶತ್ರುಗಳಿಂದ ಅಪಮಾನ, ನ್ಯಾಯವಾದ ಕಾರ್ಯದಲ್ಲಿ ಅಸಫಲತೆ, ಅಸಮರ್ಪಕ ಆರೋಗ್ಯ.

ಏಕಾದಶ ರಾಹು: ಕಾರ್ಯಸಿದ್ಧಿ, ಆಕಸ್ಮಿಕ ಧನಲಾಭ.
ಪಂಚಮ ಕೇತು: ಪುಣ್ಯ ಕಾರ್ಯಾಸಕ್ತಿ, ಮಕ್ಕಳಿಂದ ತೊಂದರೆ
ಪರಿಹಾರಕ್ಕೆ: ಶ್ರೀ ಗುರು ಪ್ರಾರ್ಥನೆ, ದಶರಥ ಕೃತ ಶನಿ ಸ್ತೋತ್ರ ಪಠಣ.

ವೃಷಭ

ಈ ಬೆಳಕಿನ ಹಬ್ಬಕ್ಕೆ ದ್ವಿತೀಯ ಭಾವದಲ್ಲಿ ಸಂಚರಿಸುವ ದೇವ ಗುರುವಿನಿಂದ ಸರ್ವಕಾರ್ಯಗಳಲ್ಲಿ ಜಯವೂ, ಯಶಃ ಕೀರ್ತಿಗಳೂ, ಶುಭ ಕಾರ್ಯಾಚರಣೆಯೂ ಉಂಟಾಗುವುದು. ಮನೆಯಲ್ಲಿ ಶುಭಕಾರ್ಯಗಳು ಜರುಗುವುದು, ಮನೆಯ ಮುಂದೆ ಹಸಿರು ಚಪ್ಪರ ಹಾಕುವ ಸನ್ನಿವೇಶ ಬರಲಿದೆ. ಹೊಸ ವಾಹನದ ಒಡೆಯರಾಗುವಿರಿ. ಮನೆ ಮಂದಿಯ ಸಹಕಾರ ಸಹಾಯ ಹಸ್ತ ದೊರೆಯುವುದು. ಮಧ್ಯೆ ಕೆಲ ಸಮಯ ತೃತೀಯ ಗುರು ನಿಮ್ಮ ತಾಳ್ಮೆಯ ಪರೀಕ್ಷೆ ಮಾಡಬಹುದು. ಯತ್ನ ಕಾರ್ಯಗಳು ಆಮೆಗತಿಯಲ್ಲಿ ಸಾಗುವುದು. ದಾಯಾದಿಗಳಿಂದ ಕಿರುಕುಳ ಅನುಭವಿಸಬೇಕಾದೀತು.



ಏಕದಶ ಲಾಭಸ್ಥಾನದಲ್ಲಿ ಗೋಚರಿಸುವ ಸೂರ್ಯಪುತ್ರನಾದ ಶ್ರೀ ಶನಿದೇವನಿಂದ ಕೈಗೊಂಡ ಕೆಲಸ ಕಾರ್ಯಗಳಲ್ಲಿ ಸಿದ್ಧಿಯೂ, ನೀವು ಮಾಡುವ ಕೆಲಸಕ್ಕೆ ತಕ್ಕನಾದ ಪ್ರತಿಫಲವೂ ದೊರೆಯುವುದು. ನ್ಯಾಯಾಲಯ ವಿಚಾರಗಳು ನಿಮಗೆ ಅನುಕೂಲಕರವಾಗಿ ನಡೆಯುವ ಸಾಧ್ಯತೆ ಇರುತ್ತದೆ. ಎಣ್ಣೆ, ಧಾನ್ಯ, ಸಿಮೆಂಟ್, ಕಬ್ಬಿಣ ಸಂಬಂಧಿ ವಿಷಯಗಳಿಂದ ಅಧಿಕ ಲಾಭವನ್ನು ಗಳಿಸುವಿರಿ.

ದಶಮ ರಾಹು : ಕರ್ಮಚಿಂತೆ, ಕಲಹ, ಅಶಾಂತಿ, ಧನವ್ಯಯ
ಚತುರ್ಥ ಕೇತು : ಸಂಬಂಧಿಕರೊಂದಿಗೆ ಕಲಹ, ವಾಹನದಿಂದ ನಷ್ಟ, ಸ್ಥಾನ ಚ್ಯುತಿ.
ಪರಿಹಾರಕ್ಕೆ: ಶ್ರೀ ಸುಬ್ರಹ್ಮಣ್ಯದೇವರ ಉಪಾಸನೆ.

ಮಿಥುನ

ದೀಪಾವಳಿಯ ಆರಂಭಕ್ಕೆ ಕೊಂಚ ಮಂದ ಬೆಳಕು. ಎಣಿಸಿದ ಕಾರ್ಯಗಳು ಶುಭಫಲವನ್ನು ನೀಡದ ಸ್ಥಾನದಲ್ಲಿ ಶ್ರೀಗುರು ಸಂಚರಿಸುತ್ತಿದ್ದಾನೆ. ಶುಭಫಲಗಳು ಮರೀಚಿಕೆ ಎನಿಸುತ್ತದೆ. ನೌಕರ ವರ್ಗದವರಿಗೆ ಬೇಡದ ವರ್ಗಾವಣೆಗಳು, ರಾಜಕೀಯ ವ್ಯಕ್ತಿಗಳು ಹಿನ್ನಡೆ ಹಾಗೂ ಅಪವಾದಗಳನ್ನು ಎದುರಿಸುವರು. ಜೀವನದಲ್ಲಿ ಜಾರಬಾರದು ಎಂದಿದ್ದರೆ ತುಂಬಾ ಜಾಗರೂಕರಾಗಿರಿ. ಗ್ರಹಗತಿಗಳು ನೀಡುವ ಪರೀಕ್ಷೆಗಳು ನಿಜಕ್ಕೂ ನಿಮ್ಮನ್ನು ಅಸಹನೀಯ ಪರಿಸ್ಥಿತಿಗೆ ದೂಡಬಹುದು. ಮಧ್ಯೆ ಕೆಲಕಾಲ ಶುಭ ಗುರುವಿನ ಪರಿಣಾಮ ವಿವಾಹ ಯೋಗ್ಯರಿಗೆ ವೆಡ್‌ಲಾಕ್ ಯೋಗವಿದೆ.



ಈ ವರ್ಷಪೂರ್ತಿ ಕಾಕ ವಾಹನನಾದ ಶನಿಫಲವೂ ಅಷ್ಟು ಅನುಕೂಲವಾಗಿರದು. ಸ್ಥಾನಲಾಭವಾದರೂ ಧನ ಕ್ಷಯ ಹಾಗೂ ಇತರರ ನಿಂದನೆಗೆ ಗುರಿಯಾಗುವಿರಿ. ಹಲವರು ಉನ್ನತ ವಿದ್ಯೆ ಪಡೆದು ಕೀರ್ತಿ ಹಾಗೂ ಉನ್ನತ ಸ್ಥಾನಕ್ಕೆ ಭಾಜನರಾಗುವರು. ಕಾಂಟ್ರಾಕ್ಟರುಗಳಿಗೆ ಬೃಹತ್ ಯೋಜನೆಗಳು ದೊರೆಯುವುದು. ಖಾದ್ಯತೈಲ ತಯಾರಿಕರಿಗೆ ಬಂಪರ್ ಧನಲಾಭವಾಗುವುದು.

ನವಮ ರಾಹು : ಗೃಹದಲ್ಲಿ ಶುಭ ಸಮಾರಂಭಗಳು, ತೀರ್ಥ ಯಾತ್ರೆ, ಮನೆಯಲ್ಲಿ ಹಿರಿಯರ ಅವಸಾನ.
ತೃತೀಯ ಕೇತು : ಸಹೋದರರೊಂದಿಗೆ ಬೇಧಾಭಿಪ್ರಾಯ ಸಾಹಸ ಪ್ರವೃತ್ತಿಯಿಂದ ಜಯಕೀರ್ತಿ.
ಪರಿಹಾರಕ್ಕೆ : ಓಂ ಕ್ಲೀಂ ಐಂ ಸೌಂ ನಿತ್ಯ ಮೂರು ಜಪಮಾಲೆ

ಕಟಕ

ಮುಂದಿನ ದೀಪಾವಳಿಯವರೆಗೆ ಸುರಗುರುವು ನಿಮ್ಮನ್ನು ಬಹುವಿಧದಿಂದ ಪರೀಕ್ಷೆಗೆ ಗುರಿ ಮಾಡಲಿದ್ದಾನೆ. ಹಣಕಾಸಿನ ಸ್ಥಿತಿ ಹಾಗೂ ಆರೋಗ್ಯ ಹದಗೆಡುವುದು. ಶ್ವಾಸಸಂಬಂಧಿ ಕ್ಲೇಶಗಳು ಉಂಟಾಗುವುದು. ವೈದ್ಯ ಗುರುಗಳಿಂದ ಪರಿಹಾರ ದೊರಕುವುದು. ಜ್ಞಾತಿ ಬಂಧುಗಳಲ್ಲಿ ಆಸ್ತಿ ವಿಷಯವಾಗಿ ವಿರೋಧ, ಕಲಹಗಳು ಉಂಟಾಗುವುದು. ಕೋಗಿಲೆಯ ಮಧುರ ಧ್ವನಿಯೂ, ನವಿಲಿನ ನರ್ತನವೂ ಹಿತವೆನಿಸುವುದಿಲ್ಲ. ಆತ್ಮಾರ್ಪಣ ಭಾವದಿಂದ ದೈವದಲ್ಲಿ ಮೊರೆ ಹೋಗಿ.



ಅಷ್ಟಮಭಾವದಲ್ಲಿ ಸಂಚರಿಸುವ ಶ್ರೀ ಶನಿದೇವನು ಕೂಡ ನಿಮ್ಮ ಮೇಲೆ ಅಷ್ಟೊಂದು ಕೃಪೆ ತೋರದವನಾಗಿದ್ದಾನೆ. ದಾರಾ-ಪುತ್ರರಲ್ಲಿ ಕಲಹದಿಂದ ಮನಸ್ಸು ಜರ್ಝರಿತವಾಗುವುದು. ಪಿತೃ ಸಮಾನ ವ್ಯಕ್ತಿಯೊಬ್ಬರ ಆರೋಗ್ಯ ಕೆಡಬಹುದು. ನಿಮ್ಮ ಆರೋಗ್ಯದಲ್ಲಿ ಏರಿಳಿತಗಳು ಉಂಟಾದೀತು. ನಿಮ್ಮ ಸಂಪತ್ತು ಅನ್ಯರ ಪಾಲಾದೀತು. ನಿಮಗಾಗದವರು ನಿಮಗೆ ಅಪಕೀರ್ತಿ ತರಲು ಪ್ರಯತ್ನಿಸುವರು. ವಾಹನ ನಿಧಾನವಾಗಿ ಚಲಿಸಿ, ನೀವೂ ಕ್ಷೇಮವಾಗಿರಿ ಇತರರೂ ಕ್ಷೇಮವಾಗಿರಲಿ.



ಅಷ್ಟಮ ರಾಹು: ಧನ ನಷ್ಟ, ಅಪಮೃತ್ಯ ಭಯ, ಎಲ್ಲರಲ್ಲೂ ವಿರೋಧ.
ಪಂಚಮ ಕೇತು: ಮಾನಸಿಕ ಅಶಾಂತಿ, ಭಯ, ಸಂತಾನ ಚಿಂತೆ, ಉದರ ವ್ಯಾಧಿ.

ಸಿಂಹ

ಗುರು ಕೃಪೆಯ ಬಲವೇ ಮಹಾಬಲ. ಈ ದೀಪಾವಳಿ ನಿಮ್ಮ ಬಾಳಲ್ಲಿ ಹೊಂಬೆಳಕನ್ನೇ ತಂದಿದೆ. ಶ್ರದ್ಧಾ, ಭಕ್ತಿಗಳಿಂದ ಮಾಡುವ ಕೆಲಸಗಳಲ್ಲಿ ಯಶಸ್ಸನ್ನು ಕಾಣುವಿರಿ. ಎಲ್ಲರಲ್ಲಿಯೂ ಪ್ರೀತಿಯನ್ನು ಗಳಿಸುವಿರಿ. ವಿದ್ವಜ್ಜನರ ಭೇಟಿ ಹಾಗೂ ಮಾರ್ಗದರ್ಶನ ನಿಮ್ಮ ಜೀವನದ ದಿಕ್ಕನ್ನು ಬದಲಾಯಿಸುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಯಶಸ್ಸು, ಪದಕ, ಪಾರಿತೋಷಕಗಳು ದೊರೆಯುವುದು. ವಿವಾಹಯೋಗ್ಯರು ಮಧು-ಚಂದ್ರಕ್ಕೆ ತೆರಳಲು ಸಿದ್ಧತೆ ಮಾಡಿಕೊಳ್ಳಬಹುದು. ಆರೋಗ್ಯವೂ ಸುಧಾರಿಸುವುದು. ಅಕ್ಟೋಬರ್-ಡಿಸೆಂಬರ್ ಮಧ್ಯೆ ಕೆಲ ಸಮಯ ಗುರುಬಲದ ಕೊರತೆಯಿಂದ ಕಾರ್ಯಸಾಧ್ಯವಲ್ಲದ ಕೆಲಸಗಳಿಂದ ಸಾಮಾಜಿಕವಾಗಿ ಅಗೌರವಕ್ಕೆ ಗುರಿಯಾಗುವ ಸಂಭವ. ಸ್ವಜನರ ಸಹವಾಸ, ಸೌಖ್ಯಗಳಿಂದ ವಂಚಿತರಾಗುವಿರಿ.



ಈ ವರ್ಷಪೂರ್ತಿ ಕಲಿಯುಗ ದಂಡಾಧಿಕಾರಿ ಎನಿಸಿದ ಶನಿದೇವನ ಕೃಪಾಭಾವದಿಂದ ಹೋದೆಯಾ ಪಿಶಾಚಿ ಎಂದರೆ ಬಂದ ಗವಾಕ್ಷಿಯಲ್ಲಿ ಎಂಬಂತೆ ಘಟನಾವಳಿಗಳು ನಡೆದೀತು. ಅಚಾನಕ ಘಟನೆಗಳು, ಅಪಘಾತಗಳಿಂದ ಕಂಗಾಲು ಆಗುವಿರಿ. ವಾಹನ ಡ್ರೈವ್ ಮಾಡುವಾಗ ಮನೆಯಲ್ಲಿ ನಿಮ್ಮನ್ನು ಪ್ರೀತಿಸುವವರು ಇದ್ದಾರೆ ಎಂಬ ನೆನಪಿರಲಿ. ನೀಚಕರ್ಮ ಮಾಡಿ ನಂತರ ಪಶ್ಚಾತ್ತಾಪ ಪಟ್ಟರೆ ಪ್ರಯೋಜನವಿಲ್ಲ. ನ್ಯಾಯಾಲಯ ವಿಚಾರಗಳು ನಿಮಗೆ ಪ್ರತಿಕೂಲವಾಗಿರುವುದು.

ಸಪ್ತಮ ರಾಹು: ದಾಂಪತ್ಯದಲ್ಲಿ ವಿರಸ, ಪ್ರಯಾಣದಿಂದ ಹಾನಿ, ಅಪವಾದ, ಸ್ಥಾನ ಚ್ಯುತಿ, ವ್ಯಾಪಾರದಲ್ಲಿ ಅಲ್ಪ ಪ್ರಗತಿ.
ಜನ್ಮಕೇತು: ಚಿತ್ತಭ್ರಮೆ, ವಿಚಾರ ಹೀನತೆಯಿಂದ ಮಾಡಬಾರದ್ದು ಮಾಡಿ ಮಾನಸಿಕ ಭಯ, ನರದೌರ್ಬಲ್ಯ

ಕನ್ಯಾ

ಈ ದೀಪಾವಳಿ ನಿಮಗೆ ಮಿಶ್ರಫಲವನ್ನು ನೀಡುವುದು, ಸುರಗುರು ನಿಮ್ಮನ್ನು ಬಹುವಿಧದ ಪರೀಕ್ಷೆಗೆ ಗುರಿ ಮಾಡಲಿದ್ದಾನೆ. ಹಣಕಾಸಿನ ಪರಿಸ್ಥಿತಿ ಹಾಗೂ ಆರೋಗ್ಯ ಬಿಗಡಾಯಿಸುವುದು. ನಿಮ್ಮ ನಿಪುಣತೆ ಹಾಗೂ ಔನ್ನತ್ಯ ಯಾವುದೂ ಪ್ರಯೋಜನಕ್ಕೆ ಬಾರದು. ಜೀವನದಲ್ಲಿ ಒಂದನ್ನು ಪಡೆದುಕೊಳ್ಳಬೇಕೆಂದರೆ ಮತ್ತೊಂದನ್ನು ಕಳೆದುಕೊಳ್ಳಲು ಸಿದ್ಧರಿರಬೇಕು. ಈ ಬೆಳಕಿನ ಹಬ್ಬದಲ್ಲಿ ಅಕ್ಟೋಬರ್ ಹಾಗೂ ಡಿಸೆಂಬರ್ ನಡುವೆ ತಮಸೋಮ ಜ್ಯೋತಿರ್ಗಮಯ ಎಂಬಂತೆ ಶ್ರೀ ಗುರುಕೃಪೆ ನಿಮ್ಮನ್ನು ಬೆಳಕಿನೆಡೆಗೆ ಕೊಂಡೊಯ್ಯಲಿರುವನು. ವ್ಯಾಪಾರ, ವ್ಯವಹಾರಗಳು ಲಾಭದಾಯಕವಾಗಿ ನಡೆದು ಬೆಲೆಬಾಳುವ ವಸ್ತು, ವಾಹನ ಮನೆಗೆ ಬರುವುದು.



ನ್ಯಾಯಮಾರ್ಗ ಕೋವಿದನಾದ ಶನಿದೇವನಿಂದ ನಿಮ್ಮ ಸ್ವಭಾವದಲ್ಲಿ ತೀಕ್ಷ್ಣತೆ ಕಂಡುಬರುತ್ತದೆ. ಮನೆ ಮಂದಿಯಲ್ಲಿ ಅಸಹಕಾರದಿಂದ ಆಗ ಬೇಕಾದ ಕೆಲಸಗಳು ಮುಂದುವರೆಯದೆ ಬೇಸರ. ರಾಜಕಾರಿಣಿಗಳಿಗೆ ದುರ್ದೆಸೆ ಎಂದು ಹೇಳಬೇಕಾದೀತು. ಪಾಲುದಾರಿಕೆ ವ್ಯವಹಾರಗಳು ಲಾಭವನ್ನು ತರದು. ಆಸ್ತಿ ವಿಭಾಗ ವಿಷಯದಲ್ಲಿ ಒಮ್ಮತ ಮೂಡದೆ ಮನಸ್ತಾಪಗಳು ಉಂಟಾಗುವುದು, ಸರ್ಕಾರಿ ನೌಕರರಿಗೆ ಇಲಾಖಾ ವಿಚಾರಣೆಯಿಂದ ಪ್ರತಿಕೂಲ ಫಲ ದೊರೆಯಲಿದೆ.

ಷಷ್ಠರಾಹು: ಆರ್ಥಿಕ ಅಭಿವೃದ್ಧಿ, ಕರ್ಮದಲ್ಲಿ ಪ್ರಗತಿ, ಶತ್ರುನಾಶ, ಕ್ರೀಡೆಯಲ್ಲಿ ಜಯ.
ದ್ವಾದಶ ಕೇತು: ಮಾನಸಿಕ ಪೀಡೆ, ತೀರ್ಥಯಾತ್ರೆ, ಮನೆದೇವರ ಸಂದರ್ಶನದಿಂದ ಮನೋಭಿಲಾಷೆ ಪೂರ್ಣ.



-ಕೆ.ಎ.ವಿಜಯ್ ಎಂ.ಬಿ.ಎ.
ಅಡ್ವಾನ್ಸ್ ಡಿಪ್ಲೊಮಾ ಇನ್ ಅಸ್ಟ್ರೋಲಜಿ,
ಎ. ಕೇಶವಮೂರ್ತಿ ಜ್ಯೋತಿಷ ವಿದ್ವಾಂಸ ಇವರ ಸುಪುತ್ರರು
ದೂರವಾಣಿ ಸಂಖ್ಯೆ: 9739548720/9740973224

ತುಲಾ

ಈ ಬೆಳಕಿನ ವರ್ಷ ನಿಮ್ಮ ಮೇಲೆ ಪ್ರಕಾಶಮಾನವಾಗಿ ಬೆಳಗಲು ಎರಡು ಪ್ರಮುಖ ಗ್ರಹಗಳಾದ ಶ್ರೀ ಗುರು ಮತ್ತು ಶ್ರೀ ಶನಿದೇವನ ಕೃಪಾವರ್ಷವೇ ನಿಮ್ಮ ಮೇಲಿದೆ. ಆತ್ಮವಿಶ್ವಾಸದಿಂದ ಹಂತಹಂತವಾಗಿ ಮೇಲ್ಮೆಯನ್ನು ಗಳಿಸುವಿರಿ. ನೌಕರ ವರ್ಗದವರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ದೊರೆಯುವುದು. ನಿವೇಶನ, ಮನೆ ಒಡೆಯರಾಗುವ ಸಾಧ್ಯತೆ ಇದೆ. ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಧನಾರ್ಜನೆ ಆಗುವುದು. ಸುವರ್ಣ, ರಜತ ಒಡವೆಗಳ ಖರೀದಿಯಿಂದ ಗೃಹಲಕ್ಷ್ಮಿಗೆ ಸಂಭ್ರಮ. ವಧು-ವರಾನ್ವೇಷಣೆ ಸಫಲವಾಗುವ ಸಂಭವ ಜಾಸ್ತಿ ಇದೆ. ಮಧ್ಯೆ ಕೆಲ ಸಮಯ ಅನಾರೋಗ್ಯ, ವೈದ್ಯಕೀಯ ಖರ್ಚುಗಳು ಎದುರಾಗುವುದು.



ಶ್ರೀ ಶನಿದೇವನ ಅನುಗ್ರಹವೂ ನಿಮಗೆ ಇರುವುದರಿಂದ ಎದುರಾಗುವ ಕಷ್ಟ, ಕಾರ್ಪಣ್ಯಗಳನ್ನು ನಿರಾತಂಕವಾಗಿ ಎದುರಿಸುವಿರಿ. ನ್ಯಾಯಾಲಯ ವಿಚಾರಗಳೂ ನಿಮ್ಮ ಪರವಾಗಿದ್ದು ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ಬೃಹತ್ ಉದ್ದಿಮೆದಾರರಿಗೆ ಭಾರಿ ಪ್ರಮಾಣದಲ್ಲಿ ಧನಲಾಭವಾಗುವುದು. ಕೃಷಿಕರ ಮೊಗದಲ್ಲಿ ನಗುಮುಖ ಕಾಣುವುದು. ಅಧೀರರಾಗುವ ಅಗತ್ಯವಿಲ್ಲ.

ಪಂಚಮ ರಾಹು: ಸಂತಾನ ಚಿಂತೆ, ಆರ್ಥಿಕ ಸಂಕಷ್ಟಗಳು, ವಿದ್ಯಾಭ್ಯಾಸದಲ್ಲಿ ಪ್ರಗತಿ.
ಏಕಾದಶ ಕೇತು: ಹಲವು ಮೂಲಗಳಿಂದ ಧನಲಾಭ, ದೈವಭಕ್ತಿಯಿಂದ ಕಷ್ಟ ನಿವಾರಣೆ.

ವೃಶ್ಚಿಕ

ಈ ಬೆಳಕಿನ ಹಬ್ಬ ನಿಮ್ಮ ಜೀವನದಲ್ಲಿ ಹೆಚ್ಚಿನ ಪ್ರಕಾಶವನ್ನು ನೀಡದು. ಪ್ರಮುಖ ಶುಭಗ್ರಹನಾದ ಶ್ರೀಗುರು ಅಶುಭವಿದ್ದು ಶೋಕ, ಕೋಪ, ವ್ಯಾಧಿ, ಅನಾರೋಗ್ಯಗಳನ್ನು ನೀಡಲಿರುವನು. ಪ್ರಯತ್ನ ಪೂರ್ವಕವಾಗಿ ಮಾಡಿದ ಕೆಲಸಗಳಲ್ಲಿ ಅಸಫಲತೆ, ಧನ ನಷ್ಟವನ್ನೂ ಅನುಭವಿಸಬೇಕಾದೀತು. ವಿದ್ಯಾರ್ಥಿಗಳು ಆಲಸಿಗರಾಗಿ ಉತ್ತಮ ಪ್ರತಿಫಲ ದೊರೆಯದೆ ನಿರಾಶೆ ಅನುಭವಿಸುವಿರಿ. ಕಳತ್ರ ಪುತ್ರಾದಿಗಳಲ್ಲಿ ಕಲಹವೂ, ಸಾಲಬಾಧೆಯೂ ಉಂಟಾಗುತ್ತದೆ. ಅಕ್ಟೋಬರ್-ಡಿಸೆಂಬರ್ ಅವಧಿಯಲ್ಲಿ ಕೊಂಚ ನಿರಾಳದ ಜೀವನ, ಗಣ್ಯವ್ಯಕ್ತಿಗಳ ಅನುಗ್ರಹದಿಂದಲೂ, ಬುದ್ಧಿ ಕುಶಲತೆಯಿಂದಲೂ ಕಾರ್ಯ ಸಾಧನೆ, ಆಸ್ತಿಪಾಸ್ತಿ ಹೊಂದಲು ಪೂರ್ವಭಾವಿ ತಯಾರಿ ನಡೆಯುವುದು.



ಶ್ರೀ ಶನಿದೇವ ಪಂಚಮದಲ್ಲಿ ಸಂಚರಿಸುವುದರ ಫಲವಾಗಿ ಪತ್ನಿ-ಪುತ್ರರಲ್ಲಿ ವೈಮನಸ್ಯ, ದುಷ್ಕಾರ್ಯಕ್ಕೆ ಮನಃ ಪ್ರೇರಣೆ, ಮಾನಸಿಕ ಪೀಡೆಗಳನ್ನು ಅನುಭವಿಸುವಿರಿ. ಮಿತ್ರಜನರೇ ಅನುಮಾನಿಸಿ ನೋಡುವರು. ಒಟ್ಟಿನಲ್ಲಿ ಸುಖ ಹೀನತೆಯಿಂದ ಬವಣೆ ಪಡುವಿರಿ.

ಪಂಚಮ ರಾಹು: ಅಧರ್ಮ ಕಾರ್ಯಕ್ಕೆ ಧನವ್ಯಯ, ಮಕ್ಕಳು ಚಿಂತೆಗೆ ಗುರಿ ಮಾಡುವರು. ಉದರವ್ಯಾಧಿ.
ಏಕಾದಶ ಕೇತು: ಆಕಸ್ಮಿಕ ಧನಲಾಭ, ತೀರ್ಥಕ್ಷೇತ್ರ ಸಂದರ್ಶನದಿಂದ ಮಾನಸಿಕ ಕಳವಳ ನಿವಾರಣೆ.

ಧನುಸ್ಸು

ಈ ದೀಪಾವಳಿಯ ಹೊಂಬೆಳಕಲ್ಲಿ ಒಂದನ್ನು ಪಡೆಯಬೇಕೆಂದರೆ, ಮತ್ತೊಂದನ್ನು ಕಳೆದುಕೊಳ್ಳಲು ಸಿದ್ಧರಿರಬೇಕು. ಇದರ ಮಾನಸಿಕ ಸಿದ್ಧತೆ ಮಾಡಿಕೊಳ್ಳಿ. ವ್ಯಾಪಾರ, ವ್ಯವಹಾರಗಳು ಚೆನ್ನಾಗಿ ನಡೆದು ನಿರೀಕ್ಷೆ ಮೀರಿ ಧನಲಾಭವಾಗುವುದು. ಗೃಹ ನಿವೇಶನ ಹೊಂದಲು ಗುರು ದೇವರ ಅನುಗ್ರಹವಿದೆ. ವಿವಾಹ ಯೋಗ್ಯರಿಗೆ ವಧು-ವರಾನ್ವೇಷಣೆ ಸಫಲವಾಗಿ ಮನೆಯ ಮುಂದೆ ಹಸಿರು ಚಪ್ಪರ ಹಾಕುವ ಸಂಭವವಿದೆ. ವಿದ್ಯಾಪ್ರಸಂಗಗಳಲ್ಲಿ ಯಶಸ್ಸು ಕೀರ್ತಿಗಳನ್ನು ಗಳಿಸುವಿರಿ. ಅಕ್ಟೋಬರ್-ಡಿಸೆಂಬರ್ ನಡುವೆ ಇಷ್ಟ ಜನರ ವಿಯೋಗದಿಂದ ಮನಸ್ಸು ಕದಡುವುದು. ಹೊಸ ಬಂಡವಾಳ ಹೂಡುವಾಗ ಅನುಭವಿಗಳ ಮಾರ್ಗದರ್ಶನದ ಅಗತ್ಯವಿದೆ. ನಿಮ್ಮ ದೇಹ ಸ್ವಾಸ್ಥ್ಯದಲ್ಲಿ ನ್ಯೂನತೆಗಳು ಉಂಟಾದೀತು. ವೈದ್ಯರ ಸಲಹೆಯಂತೆ ನಡೆಯಿರಿ. ಛಾಯಾಪುತ್ರ ನಾದ ಶ್ರೀ ಶನಿದೇವನ ಅವಕೃಪೆಯಿಂದ ಜೀವನದಲ್ಲಿ ಅನೇಕ ರೀತಿಯ ಪರೀಕ್ಷೆಗಳನ್ನು ಎದುರಿಸಬೇಕಾದೀತು. ವ್ಯಾಪಾರ ವ್ಯವಹಾರಗಳು ಮಂದಗತಿಯಲ್ಲಿ ಸಾಗುವುದು. ಕೃಷಿಕರ ಶ್ರಮ ಹಾಗೂ ಹಾಕಿದ ಬಂಡವಾಳ ನಿರೀಕ್ಷಿತ ಫಲವನ್ನು ನೀಡದು. ಎಣ್ಣೆಕಾಳು ಬೆಳೆಗಳು ವನ್ಯಜೀವಿಗಳ ಪಾಲಾಗಿ ನಷ್ಟವನ್ನು ಅನುಭವಿಸುವಿರಿ. ಪರಿಹಾರಕ್ಕೆ ಬನ್ನಿಮರ ಪ್ರದಕ್ಷಿಣೆ ಹಾಗೂ ಶಿವಾಲಯಕ್ಕೆ ದೀಪಕ್ಕೆ ಎಳ್ಳೆಣ್ಣೆ ದಾನ.



ತೃತೀಯ ರಾಹು: ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ಕಾಣದ ಕೈ ಸಹಾಯ ಹಾಗೂ ಶುಭಫಲ. ಸಹೋದರರೊಂದಿಗೆ ಕಲಹ.
ನವಮ ಕೇತು: ದಾರಿದ್ರ್ಯ, ಭಾಗ್ಯದಲ್ಲಿ ಕುಂದು, ಕೈಗೆ ಬಂದ ತುತ್ತು ಬಾಯಿಗಿಲ್ಲದಂತಹ ಪರಿಸ್ಥಿತಿ.

ಮಕರ

ದೀಪಾವಳಿಯ ಆರಂಭಕ್ಕೆ ಗುರುಕೃಪೆಯ ಅಭಾವವಿರುವ ಕಾರಣ ಪ್ರಯತ್ನಗಳು ಫಲಿಸುವಲ್ಲಿ ಅಧಿಕ ಶ್ರಮಪಡಬೇಕಾಗುತ್ತದೆ. ಆರ್ಥಿಕ ಪರಿಸ್ಥಿತಿ ಹದಗೆಟ್ಟು ಸಾಲ ಮಾಡಬೇಕಾದ ಸನ್ನಿವೇಶ ಉಂಟಾಗುವುದು. ಜ್ಞಾತಿ ಬಾಂಧವರಲ್ಲಿ ಅಕಾರಣವಾದ ವಿರೋಧ ಕಲಹಗಳು ನಡೆಯುವುದರಿಂದ ಮಾನಸಿಕ ಶಾಂತಿ ಭಂಗ. ಕೋಗಿಲೆಯ ಮಧುರ ಧ್ವನಿಯಾಗಲಿ, ನವಿಲಿನ ನರ್ತನವಾಗಲಿ ಹಿತವೆನಿಸುವುದಿಲ್ಲ. ಅಕ್ಟೋಬರ್-ಡಿಸೆಂಬರ್ ನಡುವೆ ಸಪ್ತಮ ಗುರುವಿನಿಂದ ರಿಲೀಫ್ ದೊರೆತು ಹಲವು ಹಳೆಯ ಸಮಸ್ಯೆಗಳು ಅನುಭವಿಗಳ ಮಾರ್ಗದರ್ಶನದಿಂದ ಬಗೆಹರಿಯುವುದು. ಪ್ರಯತ್ನ ಪುರಷಾಧೀನ, ಫಲದೈವಾಧೀನ ಎಂಬಂತೆ ನೂತನ ಧನ ಸಂಪಾದನೆಯ ಮಾರ್ಗ ಕಂಡುಕೊಳ್ಳುವಿರಿ. ಸಜ್ಜನರ ಸಹವಾಸ ನಿಮ್ಮ ಪುರೋಭಿವೃದ್ಧಿಗೆ ಕಾರಣವಾಗುವುದು. ಮಂದಚಾರ ಗ್ರಹನಾದ ಶ್ರೀ ಶನಿದೇವ ನಿಮ್ಮ ರಾಶ್ಯಾಧಿಪತಿಯೂ ಆಗಿದ್ದು ಧನ-ಧಾನ್ಯ ಲಾಭ, ಆರೋಗ್ಯದಲ್ಲಿ ಸುಧಾರಣೆ, ಕೈಗೊಂಡ ಕಾರ್ಯಗಳಲ್ಲಿ ಸಫಲತೆ, ಸಿದ್ಧಿಯೂ ಉಂಟಾಗಲಿದೆ. ವೈರಿ ಪಡೆಯನ್ನು ಸಮರ್ಥವಾಗಿ ಎದುರಿಸುವಿರಿ. ಸ್ಥಿರಾಸ್ತಿ ಖರೀದಿಗೆ ಕರಾರು ಒಪ್ಪಂದಗಳು ಉಂಟಾಗಬಹುದು. ಸಂಬಂಧಿಗಳಲ್ಲಿ ಮನಸ್ತಾಪಗಳು ಬಗೆಹರಿಯುವುದು.



ದ್ವಿತೀಯ ರಾಹು: ಬೇಡದ್ದಕ್ಕೆ ಹಣ ವಿನಿಯೋಗ. ಸ್ಪರ್ಧೆಗಳಲ್ಲಿ ಅಪಜಯ, ಕುಟುಂಬದಲ್ಲಿ ಕಲಹ.
ಅಷ್ಟಮ ಕೇತು: ಮಾನಸಿಕ ಅಶಾಂತಿ, ಅಪಮೃತ್ಯು ಭಯ.

ಕುಂಭ

ಈ ಸಲದ ಬೆಳಕಿನ ಹಬ್ಬದಲ್ಲಿ ನಿಮ್ಮನ್ನು ಗುರಿ ಮುಟ್ಟಿಸಲು ಶ್ರೀ ಗುರುವಿನ ಕೃಪಾನುಗ್ರಹ ನಿಮ್ಮ ರಾಶಿಗಿದೆ. ಸರ್ವಕಾರ್ಯಗಳಲ್ಲಿ ಜಯವೂ, ಯಶಃ ಕೀರ್ತಿಗಳೂ, ಶುಭ ಕಾರ್ಯಾಚರಣೆಗಳೂ ಉಂಟಾಗುವುದು. ಮನೆಯಲ್ಲಿ ಮಂಗಳವಾದ್ಯ ಮೊಳಗೀತು. ಐಶ್ವರ್ಯ, ಸ್ತ್ರೀ, ನೂತನ ಮಿತ್ರರು ಪ್ರಾಪ್ತವಾಗುತ್ತವೆ. ಕೆಲವರಿಗೆ ಮನೆಯಲ್ಲಿ ಹಸುಗೂಸು ಹುಟ್ಟಿದ ಸಂಭ್ರಮ ಉಂಟು. ಪರೀಕ್ಷೆ ಸಂದರ್ಶನಗಳಲ್ಲಿ ಯಶಸ್ಸನ್ನು ಹೊಂದುವಿರಿ. ಹೊಸ ಆದಾಯ ಮೂಲಗಳು ಉಂಟಾಗಲಿದೆ. ಅಕ್ಟೋಬರ್-ಡಿಸೆಂಬರ್ ನಡುವೆ ಸರ್ಕಾರದಿಂದಲೂ ಅಧಿಕಾರಿಗಳಿಂದಲೂ ತೊಂದರೆ, ಕಾನೂನು ಪಾಲಿಸದೆ ದಂಡ ಕಟ್ಟಬೇಕಾದೀತು. ಲೋಕ ಶಿಕ್ಷಕನಾದ ಶನಿದೇವನು ಸಾಡೇಸಾತಿ ಕಡೆಯ ಚರಣ ಚಾಲ್ತಿಯಲ್ಲಿರುವ ಕಾರಣ ದಾರಾ-ಪುತ್ರರಲ್ಲಿ ವೈಮನಸ್ಯ, ಮನೆಯಲ್ಲಿ ಅಶಾಂತಿಯ ವಾತಾವರಣ. ನಿಮ್ಮ ಸಂಪತ್ತು ಅನ್ಯರ ಪಾಲಾಗಬಹುದು. ಅತಿವೇಗದ ವಾಹನ ಸಂಚಾರ ಪ್ರಾಣಕ್ಕೆ ಸಂಚಕಾರವಾದೀತು, ಜಾಗೃತರಾಗಿರಿ.



ಜನ್ಮರಾಹು: ಮಹಾಭಯ, ಸ್ಥಾನಚ್ಯುತಿ, ಅನಾರೋಗ್ಯ, ಧನಚಿಂತೆ, ಶಿರೋವೇದನೆ ಮನಃ ಚಂಚಲತೆ.
ಸಪ್ತಮ ಕೇತು: ದಾಂಪತ್ಯದಲ್ಲಿ ವಿರಸ, ವಿವಾಹದಲ್ಲಿ ವಿಳಂಬ.

ಮೀನ


ದೀಪಾವಳಿಯ ಆರಂಭಕ್ಕೆ ಗುರುಕೃಪೆಯ ಅಭಾವದಿಂದ ಮಂದ ಬೆಳಕು ಹೊಸ ಆದಾಯ ಮಾರ್ಗಗಳ ಹುಡುಕಾಟ ಫಲ ನೀಡದು. ಕೈಯಲ್ಲಿ ಇದ್ದ ಕಾಸೂ ಬರಿದಾಗುವುದು. ಹೊಸ ನೌಕರಿಯ ಹುಡುಕಾಟದಲ್ಲಿ ಅಮೂಲ್ಯ ಸಮಯ ಕಳೆದು ಹೋಗುವುದು. ಉತ್ತಮ ಜನರ ಸಂಘ ತಪ್ಪಿ ಸಾಮಾಜಿಕವಾಗಿ ದೂಷಣೆಗೆ ಗುರಿಯಾಗುವಿರಿ. ಅಕ್ಟೋಬರ್-ಡಿಸೆಂಬರ್ ಮಧ್ಯೆ ಮರಳುಗಾಡಿನಲ್ಲಿ ಓಯಸಿಸ್ ದೊರೆತಂತೆ ಹಣಕಾಸಿನ ಪರಿಸ್ಥಿತಿಯಲ್ಲಿ ಚೇತರಿಕೆಯೂ, ಮಕ್ಕಳಿಗೆ ಉದ್ಯೋಗ ದೊರೆತು ಭಾಗ್ಯೋದಯ, ಮನೆಯಲ್ಲಿ ಹರುಷದ ವಾತಾವರಣ, ಸಾರ್ವಜನಿಕ ಸೇವೆಯಿಂದ ಗೌರವ ಪ್ರಾಪ್ತಿ. ನಿಮ್ಮ ಜನ್ಮರಾಶಿಯಲ್ಲೇ ಶನಿದೇವ ಸ್ಥಿತನಿರುವುದನ್ನು ಗರ್ಭಶನಿ ಎಂಬುದಾಗಿ ಶಾಸ್ತ್ರಕಾರರು ನಿರ್ಣಯ ಮಾಡಿರುತ್ತಾರೆ. ಇದರಿಂದ ನಿಮ್ಮ ಆರೋಗ್ಯ ಹಾಗೂ ಸಾಮಾಜಿಕ ವ್ಯವಹಾರಗಳ ಮೇಲೆ ಪ್ರತಿಕೂಲ ಪರಿಣಾಮಗಳು ಉಂಟಾಗುವುದು. ಪ್ರಯಾಣ ಸಮಯದಲ್ಲಿ ಅತ್ಯಂತ ಜಾಗರೂಕರಾಗಿರುವುದು ಅವಶ್ಯಕ. ಸಾಲಕೊಟ್ಟು ಕೈ ಸುಟ್ಟುಕೊಳ್ಳದಿರಿ. ಬೃಹತ್ ಉದ್ಯಮಿಗಳಿಗೆ ಕಾರ್ಮಿಕರಿಂದ ಭಾರಿ ನಷ್ಟವಾದೀತು.



ದ್ವಾದಶ ರಾಹು: ನೀಚ ಜನರ ಸಹವಾಸ, ಆರಕ್ಷಕ ಠಾಣೆ ದರ್ಶನ, ಜೂಜಿನಲ್ಲಿ ಸೋಲು.
ಷಷ್ಠ ಕೇತು: ಯತ್ನ ಕಾರ್ಯ ಭಂಗ, ರಕ್ತ ದೋಷ, ಶತ್ರುಗಳ ವೃದ್ಧಿ.


ದೇಶ - ವಿದೇಶ

ಸಸ್ಯಾಹಾರಿಗೆ ಬಿರಿಯಾನಿ ಕೊಟ್ಟ ಹೋಟೆಲ್ ಮಾಲೀಕನಿಗೆ ಗುಂಡಿಟ್ಟರು..



ರಾಂಚಿ: ವೆಜ್ ಬಿರಿಯಾನಿ ಕೇಳಿದ ಗ್ರಾಹಕನಿಗೆ ನಾನ್ ವೆಜ್ ಬಿರಿಯಾನಿ ಕೊಟ್ಟ ಹೋಟೆಲ್ ಮಾಲೀಕನ ಮೇಲೆ ಗುಂಡು ಹಾರಿಸಿದ ಘಟನೆ ಜರುಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವೆಜ್ ಬಿರಿಯಾನಿ ಪಾರ್ಸಲ್ ತೆಗೆದುಕೊಂಡು ಹೋಗಿದ್ದ ಗ್ರಾಹಕನು, ನಂತರ ಗುಂಪಿನೊಂದಿಗೆ ಮರಳಿ ಬಂದಿದ್ದಾನೆ. ಹೋಟೆಲ್‌ನವರು ವೆಜ್ ಬಿರಿಯಾನಿ ಕೇಳಿದರೆ, ನಾನ್‌ವೆಜ್ ಬಿರಿಯಾನಿ ನೀಡಿದ್ದಾರೆ ಎಂದು ಆರೋಪಿಸಿ ಜಗಳ ಮಾಡಿದ್ದಾರೆ. ಈ ವೇಳೆ ಗುಂಪಿನಲ್ಲಿದ್ದ ವ್ಯಕ್ತಿಯೊಬ್ಬರು ಹೋಟೆಲ್ ಮಾಲೀಕರ ಮೇಲೆ ಗುಂಡು ಹಾರಿಸಿದ್ದರಿಂದ, ಅವರಿಗೆ ಗಂಭೀರ ಗಾಯವಾಗಿದೆ. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ತೆರಳುವಾಗ ಮಾರ್ಗ ಮಧ್ಯದಲ್ಲಿ ಅವರು ಮೃತಪಟ್ಟಿದ್ದಾರೆ. ಹೋಟೆಲ್ ಮಾಲೀಕನನ್ನು ವಿಜಯ್ ಕುಮಾರ್‌ನಾಗ್(47) ಎಂದು ಗುರುತಿಸಲಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಗಳನ್ನು ಬಂಧಿಸಲು ವಿವಿಧ ಸ್ಥಳಗಳಲ್ಲಿ ಶೋಧ ನಡೆಸಲಾಗುತ್ತಿದೆ.

ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದ ಸಬ್‌ಮೆರಿನ್ ಮೇಲೆ ಡೆಡ್ಲಿ ಅಟ್ಯಾಕ್!




ವಾಷಿಂಗ್ಟನ್: ಮಾದಕ ವಸ್ತುಗಳನ್ನು ಹೊತ್ತು ಅಮೆರಿಕಾದತ್ತ ಪ್ರಯಾಣಿಸುತ್ತಿದ್ದ ಸಬ್ಮೆರಿನ್ ಮೇಲೆ ದಾಳಿ ನಡೆಸಿದ್ದು, ಘಟನೆಯಲ್ಲಿ ಇಬ್ಬರು ಹತರಾಗಿದ್ದಾರೆ. ಈ ನೌಕೆಯು ಫೆಂಟನೈಲ್ ಹಾಗೂ ಇತರ ಮಾದಕ ವಸ್ತುಗಳನ್ನು ಸಾಗಿಸುತ್ತಿರುವುದಾಗಿ ಗುಪ್ತಚರ ಇಲಾಖೆ ಮಾಹಿತಿ ನೀಡಿತ್ತು ಎಂದು ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಮಾದಕ ವಸ್ತುಗಳನ್ನು ತುಂಬಿಕೊಂಡು ಅಮೆರಿಕದತ್ತ ಬರುತ್ತಿದ್ದ ಬೃಹತ್ ನೌಕೆಯನ್ನು ನಾಶಪಡಿಸಿರುವುದು ನನಗೆ ಗೌರವದ ವಿಷಯ. ಘಟನೆಯಲ್ಲಿ ಬದುಕುಳಿದ ಇಬ್ಬರು ಭಯೋತ್ಪಾದಕರ ಬಂಧನ ಮತ್ತು ವಿಚಾರಣೆಗಾಗಿ ಅವರ ಮೂಲದೇಶಗಳಾದ ಎಕ್ವೆಡಾರ್‌ಮತ್ತು ಕೊಲಂಬಿಯಾಗೆ ರವಾನಿಸಲಾಗಿದೆ ಎಂದು ಸೋಷಿಯಲ್ ಮಿಡಿಯಾದಲ್ಲಿ ಟ್ರಂಪ್ ಬರೆದುಕೊಂಡಿದ್ದಾರೆ.


ಈ ಸಬ್ಮೆರಿನ್ ದೇಶದ ತೀರಕ್ಕೆ ತಲುಪಿದ್ದರೆ ಕನಿಷ್ಠ 25,000 ಅಮೆರಿಕನ್ ಜನರು ಸಾವಿಗೀಡಾಗುತ್ತಿದ್ದರು. ಈ ದಾಳಿಯಲ್ಲಿ ಯಾವುದೇ ಅಮೆರಿಕದ ಪಡೆಗಳಿಗೆ ಹಾನಿ ಯಾಗಿಲ್ಲ. ನಾನು ಅಧಿಕಾರದಲ್ಲಿರುವವರೆಗೆ ಜಲಮಾರ್ಗ ಅಥವಾ ಭೂಮಾರ್ಗಗಳ ಮೂಲಕ ಅಕ್ರಮ ಮಾದಕ ವಸ್ತು ಸಾಗಾಣೆಗೆ ಅಮೆರಿಕ ಬಿಡುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

ಈ ವರ್ಷ ಅಯೋಧ್ಯೆಗೆ 23.82 ಕೋಟಿ ಪ್ರವಾಸಿಗರ ಭೇಟಿ



ಅಯೋಧ್ಯೆ: ಉತ್ತರ ಭಾರತದ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿರುವ ಅಯೋಧ್ಯೆಗೆ ಈ ವರ್ಷದ ಜನವರಿಯಿಂದ ಜೂನ್‌ವರೆಗೆ 23.82 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದಾರೆ ಎಂದು ಉತ್ತರ ಪ್ರದೇಶ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ದೀಪೋತ್ಸವದ ವೇಳೆ ವಿದೇಶಿ ಪ್ರವಾಸಿಗರು ಸೇರಿದಂತೆ ಹೆಚ್ಚಿನ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ವರ್ಷದಿಂದ ವರ್ಷಕ್ಕೆ ಪ್ರವಾಸಿಗರ ಸಂಖ್ಯೆಯು ಜಾಸ್ತಿಯಾಗುತ್ತಿದೆ. 2017ರಲ್ಲಿ 1.78 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದರು. 2018ರಲ್ಲಿ 1.95 ಕೋಟಿ, 2019ರಲ್ಲಿ 2.05 ಕೋಟಿ, ಕೋವಿಡ್ ಕಾರಣದಿಂದಾಗಿ 2020ರಲ್ಲಿ 61 ಲಕ್ಷ, 2021ರಲ್ಲಿ 1.57 ಕೋಟಿ, 2022ರಲ್ಲಿ 2.39 ಕೋಟಿ, 2023ರಲ್ಲಿ 5.75 ಕೋಟಿ, 2024ರಲ್ಲಿ ದಾಖಲೆ 16.44 ಕೋಟಿ ಪ್ರವಾಸಿಗರು ಅಯೋಧ್ಯೆಗೆ ಭೇಟಿ ನೀಡಿದ್ದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಅಯೋಧ್ಯೆಗೆ ವಿದೇಶಿ ಪ್ರವಾಸಿಗರೂ ಭೇಟಿ ನೀಡುತ್ತಿದ್ದು, ಈ ವರ್ಷ 50 ಸಾವಿರಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡಿದ್ದಾರೆ. ರಾಮಮಂದಿರ ನಿರ್ಮಾಣದ ನಂತರ ಸ್ಥಳೀಯರಿಗೆ ಉದ್ಯೋಗಗಳು ಸೃಷ್ಟಿಯಾಗಿವೆ ಎಂದು ತಿಳಿಸಿದ್ದಾರೆ.


ಟ್ರಂಪ್ ವಿರುದ್ಧ ದೇಶಾದ್ಯಂತ ಬೀದಿಗಿಳಿದ ಲಕ್ಷಾಂತರ ಮಂದಿ



ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೀತಿಗಳು ಮತ್ತು ಆಡಳಿತದ ವಿರುದ್ಧ ನೋ ಕಿಂಗ್ಸ್ ಬ್ಯಾನರ್ ಹಿಡಿದು ದೇಶಾದ್ಯಂತ ಪ್ರಮುಖ ನಗರಗಳಲ್ಲಿ ಲಕ್ಷಾಂತರ ಮಂದಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ನ್ಯೂಯಾರ್ಕ್, ವಾಷಿಂಗ್ಟನ್ ಡಿಸಿ, ಚಿಕಾಗೋ, ಮಿಯಾಮಿ, ಲಾಸ್ ಏಂಜಲೀಸ್ ಸೇರಿದಂತೆ ಅಮೆರಿಕದಾದ್ಯಂತ ನೋ ಕಿಂಗ್ಸ್ ಪ್ರತಿಭಟನೆ ನಡೆದಿದೆ. ಪ್ರತಿಭಟನಾಕಾರರು ಡೊನಾಲ್ಡ್ ಟ್ರಂಪ್ ಸರಕಾರ ಸರ್ವಾಧಿಕಾರದ ಕಡೆಗೆ ವೇಗವಾಗಿ ಸಾಗುತ್ತಿದೆ ಎಂದು ಆರೋಪಿಸಿದರು. ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಲ್ಲಿ ಪ್ರತಿಭಟನೆಗಿಂತ ದೇಶಭಕ್ತಿ ಇನ್ನೊಂದಿಲ್ಲ ಮತ್ತು ಫ್ಯಾಸಿಸಂ ವಿರೋಧಿಸಿ ಎಂದು ಬರೆದಿರುವ ಫಲಕಗಳನ್ನು ಹಿಡಿದು ಸಾವಿರಾರು ಮಂದಿ ಮೆರವಣಿಗೆ ನಡೆಸಿದರು. ಬಾಸ್ಟನ್, ಅಟ್ಲಾಂಟಾ ಮತ್ತು ಶಿಕಾಗೋ ನಗರಗಳಲ್ಲಿ ಕೂಡ ಸಾವಿರಾರು ಮಂದಿ ಪ್ರತಿಭಟನೆ ನಡೆಸಿದರು. ನ್ಯೂಯಾರ್ಕ್‌ನಲ್ಲಿ 1,00,000ಕ್ಕೂ ಹೆಚ್ಚು ಜನರು ಸೇರಿದಂತೆ ರ್ಯಾಲಿಯಲ್ಲಿ ಸುಮಾರು 70 ಲಕ್ಷಕ್ಕೂ ಅಧಿಕ ಜನರು ಭಾಗವಹಿಸಿದ್ದರು ಎಂದು ಸಂಘಟಕರು ಮತ್ತು ಅಧಿಕಾರಿಗಳು ತಿಳಿಸಿದ್ದಾರೆ.

ಟಿಕೆಟ್ ನಿರಾಕರಣೆ: ಲಾಲೂ ಮನೆ ಮುಂದೆ ಬಟ್ಟೆ ಹರಿದುಕೊಂಡು ಗೋಳಾಡಿದ ಆಕಾಂಕ್ಷಿ!



ಪಟ್ನಾ(ಬಿಹಾರ): ಹಣ ಪಡೆದುಕೊಂಡು ನನಗೆ ಟಿಕೆಟ್ ನಿರಾಕರಿಸಲಾಗಿದೆ ಎಂದು ಆರೋಪಿಸಿರುವ ಆರ್‌ಜೆಡಿ ಪಕ್ಷದ ಟಿಕೆಟ್ ಆಕಾಂಕ್ಷಿಯೊಬ್ಬರು, ಪಕ್ಷದ ಅಧ್ಯಕ್ಷ ಲಾಲೂ ಪ್ರಸಾದ್ ಅವರ ನಿವಾಸ ಮುಂದೆ ಬಟ್ಟೆ ಹರಿದುಕೊಂಡು, ರಸ್ತೆಯಲ್ಲಿ ಉರುಳಾಡಿ ಕಣ್ಣೀರಿಟ್ಟಿದ್ದಾರೆ.

ಮದನ್ ಸಾಹ್ ಅವರು ಆರ್‌ಜೆಡಿ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದರು. 2020ರಲ್ಲಿ ಆರ್‌ಜೆಡಿ ಟಿಕೆಟ್‌ನಿಂದ ಮಧುಬನ್ ಕ್ಷೇತ್ರದಿಂದ ಸ್ಪರ್ಧಿಸಿ ಅಲ್ಪ ಅಂತರದಿಂದ ಸೋತಿದ್ದರು. ಈ ಬಾರಿಯೂ ಟಿಕೆಟ್ ಪಡೆಯುವ ನಿರೀಕ್ಷೆಯಲ್ಲಿದ್ದ ಅವರಿಗೆ ಪಕ್ಷವು ಟಿಕೆಟ್ ನಿರಾಕರಿಸಿದೆ. ಸುದೀರ್ಘ ಕಾಲ ಪಕ್ಷದ ಕೆಲಸ ಮಾಡಿದ ತಮಗೆ ಟಿಕೆಟ್ ನಿರಾಕರಿಸಿರುವುದು ಸರಿಯಲ್ಲ ಎಂದು ಸಾಹ್ ಅವರು ಅವಲತ್ತುಕೊಂಡಿದ್ದಾರೆ. ಟಿಕೆಟ್‌ಗಾಗಿ ನನ್ನ ಬಳಿ 2.70 ಕೋಟಿ ಕೇಳಿದ್ದರು. ನನ್ನ ಮಕ್ಕಳ ಮದುವೆಯನ್ನು ಮುಂದೂಡುವ ಮೂಲಕ ಹಣ ಹೊಂದಿಸಿದ್ದೆ. ಈಗ ಎಲ್ಲವೂ ಮುಗಿದಿದೆ. ಕನಿಷ್ಠ ಪಕ್ಷ ಅವರು ನನ್ನ ಹಣವನ್ನು ಹಿಂದಿರುಗಿಸಬೇಕು? ಎಂದು ಸಾಹ್ ಆರೋಪಿಸಿದ್ದಾರೆ.

ಸಾಹ್ ಆರೋಪದ ಕುರಿತಂತೆ ಆರ್‌ಜೆಡಿ ನಾಯಕರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮೈಸೂರು ಮಿತ್ರ ಸೋಮವಾರ 20 ಅಕ್ಟೋಬರ್ 2025

ಸಿಎನ್‌ಸಿಯಿಂದ ದೇವಟ್ ಪರಂಬ್‌ನಲ್ಲಿ ಹಿರಿಯರಿಗೆ ನಮನ

ಧಾರ್ಮಿಕ ಪಾವಿತ್ರ್ಯತೆ ನೀಡುವ ಸಲುವಾಗಿ ಸಿಎನ್‌ಸಿಯಿಂದ ಕಾರ್ಯಕ್ರಮ

ಮಡಿಕೇರಿ,ಅ.19– ಕಾವೇರಿ ಚಂಗ್ರಾಂದಿಯ ಪ್ರಯುಕ್ತ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ದೇವಟ್ ಪರಂಬ್‌ನಲ್ಲಿ ಹಿರಿಯರಿಗೆ ಪುಷ್ಪನಮನ ಅರ್ಪಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಿತು. ಅನಾದಿ ಕಾಲದಿಂದಲೂ ಜಾನಪದ ಪದ್ಧತಿಯ ರೂಪದಲ್ಲಿ ನಡೆದುಕೊಂಡು ಬಂದಿರುವಂತೆ ದೋಸೆ ಮತ್ತು ಪುಟ್ಟ್ ಅನ್ನು 'ಬೊತ್ತ್' ಎಂಬ ಗಿಡ ಮೂಲಿಕೆಯ ಮರದ ಬಳ್ಳಿಯಲ್ಲಿಟ್ಟು ಹಿರಿಯರನ್ನು ಸ್ಮರಿಸಲಾಯಿತು.



ದೇವಟ್ ಪರಂಬ್‌ನಲ್ಲಿ ಹಿರಿಯರಿಗೆ ಪುಷ್ಪನಮನ ಅರ್ಪಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪುಷ್ಪನಮನ ಸಲ್ಲಿಸಿ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ದೇವಟ್ ಪರಂಬ್ ದುರಂತ ನರಮೇಧದ ಸ್ಮಾರಕ ಸ್ಥಳಕ್ಕೆ ಆಧ್ಯಾತ್ಮಿಕ ಮತ್ತು ಧಾರ್ಮಿಕ ಪಾವಿತ್ರ್ಯತೆಯನ್ನು ನೀಡುವ ಉದ್ದೇಶದಿಂದ ಕಳೆದ ಅನೇಕ ವರ್ಷಗಳಿಂದ ಸಿಎನ್‌ಸಿ ಸಂಘಟನೆ ಈ ಕಾರ್ಯುಕ್ರಮವನ್ನು ನಡೆಸಿಕೊಂಡು ಬರುತ್ತಿದೆ ಎಂದರು.

ಪ್ರತಿ ವರ್ಷ ಕಾವೇರಿ ತೊಲೆಯಾರ್ ಚಂಗ್ರಾಂಧಿ ಆಚರಣೆಗೆ ಎರಡು ಅಥವಾ ಮೂರು ದಿನಗಳ ಮೊದಲು ತಮ್ಮ ಜೌಗು ಭೂಮಿಗಳು, ಭತ್ತದ ಗದ್ದೆಗಳು, ಭತ್ತ ಒಣಗಿಸುವ ಅಂಗಳಗಳು, ಹಸುವಿನ ಸಗಣಿ ಹೊಂಡಗಳು, ಕೊಟ್ಟಿಗೆಗಳು, ಕುಡಿಯುವ ನೀರಿನ ಬಾವಿಗಳು, ದ್ವಾರಗಳು ಮತ್ತು ಮನೆಗಳ ಮುಂಭಾಗದ ಪ್ರದೇಶಗಳಲ್ಲಿ ಬೊತ್ತ್ ಅನ್ನು ನೆಡುವುದು ಕೊಡವರ ಸಂಪ್ರದಾಯವಾಗಿದೆ ಎಂದು ವಿವರಿಸಿದರು.

ಭಾರತದ ಸಂವಿಧಾನ ಅಡಿಯಲ್ಲಿ ಕೊಡವ ಲ್ಯಾಂಡ್‌ಗೆ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಮತ್ತು ಆಂತರಿಕ ರಾಜಕೀಯ ಸ್ವ–ನಿರ್ಣಯದ ಹಕ್ಕು ನೀಡಬೇಕು. ಸಣ್ಣ ಸಮುದಾಯ ಕೊಡವರನ್ನು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಕಾನೂನಿನಡಿಯಲ್ಲಿ ಗುರುತಿಸಬೇಕು ಮತ್ತು ರಕ್ಷಿಸಬೇಕು. ಕೊಡಗಿನ ಪ್ರಾಚೀನ ಮೂಲ ನಿವಾಸಿ ಕೊಡವ ಜನಾಂಗವನ್ನು ಸಂವಿಧಾನದ ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸಬೇಕು. ಹೈಕೋರ್ಟ್‌ನ ಆದೇಶದಂತೆ ಕೊಡವ ಜನಾಂಗದ ನ್ಯಾಯಯುತ, ನಿಖರವಾದ ಮತ್ತು ಸಮಗ್ರ ಜನಾಂಗೀಯ ಅಧ್ಯಯನವನ್ನು ಪ್ರಾರಂಭಿಸಬೇಕು. ಕೊಡವ ಭಾಷೆ, ಕೊಡವ ತಕ್ ಅನ್ನು 8ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕು. ಕೊಡವ ತಕ್ ಅನ್ನು ನಮ್ಮ ಸಂವಿಧಾನದ 347, 350, 350ಂ, ಮತ್ತು 350ಃ ವಿಧಿಗಳ ಅಡಿಯಲ್ಲಿ ಪಠ್ಯಕ್ರಮ ಮತ್ತು ಆಡಳಿತದಲ್ಲಿ ಪರಿಚಯಿಸಬೇಕು ಎಂದು ನಾಚಪ್ಪ ಈ ಸಂದರ್ಭ ಆಗ್ರಹಿಸಿದರು. ದೇವಟ್ ಪರಂಬ್ ದುರಂತ ನರಮೇಧ ಸ್ಮಾರಕ ಸ್ಥಳದಲ್ಲಿ ಪವಿತ್ರ ಕಾವೇರಿ ತೀರ್ಥವನ್ನು ಅರ್ಪಿಸಿದರು.

ಕಲಿಯಂಡ ಪ್ರಕಾಶ್, ಅಳ್ಮಂಡ ಜೈ, ಪಟ್ಟಮಾಡ ಕುಶ, ಅರೆಯಡ ಗಿರೀಶ್, ಮಂದಪಂಡ ಮನೋಜ್, ಮಂದಪಂಡ ಸೂರಜ್, ಕಾಟುಮಣಿಯಂಡ ಉಮೇಶ್, ಮಂಗೇರಿರ ಜಗದೀಶ್, ಮಂದಪಂಡ ನೇಹ ದೇಚಕ್ಕ, ಮಂದಪಂಡ ವಿಹಾನ್ ದೇವಯ್ಯ, ಚಿಯಬೇರ ಸತೀಶ್, ಕುಟ್ಟೇಟಿರ ದರ್ಶನ್ ಹಾಗೂ ಅಜ್ಜಿನಂಡ ಜೈತ್ರ ಅಯ್ಯಪ್ಪ ಹಾಜರಿದ್ದು ಹಿರಿಯರಿಗೆ ಗೌರವ ಅರ್ಪಿಸಿದರು.

ಶಾಸಕ ಪೊನ್ನಣ್ಣರಿಂದ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ

ಮಡಿಕೇರಿ,ಅ.19– ವಿರಾಜಪೇಟೆ ಸಮೀಪದ ಬಾಳುಗೋಡುವಿನ ಕೊಡವ ಸಮಾಜಗಳ ಒಕ್ಕೂಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸಮುಚ್ಚಯದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ವೀಕ್ಷಿಸಿ ಕಾಮಗಾರಿ ಪರಿಶೀಲನೆ ನಡೆಸಿದರು.



ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸುತ್ತಿರುವ ಶಾಸಕ ಎ.ಎಸ್.ಪೊನ್ನಣ್ಣ.

ಬಾಳುಗೋಡು ಕೊಡವ ಸಮಾಜದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಕೋರಿಕೆ ಮೇರೆಗೆ ಭಾನುವಾರ ಭೇಟಿ ನೀಡಿದ ಶಾಸಕರು, ರಾಜ್ಯ ಸರಕಾರದ ಅನುದಾನದಲ್ಲಿ ನಡೆಯುತ್ತಿರುವ ಹಲವು ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲನೆ ಮಾಡಿದರು. ಮೈದಾನಗಳ ಅಭಿವೃದ್ಧಿ, ಪ್ರೇಕ್ಷಕರ ಗ್ಯಾಲರಿ, ತಡೆಗೋಡೆ ಹಾಗೂ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಶಾಸಕರು ವೀಕ್ಷಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಳುಗೋಡು ಕೊಡವ ಸಮಾಜಗಳ ಒಕ್ಕೂಟಕ್ಕೆ ಸರಕಾರದಿಂದ 6 ಕೋಟಿ ಅನುದಾನ ಒದಗಿಸಲಾಗಿತ್ತು. ಬಂದಿರುವ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವೀಕ್ಷಣೆ ಮಾಡಬೇಕೆಂಬ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಒತ್ತಾಯದ ಮೇರೆಗೆ ಕಾಮಗಾರಿಗಳ ವೀಕ್ಷಣೆ ಮಾಡಲಾಗಿದೆ. ಅನುದಾನದ ಸದ್ಬಳಕೆಯೊಂದಿಗೆ ಉತ್ತಮ ಗುಣಮಟ್ಟದಲ್ಲಿ ಕಾಮಗಾರಿಗಳು ನಡೆಯುತ್ತಿದೆ. ಸುಸಜ್ಜಿತ ಎರಡು ಮೈದಾನಗಳು, ಪ್ರೇಕ್ಷಕರ ಗ್ಯಾಲರಿ ನಿರ್ಮಾಣ, ತಡೆಗೋಡೆ ಸೇರಿದಂತೆ ಉತ್ತಮವಾಗಿ ಕಾಮಗಾರಿ ನಿರ್ವಹಿಸಿದ್ದು, ಇದಕ್ಕಾಗಿ ತಾವು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಕೆಲವು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೂಲಕ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ನೆರವೇರಿಸಲಾಗುವುದು. ಎಲ್ಲರೂ ಕೂಡ ಇದೇ ರೀತಿ ಸರಕಾರದ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಅವರು ಕರೆ ನೀಡಿದರು. ಭಾಗಮಂಡಲದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ 1 ಕೋಟಿ ರೂ.ಗಳ ಅನುದಾನ ಒದಗಿಸಲಾಗಿತ್ತು ಆದರೆ ಕೆಲವು ತಾಂತ್ರಿಕ ಕಾರಣದಿಂದಾಗಿ ಕಾಮಗಾರಿ ಆರಂಭವಾಗಿಲ್ಲ. ಇನ್ನುಳಿದ ಕೊಡವ ಸಮಾಜಗಳು ಸಹ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಅನುದಾನವನ್ನು ಸದ್ಬಳಕೆ ಮಾಡಿಕೊಂಡಿವೆ ಎಂದರು.

ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಮಾತನಾಡಿ, ಕಳೆದ ನವೆಂಬರ್‌ನಲ್ಲಿ ನಡೆದ ಕೊಡವ ನಮ್ಮೆಯ ಸಂದರ್ಭ ಶಾಸಕ ಎ.ಎಸ್.ಪೊನ್ನಣ್ಣ ಅವರಲ್ಲಿ ಮನವಿ ಮಾಡಿಕೊಂಡ ಕೇವಲ 3 ದಿನಗಳಲ್ಲಿ ಮುಖ್ಯಮಂತ್ರಿಗಳ ಭೇಟಿಗೆ ಅನುವು ಮಾಡಿಕೊಟ್ಟರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುತುವರ್ಜಿಯಿಂದಾಗಿ 10 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಯಾಯಿತು. 10 ಕೋಟಿ ಅನುದಾನದಲ್ಲಿ 6 ಕೋಟಿ ಬಾಳುಗೋಡು ಕೊಡವ ಸಮಾಜಗಳ ಒಕ್ಕೂಟದ ಅಭಿವೃದ್ಧಿಗೆ, ರೂ.3 ಕೋಟಿಯನ್ನು 30 ಕೊಡವ ಸಮಾಜಗಳಿಗೆ ತಲಾ ರೂ. 10 ಲಕ್ಷದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ನೀಡಲಾಗಿದ್ದು, ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿವೆ. 1 ಕೋಟಿ ಅನುದಾನವನ್ನು ಭಾಗಮಂಡಲ ಸಮುದಾಯ ಭವನಕ್ಕೆ ಮೀಸಲಿರಿಸಲಾಗಿದೆ. ಕೆಲವು ತಾಂತ್ರಿಕ ಕಾರಣಗಳಿಂದ ಕಾಮಗಾರಿ ಆರಂಭವಾಗಿಲ್ಲ. ಶೀಘ್ರದಲ್ಲೇ ಇದರ ಕಾಮಗಾರಿ ಆರಂಭಗೊಳ್ಳಲಿದೆ ಎಂದು ಹೇಳಿದರು.

ಬಾಳುಗೋಡು ಕೊಡವ ಸಮಾಜಗಳ ಒಕ್ಕೂಟಕ್ಕೆ ನೀಡಿದ 6 ಕೋಟಿ ಅನುದಾನದಲ್ಲಿ ಕೇವಲ 6.6 ತಿಂಗಳಿನಲ್ಲಿ 5.5 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿ ಕೆಲವೇ ದಿನಗಳಲ್ಲಿ ಮುಕ್ತಾಯವಾಗಲಿದೆ. ನವೆಂಬರ್ ತಿಂಗಳಿನಲ್ಲಿ ನಡೆಯಲಿರುವ ಕೊಡವ ನಮ್ಮೆಯ ಸಮಾರೋಪದ ದಿನವಾದ ನ.9 ರಂದು ಮುಖ್ಯಮಂತ್ರಿಗಳನ್ನು ಕರೆಸುವಂತೆ ಶಾಸಕ ಪೊನ್ನಣ್ಣ ಅವರಲ್ಲಿ ಮನವಿ ಮಾಡಲಾಗಿದೆ. ಅದೇ ದಿನ ಮುಖ್ಯಮಂತ್ರಿ ಅವರಿಂದ ಕಾಮಗಾರಿ ಉದ್ಘಾಟಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭ ಗೌರವ ಕಾರ್ಯದರ್ಶಿ ವಾಟೇರಿರ ಶಂಕರಿ ಪೂವಯ್ಯ, ಕ್ರೀಡಾ ಸಮಿತಿ ಅಧ್ಯಕ್ಷ ತಂಬುಕುತ್ತಿರ ಮಧು ಮಂದಣ್ಣ, ಕ್ರೀಡಾ ಸಮಿತಿ ಸಂಚಾಲಕ ಕಂಬೀರಂಡ ಕಿಟ್ಟು ಕಾಳಪ್ಪ, ಸಾಂಸ್ಕೃತಿಕ ಸಮಿತಿ ಸಂಚಾಲಕ ಬೊಳ್ಳಿಯಂಗಡ ದಾದು ಪೂವಯ್ಯ, ಕಾರ್ಯದರ್ಶಿ ಕೋಟೆರ ರಘು ಕಾರ್ಯಪ್ಪ ಮತ್ತಿತರರು ಹಾಜರಿದ್ದರು.

ನ.8ರಂದು ಪುತ್ತರಿ ವೆಳ್ಳಾಟ್ಟಮ್



ಕುಶಾಲನಗರ : ಪಟ್ಟಣದ ಯೋಗಾನಂದ ಬಡಾವಣೆಯ ಕಾವೇರಿ ನದಿ ದಂಡೆ ಮೇಲಿರುವ ಶ್ರೀ ಮುತ್ತಪ್ಪ ದೇವಾಲಯದ ಮಡಪ್ಪುರದ ಸಭಾಂಗಣದಲ್ಲಿ ಪುತ್ತರಿ ವೆಳ್ಳಾಟ್ಟಮ್ ಸಂಬಂಧಿಸಿದಂತೆ ಪೂರ್ವಭಾವಿ ಸಭೆ ನಡೆಯಿತು

ಶ್ರೀ ಮುತ್ತಪ್ಪ ಸ್ವಾಮಿ ಸೇವಾಟ್ರಸ್ಟಿನ ಅಧ್ಯಕ್ಷ ಕೆ.ವರದ ಅಧ್ಯಕ್ಷತೆಯಲ್ಲಿ ನ.8 ರಂದು ಪುತ್ತರಿ ವೆಳ್ಳಾಟ್ಟಮ್ ನಡೆಸಲು ತೀರ್ಮಾನಿಸಲಾಯಿತು. ಸಭೆಯಲ್ಲಿ ಪುತ್ತರಿ ವೆಳ್ಳಾಟ್ಟಮ್‌ಗೆ ತಗಲುವ ಖರ್ಚು, ವೆಚ್ಚಗಳು ಹಾಗೂ ಹಣ ಸಂಗ್ರಹಿಸುವ ಬಗ್ಗೆ ಚರ್ಚೆ ನಡೆಯಿತು. ಉತ್ಸವದ ದಿನ ಬರುವ ಎಲ್ಲಾ ಭಕ್ತಾದಿಗಳಿಗೆ ಅನ್ನದಾನ ನೀಡುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು. ದೇವಾಲಯದ ಮುಂಭಾಗದಲ್ಲಿರುವ ನಿವೇಶನವನ್ನು ಖರೀದಿಸುವ ಮೂಲಕ ದೇವಾಲಯದ ಉಪಯೋಗಕ್ಕೆ ಬಳಸುವಂತೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಶ್ರೀ ಮುತ್ತಪ್ಪ ದೇವಾಲಯದ ಪ್ರತಿಯೊಬ್ಬ ಸದಸ್ಯರು ತಮ್ಮ ಕೈಯಲ್ಲಿ ಆದಷ್ಟು ವಂತಿಗೆ ನೀಡುವಂತೆ ಮುತ್ತಪ್ಪ ಸ್ವಾಮಿ ಸೇವಾಟ್ರಸ್ಟಿನ ಪದಾಧಿಕಾರಿಗಳು ವಿನಂತಿಸಿಕೊಂಡರು.

ಅಕ್ರಮ ಗೋವು ಸಾಗಾಟ ಪ್ರಕರಣ: ಮತ್ತಿಬ್ಬರ ಬಂಧನ

ಮಡಿಕೇರಿ,ಅ.19– ಅಕ್ರಮ ಗೋವು ಸಾಗಾಟ ಪ್ರಕರಣದಲ್ಲಿ ತಲೆ ಮರೆಸಿಕೊಂಡಿದ್ದ ಇತರ ಇಬ್ಬರು ಆರೋಪಿಗಳನ್ನು ಸೋಮವಾರಪೇಟೆ ಪೊಲೀಸರು ಬಂಧಿಸಿದ್ದಾರೆ. ಅರಕಲಗೂಡಿನ ಹೂಳಲುಗೋಡು ಗ್ರಾಮದ ಶಾನವಾಜ್, ಸಯ್ಯದ್ ಗಫೂರ್ ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ನೆನ್ನೆ ದಿನ ಕಾರ್ಯಾಚರಣೆ ನಡೆಸಿ ಪ್ರಮುಖ ಆರೋಪಿ ದಿಲ್ ನವಾಜ್ ಎಂಬಾತನನ್ನು ಬಂಧಿಸಲಾಗಿತ್ತು.

ಅ.13ರ ಬೆಳಗಿನ 2.30ರ ಸಮಯದಲ್ಲಿ ಸೋಮವಾರಪೇಟೆ ತಾಲೂಕಿನ ಶನಿವಾರಸಂತೆ ರಸ್ತೆಯ ಕಾಗಡಿಕಟ್ಟೆಯಲ್ಲಿ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಗೋ ಸಾಗಾಟ ಮಾಡುತ್ತಿದ್ದ ಸಂದರ್ಭ ವಾಹನ ಪಲ್ಟಿಯಾಗಿ ವಾಹನದಲ್ಲಿದ್ದ 3 ಗೋವುಗಳು ಗಾಯಗೊಂಡಿದ್ದವು. ವಾಹನದಲ್ಲಿದ್ದ ಇಬ್ಬರು ಆರೋಪಿಗಳು ಗಾಯಗೊಂಡು ಬೇರೊಂದು ಕಾರ್‌ನಲ್ಲಿ ಪರಾರಿಯಾಗಿದ್ದರು. ಆರೋಪಿಗಳು ಗೂಡ್ಸ್ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾದ ಹಿನ್ನೆಲೆಯಲ್ಲಿ ಗೋ ಸಾಗಾಟ ಪ್ರಕರಣ ಬೆಳಕಿಗೆ ಬಂದಿತ್ತು. ಇದೀಗ ಪೊಲೀಸರು ಇತರ ಇಬ್ಬರು ಆರೋಪಿಗಳನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಸ್ವಚ್ಛ, ಸ್ವಸ್ಥ ದೀಪಾವಳಿ ಆಚರಣೆ ಕುರಿತು ಜಾಗೃತಿ ಆಂದೋಲನ



ಕುಶಾಲನಗರದಲ್ಲಿ ವಿದ್ಯಾರ್ಥಿಗಳು ದೀಪಾವಳಿ ಅಂಗವಾಗಿ ಪರಿಸರ ಜಾಗೃತಿ ಆಂದೋಲನ ನಡೆಸಿದರು.

ಕುಶಾಲನಗರ: ಬೆಳಕಿನ ಹಬ್ಬ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿತದಿಂದ ಉಂಟಾಗುವ ಅನಾಹುತಗಳು ಹಾಗೂ ಮಾಲಿನ್ಯದ ದುಷ್ಪರಿಣಾಮಗಳ ಕುರಿತು ಪಟ್ಟಣದ ಫಾತಿಮ ಪ್ರೌಢಶಾಲೆಯಲ್ಲಿ ಜನಜಾಗೃತಿ ಮೂಡಿಸುವ ಪರಿಸರ ಜಾಗೃತಿ ಆಂದೋಲನ ನಡೆಸಲಾಯಿತು.

ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಕೃಷ್ಣಪ್ಪ ಮಾತನಾಡಿ, ವಿದ್ಯಾರ್ಥಿಗಳು ಅಪಾಯಕಾರಿ ಪಟಾಕಿ ತ್ಯಜಿಸಿ ಹಣತೆ ಬೆಳಗಿಸುವ ಮೂಲಕ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಮೂಲಕ ಹಸಿರು ದೀಪಾವಳಿ ಆಚರಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಮಕ್ಕಳಿಗೆ ಹಣತೆ ಹಚ್ಚೋಣ ಬನ್ನಿ, ಪರಿಸರ ಸ್ನೇಹಿ ಹಸಿರು ದೀಪಾವಳಿ ಆಚರಿಸೋಣ ಬನ್ನಿ ಎಂದು ಸಲಹೆ ನೀಡಿದರು.

ಜಿಲ್ಲಾ ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಬಿ.ಆರ್.ನಾಗೇಂದ್ರಪ್ರಸಾದ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಣೆ ಮಾಡಬೇಕು. ಮಾಲಿನ್ಯವನ್ನುಂಟು ಮಾಡುವ ಪಟಾಕಿ ಸಿಡಿಸುವುದರಿಂದಾಗುವ ಅನಾಹುತದ ಬಗ್ಗೆ ಎಲ್ಲರಿಗೂ ಮನವರಿಕೆ ಮಾಡಬೇಕು ಎಂದರು.

ಮಾಲಿನ್ಯ ನಿಯಂತ್ರಣ ಮಂಡಳಿಯ ಜಿಲ್ಲಾ ಪರಿಸರ ಅಧಿಕಾರಿ ಎಂ.ಜಿ.ರಘುರಾಮ್ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆಯ ಮುಖ್ಯಾಧಿಕಾರಿ ಟಿ.ಜೆ.ಗಿರೀಶ್, ತಾಲೂಕು ಕಸಾಪ ಅಧ್ಯಕ್ಷ ಕೆ.ಎಸ್.ನಾಗೇಶ್, ಭಾರತ್ ಸ್ಕೌಟ್ಸ್, ಗೈಡ್ಸ್‌ನ ಕುಶಾಲನಗರ ಸ್ಥಳೀಯ ಸಂಸ್ಥೆ ಅಧ್ಯಕ್ಷ ಡಾ.ಪ್ರವೀಣ್ ದೇವರಗುಂಡ ಸೋಮಪ್ಪ, ಕಾರ್ಯದರ್ಶಿ ಎಂ.ಎಸ್.ಗಣೇಶ್, ಶಾಲಾ ಮುಖ್ಯ ಶಿಕ್ಷಕ ಕೆ.ಎ. ಜಾನ್ ಸನ್, ಪುರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ಉದಯ್ ಕುಮಾರ್, ಶಾಲಾ ಗೈಡ್ಸ್ ಶಿಕ್ಷಕಿ ಸಿಫಾನತ್, ಸ್ಕೌಟ್ಸ್ ಶಿಕ್ಷಕ ಜಾನ್ ಸನ್, ಶಿಕ್ಷಕಿಯರಾದ ಪ್ರಿಯಾ, ಸುನೀತಾ, ಅರ್ಪಣಾ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಾವೇರಿ ತೀರ್ಥ ವಿತರಣೆ

ನಾಪೋಕ್ಲು: ಮೈಸೂರಿನ ಕೊಡಗು ಗೌಡ ಸಮಾಜದ ವತಿಯಿಂದ ಸಮುದಾಯದ ಬಂಧುಗಳಿಗೆ ಮತ್ತು ಕಾವೇರಿ ಭಕ್ತರಿಗೆ ಕಾವೇರಿ ತೀರ್ಥವನ್ನು ವಿತರಣೆ ಮಾಡಲಾಯಿತು. ಮೈಸೂರಿನ ಕೊಡಗು ಗೌಡ ಸಮುದಾಯ ಭವನದ ದೇವರ ಮಂಟಪದಲ್ಲಿ ತೀರ್ಥ ಪೂಜೆಯನ್ನು ನೆರವೇರಿಸಿದ ನಂತರ, ನೆರೆದ ಭಕ್ತರಿಗೆ ತೀರ್ಥ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮೈಸೂರು ಕೊಡಗು ಗೌಡ ಸಮಾಜದ ಪದಾಧಿಕಾರಿಗಳಾದ ಪೊನ್ನೆಟಿ ನಂದ, ನಡುವಟ್ಟಿರ ಲಕ್ಷ್ಮಣ, ನಡುಮನೆ ಚೆಂಗಪ್ಪ, ನಿರ್ದೇಶಕರಾದ ಪಟ್ಟಡ ಶಿವಕುಮಾರ್, ಹೊಸೂರು ರಾಘವ, ಕುಂಟುಪುಣಿ ರಮೇಶ್, ಪಾಣತ್ತಲೆ ವಸಂತ, ಚಪ್ಪೆರ ಯಮುನಾ, ಕುಂಟುಪುಣಿ ಶೀಲಾ, ತೊಟಂಬೈಲು ಇಂದಿರಾ, ಮೈಸೂರು ಕೊಡಗು ಗೌಡ ಸಮಾಜದ ಮಾಜಿ ಅಧ್ಯಕ್ಷರಾದ ತೊಟಂಬೈಲು ಮನೋಹರ, ಕುದುಪಜೆ ಕುಶಾಲಪ್ಪ, ಕೊಡಗು ಮತ್ತು ದ. ಕನ್ನಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ನಡುವಟ್ಟಿರ ಗೀತಾ ಲಕ್ಷ್ಮಣ ಮೊದಲಾದವರು ಉಪಸ್ಥಿತರಿದ್ದರು.

ಮಾದಪ್ಪನ ಸನ್ನಿಧಿಯಲ್ಲಿ ದೀಪಾವಳಿ ಜಾತ್ರೆ ಆರಂಭ

ಐದು ದಿನಗಳ ವಿಶೇಷ ಜಾತ್ರಾ ಮಹೋತ್ಸವದಲ್ಲಿ ಲಕ್ಷಾಂತರ ಮಂದಿ ಬಾಗಿ

ಹನೂರು, ಅ.19– ಮಲೆ ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಹಬ್ಬದ ಜಾತ್ರೆ ಪ್ರಯುಕ್ತ ವಿಶೇಷ ಪೂಜೆ ಕಾರ್ಯಕ್ರಮಗಳು ಸಾಲೂರು ಬೃಹನ್ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿ ಸಾನ್ನಿಧ್ಯದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸಂಭ್ರಮ ಸಡಗರದೊಂದಿಗೆ ಆರಂಭಗೊಂಡಿತು.

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ನಡೆಯುತ್ತಿರುವ 5 ದಿನಗಳ ದೀಪಾವಳಿ ಜಾತ್ರಾ ಮಹೋತ್ಸವದ ಅಂಗವಾಗಿ ಮಾದಪ್ಪನಿಗೆ ಬೆಳಗಿನ ಜಾವ ನಾಲ್ಕು ಗಂಟೆಯಿಂದ ಬೇಡಗಂಪಣ ಅರ್ಚಕರಿಂದ ಎಣ್ಣೆ ಮಜ್ಜನ ಸೇವೆ, ಜಲಾಭಿಷೇಕ, ಪಂಚಾಮೃತ ಅಭಿಷೇಕ, ಗಂಧದ ಅಭಿಷೇಕ, ಬಿಲ್ವಾರ್ಚನೆ ಸೇವೆ ವಿಶೇಷವಾಗಿ ಹೂವಿನ ಅಲಂಕಾರ ಮಾಡಿ ಮಹಾಮಂಗಳಾರತಿಯೊಂದಿಗೆ ಪೂಜೆ ಧಾರ್ಮಿಕವಾಗಿ ನಡೆಯಿತು.


ದೀಪಾವಳಿ ಉತ್ಸವಗಳು : ಹರಕೆ ಹೊತ್ತ ಮಾದಪ್ಪನ ಭಕ್ತರಿಂದ ಮಲೆ ಮಾದೇಶ್ವರನ ಬೆಟ್ಟದಲ್ಲಿ ನಡೆಯುವ ರುದ್ರಾಕ್ಷಿ ಮಂಟಪೋತ್ಸವ, ಬಸವ ಉತ್ಸವ, ಹುಲಿವಾಹನ ಉತ್ಸವ ಹಾಗೂ ಬೆಳ್ಳಿತೇರು ಉತ್ಸವ ಮತ್ತು ಚಿನ್ನದ ತೇರಿನ ಉತ್ಸವದಲ್ಲಿ ಮಾದಪ್ಪನ ಭಕ್ತರು ಪಾಲ್ಗೊಂಡರು. ಮಾದಪ್ಪನ ದೇವಾಲಯದ ಆವರಣದಲ್ಲಿ ಚಪ್ಪರ ಮಳಿಗೆ ಉತ್ಸವ ಮಾದೇಶ್ವರ ಉತ್ಸವ ಮೂರ್ತಿಗೆ ಅಭಿಷೇಕ ಮಾಡುವ ಪಲ್ಲಕ್ಕಿ ಉತ್ಸವಕ್ಕೆ ಭಕ್ತರಿಂದ ಧಾರ್ಮಿಕವಾಗಿ ಪೂಜಾ ಕಾರ್ಯಕ್ರಮಗಳು ಸಂಭ್ರಮ ಸಡಗರದೊಂದಿಗೆ ನಡೆಯಿತು

ವಿಶೇಷ ದಾಸೋಹ : ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ದೀಪಾವಳಿ ಹಬ್ಬದ ಐದು ದಿನಗಳ ಜಾತ್ರಾ ಮಹೋತ್ಸವಕ್ಕೆ ರಾಜ್ಯದ ನಾನಾ ಭಾಗಗಳಿಂದ ಹಾಗೂ ವಿವಿಧ ಜಿಲ್ಲೆಗಳಿಂದ ಮತ್ತು ತಮಿಳುನಾಡಿನಿಂದ ಬರುವ ಮಾದಪ್ಪನ ಭಕ್ತರ ಅನುಕೂಲಕ್ಕಾಗಿ ನಿರಂತರ ದಾಸೋಹವನ್ನು ಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಭಕ್ತರಿಗೆ ವ್ಯವಸ್ಥೆ ಕಲ್ಪಿಸಿದೆ. ಜೊತೆಗೆ ಪ್ರತ್ಯೇಕವಾಗಿ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಜಾತ್ರೆಗೆ ಬಂದಿರುವ ಪೊಲೀಸ್ ಇಲಾಖೆ ಮತ್ತು ವಿವಿಧ ಇಲಾಖೆ ಅಧಿಕಾರಿ ಸಿಬ್ಬಂದಿಗಳಿಗೂ ಸಹ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಭಕ್ತರಿಗೂ ಸಹ ದಾಸೋಹವನ್ನು ವ್ಯವಸ್ಥೆ ಮಾಡಲಾಗಿತ್ತು.

ವಿಶೇಷ ಸೇವೆಗಳು : ಬೆಟ್ಟಕ್ಕೆ ಬರುವ ಮಾದಪ್ಪನ ಭಕ್ತರಿಂದ ದಾಸೋಹ ಸೇವೆ ಮುಡಿಸೇವೆ ನಂತರ ಸ್ನಾನ ಮಾಡಲು ಭಕ್ತರಿಗೆ ವಿಶೇಷ ಸ್ನಾನಘಟ್ಟ ವ್ಯವಸ್ಥೆಯನ್ನು ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಲ್ಪಿಸಿದೆ. ಜೊತೆಗೆ ಭಕ್ತರಿಂದ ಪಂಜಿನ ಸೇವೆ, ಉರುಳು ಸೇವೆ ಮತ್ತು ವಿಶೇಷ ಸೇವೆಗಳೊಂದಿಗೆ ಬೇಡಗಂಪಣ ಸಮುದಾಯದ ಅರ್ಚಕರಿಂದ ಧಾರ್ಮಿಕವಾಗಿ ಪೂಜಾ ಕಾರ್ಯಕ್ರಮಗಳು ಧಾರ್ಮಿಕವಾಗಿ ಜರುಗಿದವು.

ಭಕ್ತರ ದಂಡು: ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಭಕ್ತರು ರಾಜ್ಯದ ನಾನಾ ಭಾಗಗಳಿಂದ ಕರ್ನಾಟಕ ರಾಜ್ಯ ಸಾರಿಗೆ ಸೇರಿದಂತೆ ವಿಶೇಷ ವಾಹನಗಳಲ್ಲಿ ಬಂದಿಳಿದಿದ್ದು, ಮಾದಪ್ಪನ ಬೆಟ್ಟದಲ್ಲಿರುವ ವಸತಿ ನಿಲಯಗಳು ತುಂಬಿ ತುಳುತ್ತಿದೆ. ದೇವಾಲಯದ ಮುಂಭಾಗ ಇರುವ ರಂಗಮಂದಿರಲ್ಲಿಯೂ ಸಹ ವಾಸ್ತವ್ಯ ಹೂಡುವ ಮೂಲಕ ಭಕ್ತರ ದಂಡೆ ಹರಿದು ಬರುತ್ತಿದೆ. ಮಲೆ ಮಾದೇಶ್ವರ ಬೆಟ್ಟದಲ್ಲಿ ಎತ್ತ ನೋಡಿದರು ಜನಸಾಗರವೇ ಕಂಡು ಬಂದಿದೆ.

ಭದ್ರತೆ : ದೀಪಾವಳಿ ಜಾತ್ರೆ ಮಹೋತ್ಸವದ ಅಂಗವಾಗಿ ಪೊಲೀಸ್ ಇಲಾಖೆ ಹೆಚ್ಚಿನ ಪೊಲೀಸರನ್ನು ಜಿಲ್ಲೆಯ ವಿವಿಧ ಠಾಣೆಗಳಿಂದ ಯೋಜನೆ ಮಾಡುವ ಮೂಲಕ ದೇವಾಲಯ ಮುಂಭಾಗ ಹಾಗೂ ಬಸ್ ನಿಲ್ದಾಣ ಮತ್ತು ದಾಸೋಹ ವ್ಯವಸ್ಥೆ ನಡೆಯುವ ಸ್ಥಳ ಮತ್ತು ಆಯಕಟ್ಟಿನ ಸ್ಥಳಗಳಲ್ಲಿ ಭದ್ರತೆ ಕಲ್ಪಿಸಿದೆ.



ಮಹದೇಶ್ವರ ಬೆಟ್ಟದಲ್ಲಿ ಭಾನುವಾರದಿಂದ ಆರಂಭವಾದ ದೀಪಾವಳಿ ಜಾತ್ರೆಯಲ್ಲಿ ಪಾಲ್ಗೊಂಡಿರುವ ಭಕ್ತಸಾಗರ

ದೇವಾಲಯಕ್ಕೆ ದಲಿತರಿಗೆ ಪ್ರವೇಶ ನಿರಾಕರಣೆ ಆರೋಪ

17 ಮಂದಿ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲು

ಸುಳ್ಳು ದೂರು ಎಂದು ವೀರನಪುರ ಗ್ರಾಮಸ್ಥರಿಂದ ಠಾಣೆ ಮುಂದೆ ಪ್ರತಿಭಟನೆ

ಚಾಮರಾಜನಗರ: ಜಿಲ್ಲೆಯ ಗುಂಡ್ಲು ಪೇಟೆ ತಾಲೂಕಿನ ವೀರನಪುರ ಗ್ರಾಮದ ಮಾರಮ್ಮನ ದೇವಸ್ಥಾನ ಪ್ರವೇಶಕ್ಕೆ ದಲಿತರಿಗೆ ನಿರ್ಬಂಧ ವಿಧಿಸಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಗ್ರಾಮದ 17 ಜನರ ವಿರುದ್ಧ ಅಟ್ರಾಸಿಟಿ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.



ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆ ಮುಂಭಾಗ ಗುಂಡ್ಲು ಪೇಟೆ ತಾಲೂಕಿನ ವೀರನಪುರ ಗ್ರಾಮದ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಘಟನೆಯ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಗ್ರಾಮದ ಶಿವಕುಮಾರ್ ದೂರು ಸಲ್ಲಿಸಿದ್ದಾರೆ. ಗ್ರಾಮದ ಗುರುಪ್ರಸಾದ್, ನಾಗಸುಂದರ್, ಮಹದೇವಪ್ಪ ಶಂಭಪ್ಪ ಮಂಜು, ನಾಗರಾಜು, ಮಂಜುನಾಥ್, ಮಲ್ಲು ಕಮರಹಳ್ಳಿ, ಮಲ್ಲು ಗಣೇಶ, ಮಣಿ, ನಾಗಪ್ಪ, ಕುಮಾರ, ಮಧುಮಲ್ಲಪ್ಪ, ಮಧು, ವೀರಭದ್ರೇಶ್ವರ ದೇಗುಲ ಅರ್ಚಕರಾದ ಸೋಮಶೇಖರ್ ಹಾಗೂ ಶಿವಮೂರ್ತಿ ಸೇರಿದಂತೆ ಒಟ್ಟು 17 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಏನಿದು ಘಟನೆ?: ವೀರನಪುರ ಗ್ರಾಮದ ಮಾರಮ್ಮನ ದೇವಸ್ಥಾನಕ್ಕೆ ವೀರಭದ್ರಸ್ವಾಮಿ, ಸಿದ್ದಪ್ಪಾಜಿ ಅವರ ಪ್ರವೇಶವನ್ನು ನಿರಾಕರಿಸಲಾಗಿದೆ. ಹಾಗೂ ದೇವಾಲಯಕ್ಕೆ ಸೇರಿದ ಆಸ್ತಿಯನ್ನು ಹರಾಜು ಮಾಡದೇ ಸವರ್ಣೀಯರೇ ಅನುಭವಿಸುತ್ತಿದ್ದಾರೆ ಎಂಬ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಅ.17 ರಂದು ಗ್ರಾಮದ ಎಲ್ಲಾ ಸಮುದಾಯದ ಮುಖಂಡರ ಶಾಂತಿ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಗ್ರಾಮದ ಮುಖಂಡರಾದ ಗುರುಪ್ರಸಾದ್, ದೇಗುಲದ ಅರ್ಚಕರು ಸೇರಿ 17 ಮಂದಿ ಜಾತಿ ನಿಂದನೆ ಮಾಡಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಗ್ರಾಮದ ಶಿವಕುಮಾರ್ ಎಂಬುವವರು ಗುಂಡ್ಲುಪೇಟೆ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಪ್ರಕರಣ ಖಂಡಿಸಿ ವೀರನಪುರ ಗ್ರಾಮಸ್ಥರ ಪ್ರತಿಭಟನೆ: ವೀರನಪುರ ಗ್ರಾಮದ 17 ಮಂದಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಾಗಿದೆ, ಗ್ರಾಮದ ಶಾಂತಿ ಕದಡುವ ಹುನ್ನಾರದಿಂದ ಈ ದೂರು ನೀಡಲಾಗಿದ್ದು, ದೂರದಾರನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಭಾನುವಾರ ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆ ಮುಂಭಾಗ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಈ ವೇಳೆ ಗ್ರಾಮದ ಮುಖಂಡರಾದ ಗುರುಪ್ರಸಾದ್ ಮಾತನಾಡಿ, ನಮ್ಮ ಗ್ರಾಮದಲ್ಲಿ ಎಲ್ಲಾ ಜನಾಂಗದವರು ಒಗ್ಗಟ್ಟಾಗಿ ಇದ್ದೇವೆ. ಆದರೆ, ನಮ್ಮ ಗ್ರಾಮದ ಕೆಲವು ಮಂದಿ ನಮ್ಮ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಅಟ್ರಾಸಿಟಿ ಪ್ರಕರಣವನ್ನು ದಾಖಲು ಮಾಡಿದ್ದಾರೆ ಆದ್ದರಿಂದ ಅದಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿ, ದೂರು ನೀಡಿರುವ ಶಿವಕುಮಾರ್ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ನಂತರ ಮುಖಂಡರಾದ ನಾಗಾರ್ಜುನ್ ಮಾತನಾಡಿ, ಅದೊಂದು ಸುಳ್ಳು ದೂರಾಗಿದ್ದು, ಸತ್ಯಾಂಶವನ್ನು ಪರಿಶೀಲನೆ ಮಾಡದೇ ದೂರು ದಾಖಲು ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಪ್ರತಿಭಟನಾಕಾರರ ಅಹವಾಲು ಆಲಿಸಿದ ಡಿವೈಎಸ್‌ಪಿ ಸ್ನೇಹರಾಜ್ ಮಾತನಾಡಿ, ಇಂದೇ ಈ ಪ್ರಕರಣ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಗ್ರಾಮಕ್ಕೆ ಡಿವೈಎಸ್‌ಪಿ ಭೇಟಿ: ಗ್ರಾಮಸ್ಥರ ಪ್ರತಿಭಟನೆ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸೂಚನೆ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಡಿವೈಎಸ್‌ಪಿ ಸ್ನೇಹರಾಜ್ ಭಾನುವಾರ ಸಂಜೆ ಭೇಟಿ ನೀಡಿ ಪರಿಶೀಲಿಸಿ ಸ್ಥಳ ಮಹಜರು ನಡೆಸಿದರು. ಬಳಿಕ ಗ್ರಾಮಸ್ಥರಿಂದ ಅಭಿಪ್ರಾಯ ಪಡೆದರು.

ಘಟನೆ ಹಿನ್ನಲೆ ದೂರು, ಪ್ರತಿ ದೂರುಗಳ ಸಂಬಂಧ ಮುಂದಿನ ತನಿಖೆ ಕೈಗೊಂಡಿದ್ದಾರೆ. ವೀರನಪುರ ಗ್ರಾಮಸ್ಥರು ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರತಿ ದೂರು ನೀಡಲು ನಿರ್ಧರಿಸಿದ್ದಾರೆ.

> ದೂರು ನೀಡಿದಾಗ ಅದನ್ನು ದಾಖಲು ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಬಳಿಕ ಕೂಲಂಕಷವಾಗಿ ತನಿಖೆ ನಡೆಸಿ ಅದು ಸುಳ್ಳು ಪ್ರಕರಣ ಎಂದು ಸಾಬೀತಾದರೆ 'ಬಿ' ರಿಪೋರ್ಟ್ ಸಲ್ಲಿಸಲಾಗುವುದು. ಬಳಿಕ ಸುಳ್ಳು ದೂರು ನೀಡಿದ ವ್ಯಕ್ತಿಯ ಮೇಲೆ ಪ್ರಕರಣ ದಾಖಲು ಮಾಡಲಾಗುತ್ತದೆ.
>
> –ಸ್ನೇಹರಾಜ್, ಡಿವೈಎಸ್‌ಪಿ.

ಚಾ.ನಗರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ

ಚಾಮರಾಜನಗರ: ಚಾಮರಾಜನಗರ ಪಟ್ಟಣದಲ್ಲಿ ಭಾನುವಾರ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಪಥಸಂಚಲನವು ಯಶಸ್ವಿಯಾಗಿ ನಡೆಯಿತು.

ಆರ್‌ಎಸ್‌ಎಸ್ ಪಥಸಂಚಲನ ನಡೆಸಲು ಅನುಮತಿ ಕಡ್ಡಾಯ ಎಂದು ಸರ್ಕಾರ ಆದೇಶ ಹೊರಡಿಸಿದೆಯಾದರೂ ಪಟ್ಟಣದಲ್ಲಿ ಯಾವುದೇ ತೊಂದರೆ ಮತ್ತು ಅಡ್ಡಿ – ಆತಂಕಗಳಿಲ್ಲದೆ ಪಥಸಂಚಲನ ನಡೆಯಿತು.



ಚಾಮರಾಜನಗರದಲ್ಲಿ ಆರ್‌ಎಸ್ ಎಸ್ ಪಥ ಸಂಚಲನವು ಯಶಸ್ವಿಯಾಗಿ ನಡೆಯಿತು.

ರಾಷ್ಟ್ರೀಯ ಸ್ವಯಂ ಸೇವಾ ಸಂಘಗಳ ಪ್ರಮುಖರು ಹಾಗೂ ಸ್ವಯಂ ಸೇವಕರು ನಗರದ ಮಾರಿಗುಡಿ ದೇವಸ್ಥಾನದ ಮುಂಭಾಗ ಗಣ ವೇಷಧಾರಿಗಳಾಗಿ ಆಗಮಿಸಿದರು. ನಂತರ ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಸಮಾವೇಶಗೊಂಡರು.

ತಾಯಿ ಭುವನೇಶ್ವರಿ ಮತ್ತು ಆರ್‌ಎಸ್‌ಎಸ್ ಸಂಸ್ಥಾಪಕರ ಭಾವಚಿತ್ರಗಳನ್ನು ತೆರೆದ ಜೀಪಿನಲ್ಲಿ ಇರಿಸಿ, ಮಾಲಾರ್ಪಣೆ ಮಾಡಿ, ವಂದನೆ ಸಲ್ಲಿಸಿ, ಆರ್‌ಎಸ್‌ಎಸ್ ಧ್ವಜರೋಹಣ ನೆರವೇರಿಸಿ, ವಂದನೆ ಸ್ವೀಕರಿಸಿದರು.

ನಂತರ ಪಥ ಸಂಚಲನವು ತ್ಯಾಗರಾಜ ರಸ್ತೆ, ಭುವನೇಶ್ವರಿ ವೃತ್ತ, ಡಿವಿಯೇಷನ್ ರಸ್ತೆ, ಸತ್ಯಮಂಗಲ ರಸ್ತೆ ವೃತ್ತ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂಪಿಗೆ ರಸ್ತೆ, ವೀರಭದ್ರೇಶ್ವರ ದೇವಸ್ಥಾನ ರಸ್ತೆ, ಸಂತೇಮರಹಳ್ಳಿ ವೃತ್ತ ಮಾರ್ಗವಾಗಿ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಅಂತ್ಯಗೊಳಿಸಲಾಯಿತು.

ಅಲ್ಲಲ್ಲಿ ಸಾರ್ವಜನಿಕರು ಗಣ ವೇಷಧಾರಿಗಳಿಗೆ ಪುಷ್ಪ ವೃಷ್ಟಿ ಮಾಡಿದರು. ಪುಟ್ಟ ಮಕ್ಕಳು, ಬಾಲಕರು ಗಣ ವೇಷಧಾರಿಗಳಾಗಿ ಗಮನ ಸೆಳೆದರು. ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್, ಮಾಜಿ ಶಾಸಕ ಎಸ್.ಬಾಲರಾಜು, ಮುಖಂಡರಾದ ನಿಜಗುಣರಾಜು, ಡಾ.ಎ.ಆರ್. ಬಾಬು, ನಟರಾಜು, ನಾರಾಯಣ ಪ್ರಸಾದ್, ಕಾಡಹಳ್ಳಿ ಕುಮಾರ್, ಚಿಕ್ಕರಾಜು, ಮಹದೇವಸ್ವಾಮಿ, ನಿಶಾಂತ್, ಲೋಕೇಶ್ ಮನೋಜ್ ಪಟೇಲ್ ಜನಪ್ರತಿನಿಧಿಗಳು, ಮುಖಂಡರು ಹಾಗೂ ಕರ ಸಂಚಾಲಕರು ಇದ್ದರು.

ಇಂದು ಮಹದೇಶ್ವರ ಬೆಟ್ಟದಲ್ಲಿ ಪೌರಕಾರ್ಮಿಕರ ಪ್ರತಿಭಟನೆ

ಚಾಮರಾಜನಗರ: ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಹೊರಗುತ್ತಿಗೆಯಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿರುವ ಪೌರಕಾರ್ಮಿಕರನ್ನು ಖಾಯಂ ಗೊಳಿಸುವಂತೆ ಆಗ್ರಹಿಸಿ ಅ.20 ರಂದು ಮಹದೇಶ್ವರ ಬೆಟ್ಟದಲ್ಲಿ ಪೌರಕಾರ್ಮಿಕರು ಪ್ರತಿಭಟನೆ ನಡೆಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಪೌರಕಾರ್ಮಿಕರ ಸಂಘದ ಅಧ್ಯಕ್ಷ ಡಿ.ಆರ್.ರಾಜು ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 15 ವರ್ಷಗಳಿಂದಲೂ ಪ್ರಾಧಿಕಾರದಲ್ಲಿ 87ಕ್ಕೂ ಹೆಚ್ಚು ಪೌರಕಾರ್ಮಿಕರು ಹೊರಗುತ್ತಿಗೆಯಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿದ್ದಾರೆ. ಆದರೆ, ಇವರನ್ನು ಇಲ್ಲಿಯ ತನಕ ಖಾಯಂಗೊಳಿಸಿಲ್ಲ ಆದ್ದರಿಂದ ಅ.20 ರಂದು ಮಹದೇಶ್ವರಬೆಟ್ಟದ ರಾಜಗೋಪುರದ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದರು.

ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ವಾರ್ಷಿಕ 120–130 ಕೋಟಿ ಆದಾಯವಿದೆ. ಮುಜರಾಯಿ ಧಾರ್ಮಿಕ ದತ್ತಿ ಕಾಯ್ದೆಯಂತೆ ಸಿಬ್ಬಂದಿ ವೆಚ್ಚವು ಶೇ.35 ಮೀರಬಾರದು ಎಂಬ ನಿಯಮವಿದೆ. ಆದರೆ, ಪ್ರಸ್ತುತ ಶೇ.24 ಮಾತ್ರ ಖರ್ಚಾಗುತ್ತಿದೆ. ಸಿಬ್ಬಂದಿಗೆ ವೆಚ್ಚ ಮಾಡಲು ಅವಕಾಶವಿರುವ ಹಿನ್ನೆಲೆಯಲ್ಲಿ ಹೊರಗುತ್ತಿಗೆ ರದ್ದು ಮಾಡಿ ನೇರ ಪಾವತಿಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

5 ವರ್ಷ ಪೌರಕಾರ್ಮಿಕರಾಗಿ ಕೆಲಸ ಮಾಡಿದರೆ ಸಾಕು ಅವರನ್ನು ಖಾಯಂ ಮಾಡಬೇಕು ಎಂಬ ನಿಯಮವಿದೆ. ಆದರೆ. ಕಳೆದ 15 ವರ್ಷಗಳಿಂದ ಕೆಲಸ ಮಾಡುತ್ತಿರುವ ಪೌರಕಾರ್ಮಿಕರನ್ನು ಇನ್ನೂ ಕಾಯಂ ಮಾಡಿಲ್ಲ. ಅಲ್ಲದೇ ಪೌರಕಾರ್ಮಿಕರಿಗೆ ಅಲ್ಲಿನ ಪ್ರಾಧಿಕಾರದ ಕಾರ್ಯದರ್ಶಿ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ದೂರಿದರು.

ವಿಶ್ವ ಜೂ. ಬ್ಯಾಡ್ಮಿಂಟನ್: ಬೆಳ್ಳಿ ಪದಕ ಗೆದ್ದ ತನ್ವಿ ಶರ್ಮಾ


ತನ್ವಿ ಶರ್ಮಾ

ಗುವಾಹಟಿ: ಚಿನ್ನ ಗೆದ್ದು ಇತಿಹಾಸ ನಿರ್ಮಿಸುವ ಆತಿಥೇಯ ಭಾರತದ ಯುವ ಆಟಗಾರ್ತಿ ತನ್ವಿ ಶರ್ಮಾ ಅವರ ಆಸೆ ಈಡೇರಲಿಲ್ಲ. ಥಾಯ್ಲೆಂಡ್‌ನ ಅನ್ಯಪತ್ ಫಿಚಿಟ್‌ಪ್ರೀಚಸಕ್ ಅವರು ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಭಾನುವಾರ ನೇರ ಆಟಗಳಿಂದ ಅಗ್ರ ಶ್ರೇಯಾಂಕದ ಭಾರತದ ಆಟಗಾರ್ತಿಯರ ಜೊತೆ ಸೆಣೆಸಿದ ಅವರು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿ ಸೈನಾ ನೆಹ್ವಾಲ್ ಮತ್ತು ಅಪರ್ಣಾ ಪೊಪಟ್ ಬಳಿಕ ಈ ಟೂರ್ನಿಯ ಫೈನಲ್ ತಲುಪಿದ ಭಾರತದ 3ನೇ ಆಟಗಾರ್ತಿ ಎನಿಸಿರುವ 16 ವರ್ಷ ವಯಸ್ಸಿನ ತನ್ವಿ 7–15, 12–15ರಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿಗೆ ಸೋತರು. ಇದು 17 ವರ್ಷಗಳಲ್ಲಿ ಭಾರತದ ಆಟಗಾರ್ತಿಯೊಬ್ಬರು ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಗೆಲ್ಲುತ್ತಿರುವ ಮೊದಲ ಬೆಳ್ಳಿ ಪದಕವಾಗಿದೆ. ಸೈನಾ (2008ರಲ್ಲಿ ಚಿನ್ನ, 2006ಲ್ಲಿ ಬೆಳ್ಳಿ), ಅಪರ್ಣಾ (1996ರಲ್ಲಿ ಬೆಳ್ಳಿ) ಈ ಹಿಂದೆ ಪದಕ ಗೆದ್ದ ಭಾರತದ ಇನ್ನಿಬ್ಬರು ಆಟಗಾರ್ತಿಯರಾಗಿದ್ದಾರೆ.

ಮೊದಲ ಗೇಮ್‌ನ ಆರಂಭದಲ್ಲಿ ಸ್ಕೋರ್ 2–2, 4–4 ಸಮಬಲದಲ್ಲಿ ಸಾಗಿತು. ಆದರೆ ಥಾಯ್ಲೆಂಡ್ ಆಟಗಾರ್ತಿಯ ಕೆಲವು ರಿಟರ್ನ್‌ಗಳು ತನ್ವಿ ಅವರನ್ನು ವಂಚಿಸಿದವು. ತಮ್ಮ ಎರಡು ಸ್ಮ್ಯಾಶ್‌ಗಳು ಮತ್ತು ತನ್ವಿ ಅವರು ಅಂಕಣದಾಚೆ ಕಳಿಸಿದ ಹೊಡೆತದಿಂದ ಥಾಯ್ಲೆಂಡ್ ಆಟಗಾರ್ತಿ 13–7 ಮುನ್ನಡೆ ಗಳಿಸಿದ ಮೇಲೆ ಗೇಮ್ ಕೂಡ ಸುಲಭವಾಗಿ ಗೆದ್ದರು.

ಎರಡನೇ ಗೇಮ್‌ನಲ್ಲಿ ಕೆಲವು ನಿಖರ ಡೀಪ್ ರಿಟರ್ನ್‌ಗಳ ಮೂಲಕ ಭಾರತದ ಆಟಗಾರ್ತಿ 6–1 ಮುನ್ನಡೆ ಸಾಧಿಸಿದರು. ಆದರೆ ನೆಟ್ ಬಳಿಯ ಹೊಡೆತದಲ್ಲಿ ಎಸಗಿದ ತಪ್ಪುಗಳಿಂದ ಥಾಯ್ ಆಟಗಾರ್ತಿ ಚೇತರಿಸಿ ಹಿನ್ನಡೆಯನ್ನು 5–7ಕ್ಕೆ ಇಳಿಸಿದರು. ನಂತರ ಸ್ಕೋರ್ 8–8 ಸಮನಾಯಿತು. ಕೆಲವು ಬಿರುಸಿನ ಹೊಡೆತಗಳಿಂದ ಅವರು 11–8 ಮುನ್ನಡೆಯನ್ನೂ ಗಳಿಸಿದರು. ನಂತರ ಅವರ ಮೇಲುಗೈ ಮುಂದುವರಿಯಿತು. ಗೆಲುವಿಗೆ ಅನ್ಯಪತ್ ಫಿಚಿಟ್‌ಪ್ರೀಚಸಕ್ ತೆಗೆದುಕೊಂಡಿದ್ದು 28 ನಿಮಿಷಗಳನ್ನು.

ಲಿಯು ಯಾಂಗ್‌ಗೆ ಪ್ರಶಸ್ತಿ: ಇದೇ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಚೀನಾದ ಲಿಯು ಯಾಂಗ್ ಮಿಂಗ್ ಯು ಅವರು 15–10, 15–11 ರಿಂದ ಇಂಡೊನೇಷ್ಯಾದ ಮೊಹಮ್ಮದ್ ಝುಕಿ ಉಬೈದಿಲ್ಲಾ ಅವರನ್ನು ಸೋಲಿಸಿದರು. ಮೂರನೇ ಶ್ರೇಯಾಂಕದ ಆಟಗಾರ, ಅಗ್ರ ಶ್ರೇಯಾಂಕದ ಉಬೈದಿಲ್ಲಾ ಅವರನ್ನು ಮಣಿಸಲು 35 ನಿಮಿಷ ತೆಗೆದುಕೊಂಡರು.

ಪಟಾಕಿ ಸಿಡಿದು ಗಾಯಗೊಂಡವರ ಚಿಕಿತ್ಸೆಗಾಗಿ ಕೆ.ಆರ್. ಆಸ್ಪತ್ರೆಯಲ್ಲಿ ವಿಶೇಷ ವಾರ್ಡ್ ಸಜ್ಜು

ಮೈಸೂರು, ಅ.19(ವಿವಿಹೆಚ್)– ದೀಪಾವಳಿ ಬೆಳಕಿನ ಹಬ್ಬವಾದರೆ, ಪ್ರತಿ ವರ್ಷ ಹಲವರ ಬದುಕಲ್ಲಿ ಕತ್ತಲನ್ನು ಸಹ ಆವರಿಸುತ್ತದೆ. ಹಬ್ಬದ ಸಂಭ್ರಮದಲ್ಲಿ ಸಿಡಿಸುವ ಪಟಾಕಿಯಿಂದ ಸಣ್ಣ ಮಕ್ಕಳು ಗಾಯಗೊಳ್ಳುವುದು ಸೇರಿದಂತೆ ಹಲವು ದುರ್ಘಟನೆಗಳು ಸಂಭವಿಸುತ್ತಲೇ ಇವೆ.

ಈ ಬಾರಿ ಹಬ್ಬಕ್ಕೂ ಮುನ್ನವೇ ಮೈಸೂರಿನ ಕೆ.ಆರ್.ಆಸ್ಪತ್ರೆ ಸಜ್ಜಾಗಿದೆ. ಪಟಾಕಿ ಸಿಡಿತದಿಂದ ಬರುವವರಿಗೆ ಚಿಕಿತ್ಸೆ ನೀಡಲು ಪ್ರತ್ಯೇಕ ವಾರ್ಡ್ ಕೂಡ ಮೀಸಲಿಟ್ಟಿದೆ. ಇನ್ನು ದಿನದ 24 ಗಂಟೆಗಳು ಸಹ ಇಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಇರಲಿದೆ.



ದೀಪಾವಳಿ ಸಂದರ್ಭದಲ್ಲಿ ಪಟಾಕಿ ಸಿಡಿತದಿಂದ ಕಣ್ಣಿನ ಸಮಸ್ಯೆಯ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತವೆ. ಈ ಹಿನ್ನೆಲೆಯಲ್ಲಿ ಕಣ್ಣಿನ ಚಿಕಿತ್ಸೆ ಹಾಗೂ ಸುಟ್ಟ ಚರ್ಮಗಳಿಗೆ ಚಿಕಿತ್ಸೆ ನೀಡಲೆಂದೇ ಕೆ.ಆರ್.ಆಸ್ಪತ್ರೆ ಪ್ರತಿ ವರ್ಷ ವಿಶೇಷ ಸೇವೆ ಒದಗಿಸುತ್ತಾ ಬಂದಿದೆ.

ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಪ್ರತ್ಯೇಕ ವಾರ್ಡ್ ಮೀಸಲಿಟ್ಟಿದೆ. ಒಂದು ವೇಳೆ ಪಟಾಕಿ ಸಿಡಿತದಿಂದ ಏನಾದರೂ ಅವಘಡಗಳು ಸಂಭವಿಸಿದರೆ, ಕೂಡಲೇ ಕೆ.ಆರ್.ಆಸ್ಪತ್ರೆಗೆ ಧಾವಿಸುವಂತೆ ಡೀನ್ ದಾಕ್ಷಾಯಿಣಿ ತಿಳಿಸಿದ್ದಾರೆ. ದೀಪಾವಳಿ ವೇಳೆ ಎಂದಿನಂತೆ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಈ ಬಾರಿ ಪ್ರತ್ಯೇಕ ವಾರ್ಡ್ ಅನ್ನೇ ದೀಪಾವಳಿ ಸಂದರ್ಭದಲ್ಲಿ ತೆರೆದಿದೆ.

ಪಟಾಕಿ ಸಿಡಿತದಿಂದ ಕೇವಲ ಕಣ್ಣಿಗೆ ಮಾತ್ರ ಗಾಯಗಳಾಗುವುದಿಲ್ಲ. ದೇಹದ ಬೇರೆ ಭಾಗಗಳಿಗೂ ಅಪಾಯ ಎದುರಾಗುತ್ತವೆ. ಹಾಗಾಗಿ ಒಂದು ವೇಳೆ ಕಣ್ಣಿನ ಸಮಸ್ಯೆ ಜೊತೆಗೆ ಸುಟ್ಟಗಾಯಗಳಿಂದ ಬರುವವರಿಗೆ ತಕ್ಷಣವೇ ಅವರನ್ನು ಸಮೀಪದ ಬರ್ನಿಂಗ್ ವಾರ್ಡ್‌ಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಿಕೊಂಡಿದೆ. ಇನ್ನು ಸುಟ್ಟಗಾಯಗಳ ಚಿಕಿತ್ಸೆಗಾಗಿ ಪ್ರತ್ಯೇಕ ವಾರ್ಡ್ ತೆರೆಯಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮತ ಕಳವು ಪ್ರಕರಣ: ಕಾಂಗ್ರೆಸ್‌ನಿಂದ ಸಚಿವರಿಗೆ 2 ಲಕ್ಷ ಸಹಿ ಸಂಗ್ರಹ ಗುರಿ

ಬೆಂಗಳೂರು, ಅ.19– ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ 'ಮತ ಕಳವು' ನಡೆಸುತ್ತಿದೆ ಎಂದು ಆರೋಪಿಸಿ ಆರಂಭಿಸಿರುವ 'ವೋಟ್ ಚೋರ್ ಗದ್ದಿ ಚೋಡ್' ಅಭಿಯಾನದ ಅಂಗವಾಗಿ ತಮ್ಮ ವಿಧಾನಸಭಾ ಕ್ಷೇತ್ರ ಅಥವಾ ಜಿಲ್ಲೆಯಲ್ಲಿ ಕನಿಷ್ಠ ಎರಡು ಲಕ್ಷ ಸಹಿ ಸಂಗ್ರಹಿಸಿ ಇದೇ 24ರ ಒಳಗೆ ಖುದ್ದಾಗಿ ಕೆಪಿಸಿಸಿಗೆ ಸಲ್ಲಿಸಬೇಕು ಎಂದು ಎಲ್ಲಾ ಸಚಿವರಿಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ.

ಈ ಬಗ್ಗೆ ಎಲ್ಲಾ ಸಚಿವರಿಗೆ ಪತ್ರ ಬರೆದಿರುವ ಶಿವಕುಮಾರ್, ಜಿಲ್ಲಾ ಕಾಂಗ್ರೆಸ್ ಸಮಿತಿ ಅಥವಾ ಬ್ಲಾಕ್ ಕಾಂಗ್ರೆಸ್ ಸಮಿತಿಯ ಮೂಲಕ ನಡೆದ ಸಹಿ ಸಂಗ್ರಹವನ್ನು ಹೊರತುಪಡಿಸಿ ವೈಯಕ್ತಿಕವಾಗಿ 2 ಲಕ್ಷ ಸಹಿ ಸಂಗ್ರಹಿಸಬೇಕು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಈ ಸೂಚನೆ ನೀಡಿದ್ದಾರೆ ಎಂದು ಹೇಳಿದ್ದಾರೆ.

ಈ ಅಭಿಯಾನದ ಮೂಲಕ ಅತೀ ಹೆಚ್ಚು ಸಹಿ ಸಂಗ್ರಹಿಸುವಂತೆ ಕರ್ನಾಟಕ ರಾಜ್ಯಕ್ಕೆ ಪಕ್ಷದ ವರಿಷ್ಠರು ಗುರಿ ನೀಡಿದ್ದಾರೆ. ಆದ್ದರಿಂದ, ಎಲ್ಲ ಸಚಿವರು ಈ ಬಗ್ಗೆ ವೈಯಕ್ತಿಕವಾಗಿ ಆಸಕ್ತಿ ತೆಗೆದುಕೊಂಡು ಈ ಕೆಲಸ ಮಾಡಬೇಕು. ಪ್ರತಿನಿತ್ಯ ಸಂಗ್ರಹವಾಗುತ್ತಿರುವ ಸಹಿಗಳ ಸಂಖ್ಯೆಯ ಬಗ್ಗೆಯೂ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ನಿತ್ಯ ವರದಿ ಕೇಳುತ್ತಿದ್ದಾರೆ. ಹೀಗಾಗಿ, ಆಯಾ ದಿನ ಸಂಗ್ರಹಿಸುವ ಸಹಿಗಳ ವಿವರವನ್ನೂ ಕೆಪಿಸಿಸಿಗೆ ನೀಡಬೇಕು ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

26 ಲಕ್ಷ ದೀಪಗಳಿಂದ ಕಂಗೊಳಿಸಿದ ಅಯೋಧ್ಯೆ



ಲಕ್ನೋ: ದೇಶಾದ್ಯಂತ ದೀಪಗಳ ಹಬ್ಬ ದೀಪಾವಳಿ ಸಂಭ್ರಮ ಮನೆ ಮಾಡಲಿದೆ. ಅದರ ಮುನ್ನಾದಿನವೇ ಶ್ರೀರಾಮನಗರಿ ಅಯೋಧ್ಯೆಯಲ್ಲಿ ಹಬ್ಬದ ಸಂಭ್ರಮ ಇಮ್ಮಡಿಗೊಂಡಿದೆ.

ಅಯೋಧ್ಯೆ ನಗರಿ ದೀಪಗಳಿಂದ ಝಗಮಗಿಸುತ್ತಿದೆ. 26 ಲಕ್ಷ ದೀಪಗಳು ಶ್ರೀರಾಮನೂರನ್ನು ಬೆಳಗುತ್ತಿವೆ. ಪ್ರತಿ ವರ್ಷದಂತೆ ಈ ವರ್ಷವೂ ಸರಯೂ ನದಿಯ ತಟದಲ್ಲಿ ದೀಪೋತ್ಸವ ಹಮ್ಮಿಕೊಳ್ಳಲಾಗಿದೆ. ಅಯೋಧ್ಯೆಯ ಪವಿತ್ರ ಸರರೂ ನದಿಯ ತೀರದಲ್ಲಿ 26,11,101 ದೀಪಗಳನ್ನು ಬೆಳಗಿಸುವ ಮೂಲಕ ವಿಶ್ವ ದಾಖಲೆ ನಿರ್ಮಾಣವಾಗಿದೆ.

ರಾಮ ಕಿ ಪೌಡಿ ಸೇರಿದಂತೆ 56 ಘಾಟ್‌ಗಳಲ್ಲಿ ದೀಪಗಳು ಪ್ರಜ್ವಲಿಸಿವೆ. 2017ರಲ್ಲಿ ಈ ಉತ್ಸವ ಆರಂಭವಾದಾಗ ಕೇವಲ 1.71 ಲಕ್ಷ ದೀಪಗಳನ್ನು ಬೆಳಗಿಸಲಾಗಿತ್ತು. ಕಳೆದ ವರ್ಷ 25.12 ಲಕ್ಷ ದೀಪಗಳನ್ನು ಹಚ್ಚಲಾಗಿತ್ತು.

ಹಣತೆಗೆ ಬಣ್ಣ ಹಚ್ಚಿದ ಚಿಣ್ಣರು...


ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸೆಲೆನ್ಸ್ ಶಿಕ್ಷಣ ಸಂಸ್ಥೆಯು ಬೆಳಕಿನ ಹಬ್ಬ ದೀಪಾವಳಿಯನ್ನು ಅರ್ಥಪೂರ್ಣವಾಗಿ ಸ್ವಾಗತಿಸಿದ್ದು, ಸಂಸ್ಥೆಯ ಕೆಜಿ ವಿಭಾಗದ ಚಿಣ್ಣರು ತಮ್ಮ ಪೋಷಕರೊಂದಿಗೆ ಮಣ್ಣಿನ ಹಣತೆಗಳಿಗೆ ಬಣ್ಣ ಹಚ್ಚಿ ಸಂಭ್ರಮಿಸಿದರು.

ಮೈಸೂರಿನಲ್ಲಿ ಪೆರೋಲ್ ಮೇಲೆ ಬಿಡುಗಡೆಯಾದ ಸಜಾ ಕೈದಿ ನಾಪತ್ತೆ

ಮೈಸೂರು, ಅ.19– ಮೈಸೂರು ಕೇಂದ್ರ ಕಾರಾಗೃಹದಿಂದ ಪೆರೋಲ್ ಮೇಲೆ ಬಿಡುಗಡೆಯಾಗಿರುವ ಸಜಾ ಕೈದಿಯೊಬ್ಬ ನಾಪತ್ತೆಯಾಗಿದ್ದು, ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೀವಾವಧಿ ಶಿಕ್ಷೆ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಸಜಾ ಕೈದಿಯಾಗಿರುವ ಚನ್ನರಾಯಪಟ್ಟಣದ ಪ್ರಸಾದ್ ಅಲಿಯಾಸ್ ಗೂಂಡಾ ನಾಪತ್ತೆಯಾಗಿದ್ದಾನೆ.

ಈತನನ್ನು ಹಾಸನ ಕಾರಾಗೃಹದಿಂದ 2024ರ ಜು.21ರಂದು ಮೈಸೂರು ಕೇಂದ್ರ ಕಾರಾಗೃಹಕ್ಕೆ ರವಾನಿಸಲಾಗಿತ್ತು. ಹೈಕೋರ್ಟ್ ಆದೇಶದಂತೆ ಈತನಿಗೆ ಸೆ.19ರಿಂದ ಅ.18ರವರೆಗೆ ಒಂದು ತಿಂಗಳ ಪೆರೋಲ್ ರಜೆ ನೀಡಲಾಗಿತ್ತು. ಆದರೆ ಆತ ಕಾರಾಗೃಹಕ್ಕೆ ವಾಪಸ್ಸಾಗದಿರುವ ಹಿನ್ನೆಲೆಯಲ್ಲಿ ಪೆರೋಲ್ ರಜೆಗೆ ಜಾಮೀನು ನೀಡಿದ್ದ ಕೈದಿಯ ತಂದೆ ಸೇರಿದಂತೆ ಮೂವರ ವಿರುದ್ಧ ಕಾರಾಗೃಹದ ಅಧೀಕ್ಷಕರು ದೂರು ದಾಖಲಿಸಿದ್ದಾರೆ.

ದೇವೇಗೌಡರು ನಿಧನ



ಮೈಸೂರು, ಅ.19– ತಾಲೂಕಿನ ಲಕ್ಷ್ಮೀಪುರ ಗ್ರಾಮದ ನಿವಾಸಿ, ಗ್ರಾಪಂ ಮಾಜಿ ಸದಸ್ಯ ದೇವೇಗೌಡರು(73) ಭಾನುವಾರ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ(ಅ.20) ಮಧ್ಯಾಹ್ನ 12ಕ್ಕೆ ಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

ಬೇಕಾಗಿದ್ದಾರೆ
ಪ್ರತಿಷ್ಠಿತ ಶಾಲೆಗೆ ಕಾರು ಚಾಲಕ ಮತ್ತು ಸೆಕ್ಯೂರಿಟಿ ಕುಟುಂಬ ಬೇಕಾಗಿದ್ದಾರೆ. (ವಸತಿ ಉಚಿತ).
ಸ್ಥಳ: ಇಲವಾಲ ಬಳಿ. ಸಂಪರ್ಕಿಸಿ:
7204284724, 8722963130

RERA APPROVED — RAI ESTATES — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
King City, Golden Palms, Green Park, Vardaman Nagar, Paradise Enclave, Green Acres, Spring Meadows, Dream City, Dream Valley, Eastern Hills
9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಹಸು ಹಾಗೂ ಮೇಕೆಗಳನ್ನು ನೋಡಿಕೊಳ್ಳಲು ಅನುಭವವಿರುವ ಕುಟುಂಬ ಬೇಕಾಗಿದೆ. ಉತ್ತಮ ಸಂಬಳ ವಸತಿ ಸೌಲಭ್ಯವಿದೆ.
ಸಂಪರ್ಕಿಸಿ: ರಾಜಘಟ್ಟ ಕೆ.ಆರ್. ಪೇಟೆ.
8310038205 / 9740345547

EAST FACE MUDA APPROVED 40x60 SITE FOR SALE
NITYANANDASAGARA HUILALU, MYSORE
Mob: 8217851695

Teacher Vacancy
Our Growing Academy located at Siddhartha Nagar, Mysuru, requires a part-time teacher to teach classes V to VII (ALL CORE SUBJECTS). Passionate, energetic & committed educators preferred.
WHATSAPP YOUR RESUME TO:
Mob: 8105025999

ವಾಣಿಜ್ಯ ಸ್ಥಳ ಬಾಡಿಗೆಗಿದೆ
ವಾಸ್ತುಶಿಲ್ಪಿ ವಿನ್ಯಾಸಗೊಳಿಸಿದ ಕಟ್ಟಡ ವಿಸ್ತೀರ್ಣ: 1600 ಚದರ ಅಡಿ, 80 ಅಡಿ ಮುಖ್ಯ ರಸ್ತೆ, ಐಶ್ವರ್ಯ ಆಸ್ಪತ್ರೆ ಹತ್ತಿರ ವಿಜಯನಗರ 3ನೇ ಹಂತ
9141789977

ಬೇಕಾಗಿದ್ದಾರೆ
ಸ್ಟೋನ್ ಕ್ರಷರ್‌ಗೆ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
ವಸತಿ ಸೌಲಭ್ಯ ಇದೆ
ಸ್ಥಳ: ನಂಜನಗೂಡು
ಸಂಪರ್ಕಿಸಿ: 99014 60603

SITE FOR SALE
40/60 MUDA Site for sale in Dattagalli Near RT Nagara Mysore. Price: 96Lakhs
30/60 Site for sale in Hootagalli Mysore
PH: 9900464111

V-GUARD — 10 ವರ್ಷಗಳ ವ್ಯಾರಂಟಿ
Solar Water Heater SALES & SERVICE — BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಗಂಡಸರು/ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು.
9880102700

SBIT ಟ್ರಾವೆಲ್ಸ್
ಥೈಲ್ಯಾಂಡ್
4N 5D 2025
ನವೆಂಬರ್ 9TH
ವಿಮಾನ ಟಿಕೆಟ್‌ಗಳು | ಹೋಟೆಲ್ ವೀಸಾ | ಊಟ | ಪ್ರವೇಶ ಟಿಕೆಟ್‌ಗಳು | ಎಲ್ಲಾ ಪ್ರವಾಸಗಳು
Mob: 9343524127
(ಸರಸ್ವತಿಪುರಂ, ಮೈಸೂರು)

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲಿ ನೀಡಲಾಗುತ್ತದೆ. (ಟೆಲಿಕಾಲರ್ ಬೇಕಾಗಿದ್ದಾರೆ)
ಒಂದು ಗ್ರಾಂ. ಚಿನ್ನಕ್ಕೆ 12,000 (24 CT.)
Mob: 9108146123

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
30x40 NORTH Site for sale in SUNCITY HOME IN ELWALA, MYSORE READY TO BUILT WITH BORE.
Mob: 8217851695

Ready for Construction
East face 30x40 MUDA Approved site for sale in Paramanandasagara Phase-1, Huilalu, Elwala, Mysore.
Mob: 8217851695

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

APPLY NOW
Receptionist * General Manager * Night Duty Doctor * Health Insurance Dept. * Housekeeping. All of the above with minimum previous hospital experience.
Interview on 20-10-2025 (4 pm onwards)
Aadithya Adhikari Hospital
#417, Contour Road, Gokulam
Call: 7259355002

ಗೂಡ್ಸ್ ವಾಹನಕ್ಕೆ ಡ್ರೈವರುಗಳು ಬೇಕಾಗಿದ್ದಾರೆ
ಸಂಬಳ: ರೂ. 15,000/–
ಊಟ ಮತ್ತು ವಸತಿ ಉಚಿತ. ಸಂಪರ್ಕಿಸಿ:
Ph: 0821-2491755

ಶ್ರೀ ಗೌರಿಶಂಕರ ಟ್ರಾವೆಲ್ಸ್
28–11–2025 (7 ದಿನ): ಪಳನಿ, ಮಧುರೈ, ಕನ್ಯಾಕುಮಾರಿ, ರಾಮೇಶ್ವರಂ, 9 ನವಗ್ರಹ, ಶ್ರೀರಂಗಂ, MM ಹಿಲ್ಸ್ ಇತ್ಯಾದಿ.
12–12–2025 (7 ದಿನ): ದೆಹಲಿ, ಆಗ್ರಾ, ಅಯೋಧ್ಯ, ಪ್ರಯಾಗ್‌ರಾಜ್, ಕಾಶಿ, ಗಯಾ. (ವಿಮಾನ, AC ಬಸ್, ಊಟ, ರೂಂ)
Mob: 9448499538

ಕೆಲಸ ಖಾಲಿ ಇದೆ
ಮೈಸೂರಿನಲ್ಲಿರುವ ಮಹಿಳೆಯರಿಗೆ ಪುರುಷರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಫೀಸ್ ಕೆಲಸಗಳಿಗೆ ನೇರವಾಗಿ ಆಯ್ಕೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹವರಿಗೆ. ಸಂಬಳ 20,000 ದಿಂದ 45000. ಸಂಪರ್ಕಿಸಿ:
8095133188

ಹೆಸರು ಬದಲಾವಣೆ
ನಾನು, ನವ್ಯಶ್ರೀ. ಎ ವಯಸ್ಸು 34 ವರ್ಷ, ಮನೆ ನಂ. ಎ–392/1 ಎಸ್.ಕೆ.ಪಿ.ಟಿ. ರಸ್ತೆ, ಹನೂರು ತಾಲೂಕು, ಚಾಮರಾಜನಗರ ಜಿಲ್ಲೆಯಲ್ಲಿ ವಾಸಿಸುತ್ತಿದ್ದೇನೆ. ನನ್ನ ಹೆಸರು ನವ್ಯಶ್ರೀ.ಎಸ್ ನಿಂದ ನವ್ಯಶ್ರೀ.ಎ ಎಂದು ಬದಲಾಯಿಸಲಾಗಿದೆ ಎಂದು ಪ್ರಮಾಣ ವಚನ ಸ್ವೀಕರಿಸಿ, ನೋಟರಿ ಎಸ್.ಎನ್. ರಾಜಣ್ಣ ಅವರ ಮುಂದೆ ದಿನಾಂಕ 18 ಅಕ್ಟೋಬರ್ 2025 ರಂದು ಪ್ರಮಾಣವಚನ ಸ್ವೀಕರಿಸಿದ್ದೇನೆ.
Sd/- ನವ್ಯಶ್ರೀ. ಎ.

ಬೇಕಾಗಿದ್ದಾರೆ
Ice Cream Parlour ನಲ್ಲಿ ಪಾರ್ಟ್ ಟೈಮ್ ಕೆಲಸಕ್ಕೆ (6 pm - 11 pm) ಯುವಕರು ಬೇಕಾಗಿದ್ದಾರೆ. ವಯೋಮಿತಿ: (18–38). ಸಂಬಳ (8–9) ವರೆಗೆ ಇರುತ್ತದೆ.
8317386649, 8861866580

HOUSE FOR RENT
2 BHK with dining & attached bath, vetrified flooring, solar, geyser @ Vijayanagar 3rd Stage.
Mob: 99163 14393

ಹೋಮ್ ಡೆಲಿವರಿ
ನೇರ ರೈತರಿಂದ ಫ್ರೆಶ್ ವೆಜಿಟೇಬಲ್ ಹಾಗೂ ಫ್ರೂಟ್ಸ್ ಅನ್ನು ತುಂಬಾ ಕಡಿಮೆ ದರದಲ್ಲಿ ನಿಮ್ಮ ಮನೆಯ ಬಾಗಿಲಿಗೆ ಕೊಡಲಾಗುತ್ತದೆ.
ದಿ ಫಾರ್ಮರ್ಸ್ ಶಾಪ್
2nd Stage, ಗೋಕುಲಂ, ಮೈಸೂರು
8147303606, 8722761660

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7975101020

ಹೆಸರು ಬದಲಾವಣೆ
ನಾನು, ಸುರೇಶ್‌ಬಾಬು ಬಿ.ಎಸ್, ವಯಸ್ಸು 65 ವರ್ಷ, ಮನೆ ನಂ. 2693 1ನೇ ಕ್ರಾಸ್, ಮೇದರಕೇರಿ, ಕೆ.ಆರ್.ಮೊಹಲ್ಲಾ, ಮೈಸೂರುನಲ್ಲಿ ವಾಸಿಸುತ್ತಿದ್ದೇನೆ. ನನ್ನ ಹೆಸರು ಸುರೇಶ್‌ಬಾಬು ನಿಂದ ಸುರೇಶ್ ಬಾಬು ಬಿ.ಎಸ್. ಎಂದು ಬದಲಾಯಿಸಲಾಗಿದೆ ಎಂದು ಪ್ರಮಾಣ ವಚನ ಸ್ವೀಕರಿಸಿ, ನೋಟರಿ ಎಸ್.ಎನ್.ರಾಜಣ್ಣ ಅವರ ಮುಂದೆ ದಿನಾಂಕ 18 ಅಕ್ಟೋಬರ್ 2025 ರಂದು ಪ್ರಮಾಣವಚನ ಸ್ವೀಕರಿಸಿದ್ದೇನೆ.
Sd/- ಸುರೇಶ್‌ಬಾಬು ಬಿ.ಎಸ್.

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

AFFIDAVIT
I, Vasantha Nettar, S/o Shankara narayana Bhat Nettar, Residing At "Sri Vasuki", 3rd Cross, Anjana Nagar, Herohalli, Vishwaneedam Post, Bengaluru-560091 do hereby state that in some documents my name is mentioned as Vasanth Nettar. Further I state that both "VASANTHA NETTAR and VASANTH NETTAR" belongs to one and the same person only, vide affidavit dt. 17.10.2025 sworn before Notary Devaraja E, Benagaluru.
Sd/-Vasantha Nettar

SITES FOR SALE
Lal bahadur shastri nagar 30×40 (with title deed) south face 65 Lakh, Devanuru (Rajivnagar) 3rd stage 20×30 East and park facing 35 Lakh MUDA allotted sites for sale, contact Kusuma Real Estate
9902048053

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡುಗಳು
ಸ್ಥಳ : ಕುವೆಂಪುನಗರ, 2) ಹೊಸ ಆನಂದೂರು, 3) ಹೆಬ್ಬಾಳು, ಉಚಿತ ಊಟ, ವಸತಿ, ESI, P.F.
9686566261, 7259526261

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಂ ಹಾಗೂ ಬೈಕ್ ಷೋರೂಂಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. (18k -38k), SSLC, PUC, DEGREE.
6366718368

ಎಲ್ಲಾ ಸೌಕರ್ಯವಿರುವ ಜಮೀನು ಬಾಡಿಗೆಗಿದೆ
ಬೋಗಾದಿ ರಿಂಗ್ ರಸ್ತೆಯಿಂದ 3 ಕಿಮೀ ದೂರದಲ್ಲಿ ಗದ್ದಿಗೆ ಮುಖ್ಯರಸ್ತೆಯಲ್ಲಿ 1 ¼ ಎಕರೆ ಎಲ್ಲಾ ಸೌಕರ್ಯವಿರುವ ಅಲಿನೇಶನ್ ಆಗಿರುವ ಜಮೀನು ರೆಸಾರ್ಟ್ ಹಾಗೂ ಇತರೆ ಕೈಗಾರಿಕಾ ಉದ್ದೇಶಕ್ಕೆ ಬಾಡಿಗೆಗಿದೆ.
8197609290

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ:
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570 001
ದೂರವಾಣಿ: 9902639593

ತಿದ್ದುಪಡಿ
ದಿನಾಂಕ: 18.10.2025ರಂದು ಮೈಸೂರು ಮಿತ್ರ ದಿನ ಪತ್ರಿಕೆಯ ಕೊನೆಯ ಪುಟದಲ್ಲಿ ಪ್ರಕಟಗೊಂಡ ಪ್ರಕಟಣೆ ಜಾಹೀರಾತಿನಲ್ಲಿ ಷೆಡ್ಯೂಲ್ ಅನ್ನು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಸಾತಗಳ್ಳಿ ಗ್ರಾಮದ ಸರ್ವೆ ನಂ. (61/1 ರ ಬದಲಾಗಿ) 60/1 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರ 3 ಗುಂಟೆ ಎಂದು ಓದಿಕೊಳ್ಳುವುದು.
ಸಹಿ/– ಪರಂಜ್ಯೋತಿ.ಬಿ.ಆರ್, ವಕೀಲರು, ನಂ.2802, 1ನೇ ಮಹಡಿ, ಜಯನಗರ, ಮೈಸೂರು. ಮೊ: 9980905232

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ಹೌಸ್‌ಕೀಪಿಂಗ್ ಲೇಡಿ ಬೇಕಾಗಿದ್ದಾರೆ.
Timings : 9.30 to 6.00
ಸ್ಥಳ : ಬನ್ನಿಮಂಟಪ(ಮೈಸೂರು)
ಸಂಬಳ : 10,000(ESI & PF)
8147965332

ಬೇಕಾಗಿದ್ದಾರೆ
ಕುಶಾಲನಗರದಲ್ಲಿರುವ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ. ತಂದೂರಿ ಭಟ್ಟರು–2, ಚೈನೀಸ್ ಕುಕ್–2, ಸೌತ್ ಇಂಡಿಯನ್ ಕುಕ್ –2, ನಾರ್ತ್ ಇಂಡಿಯನ್ ಕುಕ್–2, ಕಾಫಿ ಟೀ ಮೇಕರ್ಸ್–2
ಕೂಡಲೇ ಸಂಪರ್ಕಿಸಿ:
6363493520

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ, Diploma Mech., ITI, 8th To 2nd PUC ವರೆಗೆ. ಊಟ, ವಸತಿ, ESI, PF ಸೌಲಭ್ಯ, ಸಂಬಳ 12,500 ರಿಂದ 20,000 ಇರುತ್ತದೆ.
8951869646 / 9902645646

FOR SALE
K.H.B. KENCHALAGUDU SITE NO. 358 - 60X40 EAST FACE- CONTACT
8453298372
BROKER EXCUSE

SITE FOR SALE
30x40 Site at Siddartha layout Ramakrishna Nagar, Dattagalli 40x60 at Rajeev Nagar, Dattagalli, Saraswathipuram, Kuvempunagar,
7353430309

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದಲ್ಲಿ ನೂತನವಾಗಿ ಪ್ರಾರಂಭವಾಗಿರುವ ಸುಸಜ್ಜಿತವಾದ ವೃದ್ಧಾಶ್ರಮ (OLD AGE HOME)ಗೆ ವಯಸ್ಸಾದ ವೃದ್ಧರನ್ನು ನೋಡಿಕೊಳ್ಳಲು 2 ವರ್ಷ ಮೇಲ್ಪಟ್ಟು ಅನುಭವವಿರುವ ನುರಿತ ನರ್ಸ್ ಅಥವಾ ದಾದಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9607172737

ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲೀಷ್ ಡಿಟಿಪಿ ಟೈಪಿಂಗ್ ಅನುಭವವುಳ್ಳ ಮಹಿಳೆ/ಪುರುಷ, ಕಂಪ್ಯೂಟರ್ ಸಂಪೂರ್ಣ ಜ್ಞಾನವುಳ್ಳವರು, ಪತ್ರ ಬರಹಗಾರರ ಆಫೀಸ್‌ಗೆ ಬೇಕಾಗಿದ್ದಾರೆ.
8971936090
9686071750

TO-LET: (LEASE)
2.5 BHK (First Floor) Gokulam 1st Stage.
Ph: 8904516491

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ. ಗಂಡಸರು/ಹೆಂಗಸರು ಕೌಂಟರ್, ದೋಸೆ, ಸಸ್ಯಾಹಾರಿ ಭಟ್ರು ಪಾರ್ಸಲ್ ಕೌಂಟರ್
9986998606, 9606238790

ಮೈಸೂರು ಮಿತ್ರ — 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ದೊಡ್ಡೇಬಾಗಿಲು ಪಿಎಸಿಎಸ್‌ನಲ್ಲಿ ಜೆಡಿಎಸ್ ಪ್ರಾಬಲ್ಯ


● ಕಾಂಗ್ರೆಸ್ ಬೆಂಬಲಿತರಿಗೆ ಮುಖಭಂಗ ● 10ರಲ್ಲಿ ಜೆಡಿಎಸ್, 2ರಲ್ಲಿ 'ಕೈ' ಬೆಂಬಲಿತ ನಿರ್ದೇಶಕರ ಗೆಲುವು

ತಿ.ನರಸೀಪುರ, ಅ.19– ತಾಲೂಕಿನ ದೊಡ್ಡೇಬಾಗಿಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಮತ್ತೊಮ್ಮೆ ಪ್ರಾಬಲ್ಯ ಮೆರೆದಿದ್ದು, ಕಾಂಗ್ರೆಸ್ ತೀವ್ರ ಮುಖಭಂಗ ಅನುಭವಿಸಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಆಯ್ಕೆಗಾಗಿ ಭಾನುವಾರ ನಡೆದ ಚುನಾವಣೆಯಲ್ಲಿ ಸಂಘದ ಹಾಲಿ ಅಧ್ಯಕ್ಷ ಮಹದೇವಯ್ಯ ಬಣದ ಜೆಡಿಎಸ್ ಬೆಂಬಲಿತ ಸದಸ್ಯರು ನಿರೀಕ್ಷೆಗೂ ಮೀರಿ ಜಯಭೇರಿ ಬಾರಿಸಿದ್ದು, ಸಹಕಾರ ಸಂಘದ ಒಟ್ಟು 12 ಸ್ಥಾನಗಳ ಪೈಕಿ 10 ಸ್ಥಾನ ಪಡೆದರೆ, ಕಾಂಗ್ರೆಸ್ ಮುಖಂಡ ತಾಪಂ ಮಾಜಿ ಅಧ್ಯಕ್ಷ ದೊಡ್ಡೇಬಾಗಿಲು ಮಲ್ಲಿಕಾರ್ಜುನಸ್ವಾಮಿ ತಂಡದಿಂದ ಅವಿರೋಧ ಆಯ್ಕೆ ಸೇರಿದಂತೆ ಇಬ್ಬರು ನಿರ್ದೇಶಕರು ಮಾತ್ರವೇ ಆಯ್ಕೆಯಾಗಲು ಸಾಧ್ಯವಾಯಿತು.

ಭಾನುವಾರ ಬೆಳಗ್ಗೆ 10 ಗಂಟೆಗೆ ಆರಂಭವಾದ ಮತದಾನ ಮಧ್ಯಾಹ್ನ 3 ಗಂಟೆವರೆಗೆ ನಡೆಯಿತು. ಸಾಲಗಾರರ ಕ್ಷೇತ್ರದಿಂದ 260 ಮತಗಳ ಪೈಕಿ 248 ಮತಗಳು ಚಲಾವಣೆಗೊಂಡರೆ, ಸಾಲಗಾರರಲ್ಲದ ಕ್ಷೇತ್ರದ 54 ಮತಗಳ ಪೈಕಿ 53 ಮಂದಿ ಮತ ಚಲಾಯಿಸಿದರು. ಸಂಜೆ 6ರ ವೇಳೆಗೆ ಚುನಾವಣಾಧಿಕಾರಿ ಧನಲಕ್ಷ್ಮಿ ಫಲಿತಾಂಶ ಪ್ರಕಟಿಸಿದರು.

ಸಾಲಗಾರರ ಕ್ಷೇತ್ರದಿಂದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಹಾಲಿ ಅಧ್ಯಕ್ಷ ಮಹದೇವಯ್ಯ ಸೇರಿದಂತೆ ಸಾಮಾನ್ಯ ಕ್ಷೇತ್ರದಿಂದ ಡಿ.ಪಿ.



ನೂತನ ನಿರ್ದೇಶಕರನ್ನು ಮುಖಂಡರು ಅಭಿನಂದಿಸಿದರು.

ನಾಗರಾಜು, ಅಕ್ಬರ್ ಪಾಷ, ಮಹದೇವಮ್ಮ, ಬಸವರಾಜು, ಪ.ಪಂಗಡದ ಜವರನಾಯ್ಕ, ಹಿಂದುಳಿದ ವರ್ಗಗಳ ಪ್ರವರ್ಗ 'ಎ' ಯಿಂದ ಕೃಷ್ಣಾಪುರ ಕೆ.ಮರಿಸ್ವಾಮಿ, ಮಹಿಳೆ ಮೀಸಲಾತಿಯಡಿ ಪುಟ್ಟತಾಯಮ್ಮ ಹಾಗೂ ಮರಿತಾಯಮ್ಮ, ಸಾಲಗಾರರ ಕ್ಷೇತ್ರದಿಂದ ಸಾಮಾನ್ಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ರಾಜಮ್ಮ ಚುನಾವಣೆಯಲ್ಲಿ ಜಯಗಳಿಸಿದರು. ಉಳಿದಂತೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿದ್ದ ವಕೀಲ ಎಂ.ಮಹದೇವಸ್ವಾಮಿ (ರವಿ) ಆಯ್ಕೆಯಾದರೆ, ಸಾಲಗಾರರ ಕ್ಷೇತ್ರದಿಂದ ಕಾಂಗ್ರೆಸ್‌ನ ಚಿಕ್ಕತಾಯಮ್ಮ ಅವಿರೋಧವಾಗಿ ಆಯ್ಕೆಯಾದರು. ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಸಹಕಾರ ಸಂಘದ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಕಳೆದ ಬಾರಿಯೂ ಜೆಡಿಎಸ್ ಬೆಂಬಲಿತರೇ ಗೆಲುವು ಸಾಧಿಸಿ ಸಹಕಾರ ಸಂಘದ ಅಧಿಕಾರ ಹಿಡಿದಿದ್ದರು. ಈ ಬಾರಿ ಜೆಡಿಎಸ್ ಬೆಂಬಲಿತರಿಗೆ ಸೋಲುಣಿಸಲು ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನಸ್ವಾಮಿ ಹೆಣೆದಿದ್ದ ಕಾರ್ಯತಂತ್ರ ಫಲ ನೀಡದೆ ಕೇವಲ 2 ಸ್ಥಾನ ಗಳಿಸುವಲ್ಲಿ ತೃಪ್ತಿ ಪಟ್ಟುಕೊಳ್ಳುವಂತಾಯಿತು.

ವಿಜಯೋತ್ಸವದ ಆಚರಿಸಿ ಮಾತನಾಡಿದ ಹಾಲಿ ಅಧ್ಯಕ್ಷ ಮಹದೇವಯ್ಯ, ಜೆಡಿಎಸ್ ಕಾರ್ಯಕರ್ತರ ಸಮಯೋಚಿತ ನಿರ್ಧಾರ ಹಾಗೂ ಪರಿಪಕ್ವ ನಡೆಯಿಂದಾಗಿ ಈ ಬಾರಿಯೂ ನಮ್ಮ ತಂಡಕ್ಕೆ ವಿರೋಚಿತ ಗೆಲುವು ದೊರಕಿದೆ. ಚುನಾವಣೆ ಪೂರ್ವ ಕೆಲ ಗೊಂದಲಗಳನ್ನು ವಿಪಕ್ಷದವರು ಸೃಷ್ಟಿಸಿದರೂ ಅದ್ಯಾವುದಕ್ಕೂ ಕಿವಿಗೊಡದೇ ಮತದಾರರು ನಮ್ಮ ಅಭ್ಯರ್ಥಿಗಳ ಜಯಕ್ಕೆ ಕಾರಣರಾಗಿದ್ದಾರೆ. ಹೀಗಾಗಿ ಮತದಾರರ ಋಣ ತೀರಿಸಲು ಸಾಧ್ಯವಿಲ್ಲ. ಮತದಾರರು ಕೊಟ್ಟ ತೀರ್ಪಿನಿಂದ ಸಹಕಾರ ಸಂಘದಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಲು ಸ್ಫೂರ್ತಿ ಬಂದಿದ್ದು, ಮತದಾರರ ವಿಶ್ವಾಸಕ್ಕೆ ದ್ರೋಹ ಬಗೆಯದೆ ಸಹಕಾರ ಸಂಘದ ಅಭಿವೃದ್ಧಿಗೆ ಗಮನ ಹರಿಸುವುದಾಗಿ ಭರವಸೆ ನೀಡಿದರು.

ರೈತರಿಗೆ ಸವಲತ್ತು ವಿತರಣೆ

ರೈತರು ನಮ್ಮ ಬೆಂಬಲಕ್ಕೆ ನಿಂತಿದ್ದು, ನಮ್ಮ ಅಭಿವೃದ್ಧಿ ಕಾರ್ಯಗಳೇ ನಮಗೆ ಶ್ರೀರಕ್ಷೆಯಾಗಿದೆ. ಮುಂದಿನ ದಿನಗಳಲ್ಲಿ ಅತೀ ಹೆಚ್ಚು ಸಾಲ ಸೌಲಭ್ಯ ನೀಡಲು ಯೋಜನೆ ರೂಪಿಸಲಾಗಿದೆ. ರೈತರಿಗೆ ಬೇಕಾಗುವ ಗೊಬ್ಬರ, ಬಿತ್ತನೆ ಬೀಜ ಕೊಡುವ ನಿಟ್ಟಿನಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ದುಡಿಯುತ್ತೇವೆ.

– ಕೆ.ಮರಿಸ್ವಾಮಿ. ನೂತನ ನಿರ್ದೇಶಕ.

ತಾಲೂಕು ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಕೃಷ್ಣಾಪುರ ರಾಮಶೆಟ್ಟಿ ಮಾತನಾಡಿದರು. ಸಹಾಯಕ ಚುನಾವಣೆ ಅಧಿಕಾರಿಯಾಗಿ ಮಿನಿ ಮಹದೇವಸ್ವಾಮಿ ಕಾರ್ಯನಿರ್ವಹಿಸಿದ್ದರು. ಜೆಡಿಎಸ್ ಹೋಬಳಿ ಅಧ್ಯಕ್ಷ ಸೋಸಲೆ ಹೆಚ್.ಎನ್.ಧರ್ಮರತ್ನಾಕರ ಕುಮಾರ್, ಜೆಡಿಎಸ್ ಯುವ ಮುಖಂಡ ರಾಜಣ್ಣ, ಪುಟ್ಟಮಲ್ಲಯ್ಯ, ಗ್ರಾಪಂ ಸದಸ್ಯರಾದ ಮುದ್ದುಸ್ವಾಮಿ, ಕುಮಾರಸ್ವಾಮಿ, ಮೋಳೆ ರಮೇಶ್ ಸೇರಿದಂತೆ ಗ್ರಾಮಸ್ಥರು ಮುಖಂಡರು ಹಾಜರಿದ್ದರು.

85 ಲಕ್ಷ ವೆಚ್ಚದ ಕಾಮಗಾರಿಗೆ ಚಾಲನೆ



ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಾಲನೆ ನೀಡಿದರು.

ಹೆಚ್.ಡಿ.ಕೋಟೆ, ಅ.19– ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಯೋಜನೆಗಳನ್ನು ರೂಪಿಸಿ ಪಟ್ಟಣವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ಅನಿಲ್ ಭರವಸೆ ನೀಡಿದರು.

ಮಳೆ ಹಾನಿ ವಿಪತ್ತು ನಿಧಿಯ 85 ಲಕ್ಷ ರೂ. ವೆಚ್ಚದಲ್ಲಿ ಪಟ್ಟಣದ ವಾರ್ಡ್ ನಂ.1 ಮತ್ತು 2ರ ಮುಸ್ಲಿಂ ಬ್ಲಾಕ್ ಹಾಗೂ ಕೆಂಕೆರೆ ಕೆರೆ ಕೋಡಿಯಿಂದ ವಿಶ್ವನಾಥಯ್ಯ ಕಾಲೋನಿ ಯಲ್ಲಮ್ಮ ತಾಯಿ ದೇವಾಲಯದವರೆಗೆ ಮಳೆ ನೀರು ಚರಂಡಿ, ರಾಜಕಾಲುವೆ ಅಭಿವೃದ್ಧಿ ಹಾಗೂ ಅಡ್ಡ ಮೋರಿಗಳ ಮರು ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಇದೀಗ ಮಂಜೂರಾಗಿರುವ ಹಣದಲ್ಲಿ ಗುಣಮಟ್ಟದ ಕಾಮಗಾರಿ ನಡೆಸಬೇಕು. ಈ ಹಿಂದೆ ಇದೇ ವಾರ್ಡ್‌ಗಳಲ್ಲಿ ಕೈಗೊಳ್ಳಲಾದ 55 ಲಕ್ಷ ವೆಚ್ಚದ ರಸ್ತೆ ಕಾಮಗಾರಿ ಉತ್ತಮವಾಗಿ ನಡೆದಿದೆ. ಹೀಗಾಗಿ ಜಮಾ ಮಸೀದಿಯಿಂದ ಅಲ್ತಾಫ್ ಅವರ ಮನೆಯವರೆಗೆ ಡಾಂಬರೀಕರಣದ ಅವಶ್ಯಕತೆ ಇರುವುದರಿಂದ ರಸ್ತೆಯ ಕಾಮಗಾರಿಯನ್ನು ಶೀಘ್ರದಲ್ಲಿ ಆರಂಭಿಸಲಾಗುವುದು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ ಮಾತನಾಡಿ, ವಾರ್ಡ್ ನಂ 2 ಮತ್ತು 3ರಲ್ಲಿ ಮಳೆ ಬಂದರೆ ಚರಂಡಿ ನೀರು ನಿಲ್ಲುತ್ತಿತ್ತು. ಮಳೆ ಹಾನಿ ವಿಪತ್ತು ನಿಧಿಯಡಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಈ ವೇಳೆ ಪುರಸಭೆ ಸದಸ್ಯ ಸಾಹಿರಾ ಭಾನು ಅನ್ಸರ್, ಆಸೀಫ್, ರೆಹಮತ್ ಅಲಿ ಖಾನ್, ನಜೀರ್ ಅಹಮ್ಮದ್, ಜಿ.ಎಂ. ದಸ್ತಗೀರ್, ಅಶೋಕ್, ಸೌಮ್ಯ, ಚಾಮರಾಜು, ನಜೀರ್, ಹೊಂಡ ನಯಾಜ್, ಫಯಾಜ್ ಪಾಷ, ಇರ್ಫಾನ್, ಜಾವೀದ್ ಪಾಷ, ಉಮೇಶ್, ಶಂಕರ್, ಸಹಾಯಕ ಕಾರ್ಯಪಾಲಕ ಅಭಿಯಂತರ ರಮೇಶ್, ಟೈಲರ್ ರಂಗಸ್ವಾಮಿ, ಸುದರ್ಶನ್, ಸಮಾಜದ ಮುಖಂಡರು ಹಾಜರಿದ್ದರು.

ಸಂಸ್ಕೃತ ಸಾಹಿತ್ಯದ ಮೊದಲ ಕವಿ ವಾಲ್ಮೀಕಿ

ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು

ನಂಜನಗೂಡು, ಅ.19– ವಾಲ್ಮೀಕಿ ಮಹರ್ಷಿಗಳು ಸಂಸ್ಕೃತ ಸಾಹಿತ್ಯದ ಮೊದಲ ಕವಿಯಾಗಿದ್ದಾರೆ. ಅವರು ರಚಿಸಿರುವ ರಾಮಾಯಣ ಕೃತಿ ಸ್ವಾಸ್ಥ್ಯ ಸಮಾಜ ನಿರ್ಮಿಸುವ ಮಾರ್ಗದರ್ಶಿ ಸೂತ್ರವಾಗಿವೆ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು ತಿಳಿಸಿದರು.

ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ ಅವರ ಉದಾತ್ತ ಬೋಧನೆಗಳು ನಮ್ಮೆಲ್ಲರಿಗೂ ಸದ್ಗುಣ, ಶಿಸ್ತು, ಮೌಲ್ಯಗಳನ್ನು ಕಲಿಸುವುದಲ್ಲದೆ ಪ್ರಾಮಾಣಿಕತೆಯಿಂದ ಜೀವನ ನಡೆಸಲು ಸ್ಫೂರ್ತಿ ನೀಡಿದೆ. ಆದ್ದರಿಂದ ವಾಲ್ಮೀಕಿಯವರ ತತ್ವ ಸಿದ್ಧಾಂತಗಳನ್ನು ಮತ್ತು ಅವರ ಬೋಧನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.



ಕಾರ್ಯಕ್ರಮವನ್ನು ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಉದ್ಘಾಟಿಸಿದರು.

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗ ನಾಯಕ ಮಾತನಾಡಿ, ರಾಷ್ಟ್ರಕವಿ ಕುವೆಂಪು ಹೇಳಿರುವಂತೆ ಭರತ ಖಂಡದ ಅಖಂಡತೆ, ಏಕತೆಯನ್ನು ಸಂರಕ್ಷಿಸಿ ಬೆಳೆಸಿದ ಕೀರ್ತಿ ವಾಲ್ಮೀಕಿಯವರ ರಾಮಾಯಣಕ್ಕೆ ಸಲ್ಲುತ್ತದೆ. ಅಲ್ಲದೇ ವಾಲ್ಮೀಕಿ ರಾಮಾಯಣ ಕೃತಿಯು ಭಾರತೀಯ ಸಂಸ್ಕೃತಿಯ ಮೇಲೆ ಆಳವಾದ ಪ್ರಭಾವ ಬೀರಿದೆ. ಜೊತೆಗೆ ವಾಲ್ಮೀಕಿಯ ಬೋಧನೆಗಳು ಶ್ರೀರಾಮಚಂದ್ರನ ಮೌಲ್ಯಗಳನ್ನು ಉತ್ತೇಜಿಸುತ್ತವೆ. ಸತ್ಯ, ಕರ್ತವ್ಯ ಮತ್ತು ಕರುಣೆಯಂತಹ ಮಾನವೀಯ ಮೌಲ್ಯಗಳನ್ನು ಜನ ಸಾಮಾನ್ಯರಿಗೆ ಒತ್ತಿ ಹೇಳುತ್ತದೆ. ನಾಯಕ ಸಮುದಾಯ ಶೈಕ್ಷಣಿಕ, ಸಾಮಾಜಿಕವಾಗಿ ಹಿಂದುಳಿದಿದೆ. ಆದ್ದರಿಂದ ನಿಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಿಕ್ಷಿತರನ್ನಾಗಿ ಮಾಡಬೇಕು ಎಂದು ಕರೆ ನೀಡಿದರು.


ಮಹರ್ಷಿ ವಾಲ್ಮೀಕಿ ಭಾವಚಿತ್ರವನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ಗ್ರಾಪಂ ಅಧ್ಯಕ್ಷ ಹೊಣಕಾರ ನಾಯಕ, ಗ್ರಾಪಂ ಸದಸ್ಯ ಸ್ವಾಮಿ, ಸಿದ್ದರಾಜು, ಶಿವರಾಜು, ಬಂಗಾರು, ಪುಟ್ಟಣ್ಣ, ಸ್ವರೂಪ, ರಂಗಸ್ವಾಮಿ, ಮಲ್ಲೇಶ್, ಗ್ರಾಮದ ಯಜಮಾನರಿದ್ದರು.

ಕಿರಿಯರ ವಿಭಾಗದ ಅಥ್ಲೆಟಿಕ್ಸ್‌ನಲ್ಲಿ 3 ಚಿನ್ನದ ಪದಕ

ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ಆದರ್ಶ್‌ಗೆ ಅಭಿನಂದನೆ

ಹುಣಸೂರು, ಅ.19– ಕರ್ನಾಟಕ ರಾಜ್ಯ ಕಿರಿಯರ (ಅಂಡರ್–14) ವಿಭಾಗದ ಅಥ್ಲೆಟಿಕ್ಸ್‌ನಲ್ಲಿ 3 ಚಿನ್ನದ ಪದಕ ಗಳಿಸಿ ಚಾಂಪಿಯನ್ ಆಗಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುವ ಕ್ರೀಡಾಪಟು ಆರ್. ಆದರ್ಶ್ ಅವರನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅಭಿನಂದಿಸಿದರು.

ತಾಲೂಕಿನ ಕರ್ಣಕುಪ್ಪೆ ಗ್ರಾಪಂ ಮಾಜಿ ಅಧ್ಯಕ್ಷ ರಾಮೇಗೌಡ ಹಾಗೂ ವಿಮಲ ದಂಪತಿ ಪುತ್ರ, ಮೂಡಬಿದರೆ ಆಳ್ವಾಸ್ ವಿದ್ಯಾಸಂಸ್ಥೆ 9ನೇ ತರಗತಿ ವಿದ್ಯಾರ್ಥಿ ಆದರ್ಶ್ ಆ.25ರಂದು ಉಡುಪಿಯ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯ ಕಿರಿಯರ ಭಾಗದ ಅಥ್ಲೆಟಿಕ್ಸ್‌ನಲ್ಲಿ ಉದ್ದಜಿಗಿತ ಪ್ರಥಮ (3.79 ಮೀ), 60ಮೀ ಓಟದಲ್ಲಿ ಪ್ರಥಮ (7.69 ಮಿ.ಸೆಕೆಂಡ್), ಗುಂಡು ಎಸೆತದಲ್ಲಿ ಪ್ರಥಮ (18.43 ಮೀ) ಸ್ಥಾನಗಳೊಂದಿಗೆ 3 ಚಿನ್ನದ ಪದಕಗಳೊಂದಿಗೆ ರಾಷ್ಟ್ರೀಯ ಕಿರಿಯರ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.



ಆದರ್ಶ್ ಅವರನ್ನು ಮಾಜಿ ಶಾಸಕ ಮಂಜುನಾಥ್ ಅಭಿನಂದಿಸಿದರು.

ಈತನ ಸಾಧನೆ ಗುರ್ತಿಸಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅಭಿನಂದಿಸಿದ್ದಾರೆ. ಈ ವೇಳೆ ಮುಖಂಡರಾದ ರಾಘು ರಾಮೇಗೌಡ, ಕುಮಾರ್, ಸೋಮಶೇಖರ್ ಮಹದೇವ್, ಶಿವು, ಬೀರೇಶ ಇತರರಿದ್ದರು.

ಹುರ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಮಲ್ಕುಂಡಿ, ಅ.19– ಇಲ್ಲಿಗೆ ಸಮೀಪದ ಹುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜಗದೀಶ್, ಉಪಾಧ್ಯಕ್ಷರಾಗಿ ಮುದ್ದುಮಹದೇವಪ್ಪ ಆಯ್ಕೆಯಾಗಿದ್ದಾರೆ.

ಒಟ್ಟು 12 ಸದಸ್ಯ ಬಲದ ಸಹಕಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಮಲ್ಲಹಳ್ಳಿ ಗ್ರಾಮದ ಜಗದೀಶ್, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರವಿಮೂರ್ತಿ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಜಗದೀಶ್ 8 ಮತ ಪಡೆದು ಅಧ್ಯಕ್ಷರಾ ದರೇ, ಬ್ಯಾಂಕ್ ಪ್ರತಿನಿಧಿ ಸೇರಿ 5 ಮತ ಗಳನ್ನು ಪಡೆದ ರವಿಮೂರ್ತಿ ಪರಾಭವ ಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಮುದ್ದುಮಹದೇವಪ್ಪ ಉಪಾಧ್ಯಕ್ಷರಾಗಿ ಆಯ್ಕೆಯಾದರು.



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮುಖಂಡರು ಸನ್ಮಾನಿಸಿದರು.

ನೂತನ ಅಧ್ಯಕ್ಷ ಜಗದೀಶ್ ಮಾತನಾಡಿ, ಸಂಘದಿಂದ ಸಾಲ ಪಡೆದ ರೈತರು ಸಕಾಲಕ್ಕೆ ಮರುಪಾವತಿಸಿದರೆ ಸಂಘ ಹೆಚ್ಚಿನ ಅಭಿವೃದ್ಧಿ ಕಾಣಲು ಸಾಧ್ಯವಾಗುತ್ತದೆ. ಅಲ್ಲದೆ ನನ್ನ ಅಧಿಕಾರವಧಿಯಲ್ಲಿ ಸದಸ್ಯರ ಸಹಕಾರದಿಂದ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಅಲ್ಲದೇ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ರೈತರಿಗೆ ತಲುಪಿಸುವ ಕೆಲಸವನ್ನು ಮಾಡುವುದಾಗಿ ತಿಳಿಸಿದರು.

ಈ ವೇಳೆ ನಿರ್ದೇಶಕರಾದ ಚಂದ್ರು, ಎಂ.ವಿ.ಶಿವಕುಮಾರ್, ಎಂ.ಜಿ.ಮಹದೇವಸ್ವಾಮಿ, ಪಿಣ್ಣಪ್ಪ, ಚಂದ್ರಮ್ಮ, ಶಿವರಾಜು, ಮುಖಂಡರಾದ ಎಂ.ವಿ.ಬಸರಾಜಪ್ಪ ಹಾಡ್ಯ ಶಂಕರ್, ರವಿ, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಕೆಂಡಪ್ಪ, ಸುರೇಂದ್ರ, ಲಿಂಗಪ್ಪ ಪುಟ್ಟಪ್ಪ, ಶಿವಪ್ಪ ಪ್ರಕಾಶ, ರಮೇಶ್, ಕಿಟ್ಟಪ್ಪ, ಸಿಇಓ ನಾಗರಾಜು ಇದ್ದರು.

ಮಾದಿಗ ಸಮುದಾಯದ ಮುಖಂಡರನ್ನು ನಿಂದಿಸಿದ ಆರೋಪ

ಪೊಲೀಸ್ ಅಧಿಕಾರಿ ಅಮಾನತಿಗೆ ಒತ್ತಾಯಿಸಿ ಪ್ರತಿಭಟನೆ

ತಿ.ನರಸೀಪುರ, ಅ.19– ಪ್ರತಿಭಟನಾನಿರತ ಮಾದಿಗ ಸಮುದಾಯದ ಮುಖಂಡರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಪೊಲೀಸ್ ಅಧಿಕಾರಿಯನ್ನು ಅಮಾನತುಗೊಳಿಸುವಂತೆ ಒತ್ತಾಯಿಸಿ ತಾಲೂಕಿನ ಸಿದ್ದನಹುಂಡಿ ಗ್ರಾಮದ ಮಾದಿಗ ಸಮಾಜದ ಮುಖಂಡರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಸಿದ್ದನಹುಂಡಿ ಗ್ರಾಮದ ಹುಚ್ಚಮ್ಮ ದೇವಾಲಯದ ಬಳಿ ಜಮಾಯಿಸಿದ ಮಾದಿಗ ಸಮಾಜದ ಮುಖಂಡರು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ತಮಟೆ ವಾದ್ಯಗಳೊಂದಿಗೆ, ಮಾದಿಗ ಸಮಾಜದ ಪ್ರತಿಭಟನಾನಿರತರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಪೊಲೀಸ್ ಅಧಿಕಾರಿ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೊದಲಿಗೆ ಸಿದ್ದನಹುಂಡಿ ಗ್ರಾಮದಿಂದ ವ್ಯಾಸರಾಜಪುರದವರೆಗೆ ಜಾಥಾ ನಡೆಸಿದ ಪ್ರತಿಭಟನಾನಿರತರು ನಂತರ ಸಿದ್ದನಹುಂಡಿ ಗ್ರಾಮದ ಮುಖ್ಯ ರಸ್ತೆ ಮಧ್ಯೆ ಕುಳಿತು ರಸ್ತೆ ತಡೆ ನಡೆಸಿದರು. ಒಂದೂವರೆ ಗಂಟೆ ರಸ್ತೆ ತಡೆಯಿಂದಾಗಿ ವಾಹನ ಸವಾರರು ತೀವ್ರ ತೊಂದರೆ ಅನುಭವಿಸುವಂತಾಯಿತು. ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.



ಪೊಲೀಸ್ ಅಧಿಕಾರಿ ಅಮಾನತುಗೊಳಿಸುವಂತೆ ಒತ್ತಾಯಿಸಿ ಮಾದಿಗ ಸಮಾಜದ ಮುಖಂಡರು ಪ್ರತಿಭಟನೆ ನಡೆಸಿದರು.

ಮಾದಿಗ ಸಮಾಜದ ಯುವ ಮುಖಂಡ ಎಸ್.ಎಂ.ರವೀಶ್ ಮಾತನಾಡಿ, ಸಂಪೂರ್ಣ ಮೀಸಲಾತಿಗೆ ಒತ್ತಾಯಿಸಿ ಹೋರಾಟ ನಡೆಸುತ್ತಿರುವ ಮಾದಿಗ ಸಮಾಜದ ಮುಖಂಡರ ಮೇಲೆ ಸುಳ್ಳು ಕೇಸುಗಳನ್ನು ದಾಖಲಿಸುವಂತೆ ಮಹದೇವಪ್ಪ ಸೂಚನೆ ನೀಡುವ ಮೂಲಕ ಪ್ರತಿಭಟನೆ ಹಕ್ಕಿಗೆ ಚ್ಯುತಿ ತರುವ ಕೆಲಸಕ್ಕೆ ಮುಂದಾಗಿದ್ದಾರಲ್ಲದೇ ಸಂಪೂರ್ಣ ಒಳ ಮೀಸಲಾತಿ ಜಾರಿಗೊಳಿಸಲು ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರೇ ಅಡ್ಡಗಾಲು ಹಾಕುವ ಮೂಲಕ ಮಾದಿಗರ ಹಕ್ಕುಗಳನ್ನು ಕಸಿಯುತ್ತಿದ್ದಾರೆ ಎಂದು ಆರೋಪಿಸಿದರು.

ಮಾದಿಗ ಸಮಾಜದ ಸಂಪೂರ್ಣ ಮೀಸಲಾತಿಗೆ ಒತ್ತಾಯಿಸಿ ಪ್ರತಿಭಟಿಸುತ್ತಿದ್ದ ವೇಳೆ ಸಮಾಜದ ಮುಖಂಡರನ್ನು ಅವಾಚ್ಯ ಶಬ್ದದಿಂದ ನಿಂದಿಸಿರುವ ಪೊಲೀಸ್ ಅಧಿಕಾರಿಯನ್ನು ಕೂಡಲೇ ಅಮಾನತುಗೊಳಿಸಬೇಕೆಂದು ಒತ್ತಾಯಿಸಿದರು.

ಸಂಪೂರ್ಣ ಒಳ ಮೀಸಲಾತಿಯನ್ನು ಕೂಡಲೇ ಜಾರಿಗೆ ತರಲು ರಾಜ್ಯ ಸರ್ಕಾರ ಮುಂದಾಗಬೇಕು. ಮುಂದೆಯೂ ಇದೇ ರೀತಿ ಸಮಾಜ ಕಲ್ಯಾಣ ಸಚಿವರು ಒಳಮೀಸಲಾತಿ ಜಾರಿಗೊಳಿಸಲು ಅಡ್ಡಗಾಲು ಹಾಕಿದ್ದೇ ಆದಲ್ಲಿ ಗ್ರಾಮ ಮಟ್ಟದಲ್ಲಿ ನಡೆಯುತ್ತಿರುವ ಪ್ರತಿಭಟನೆ ತಾಲೂಕು, ಜಿಲ್ಲಾ ಮಟ್ಟದಲ್ಲಿ ನಡೆಯಲಿದೆ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮಾದಿಗ ಸಮಾಜದ ಮುಖಂಡರು ಭಾಗವಹಿಸಿದ್ದರು.

ಸಂಘದ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಿ

ಕೆ.ಆರ್.ನಗರ, ಅ.19– ನಮ್ಮ ಸಂಘಟನೆ ಬಹಳ ಪ್ರಮುಖವಾಗಿದ್ದು, ಪದಾಧಿಕಾರಿಗಳಾಗಿ ನೇಮಕ ಆಗುವವರು ಅಧಿಕಾರಕ್ಕೆ ಅಂಟಿಕೊಳ್ಳದೆ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ರಾಷ್ಟ್ರೀಯ ಅಹಿಂದ ಸಂಘಟನೆ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಕೆ.ಎಸ್.ಮಂಜುನಾಥ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ರಾಷ್ಟ್ರೀಯ ಅಹಿಂದ ಸಂಘಟನೆಯ ಕೆ.ಆರ್.ನಗರ ತಾಲೂಕು ಒಬಿಸಿ ಘಟಕದ ಅಧ್ಯಕ್ಷರಾಗಿ ನೇಮಕವಾದ ಶಶಿಕುಮಾರ್ ಹಾಗೂ ರೈತ ಘಟಕದ ಅಧ್ಯಕ್ಷ ದೇವೇಂದ್ರ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಪಧಾದಿಕಾರಿಗಳು ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದರೆ ಸಂಘದ ಉದ್ದೇಶ ಈಡೇರಲಿದೆ ಎಂದರು.



ಶಶಿಕುಮಾರ್, ದೇವೇಂದ್ರ ಅವರನ್ನು ಅಭಿನಂದಿಸಲಾಯಿತು.

ರಾಜ್ಯಾದ್ಯಂತ ಪ್ರವಾಸ ಮಾಡಿ ಹಿಂದುಳಿದ, ಅಲ್ಪ ಸಂಖ್ಯಾತ, ಪ.ಜಾತಿ ಮತ್ತು ಪಂಗಡ ವರ್ಗದವರನ್ನು ಗುರ್ತಿಸಿ ಅವರಿಗೆ ಶಕ್ತಿ ತುಂಬುವ ಮತ್ತು ನೊಂದವರ ನೆರವಿಗೆ ಧಾವಿಸಿ ಅವರಿಗೆ ಸರ್ಕಾರದಿಂದ ದೊರೆಯುವ ಎಲ್ಲಾ ಸವಲತ್ತುಗಳನ್ನು ಕೊಡಿಸಲು ಕಾರ್ಯ ಯೋಜನೆ ರೂಪಿಸಿ ಕೊಂಡಿದ್ದು, ಇದಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದು ಕೋರಿದರು.

ನಮ್ಮ ಸಂಘಟನೆ ಎಲ್ಲರ ನೋವು ಮತ್ತು ಸಂಕಷ್ಟಗಳಿಗೆ ಸ್ಪಂದಿಸಲು ಸಿದ್ಧವಾಗಿದ್ದು, ಬೂತ್ ಮಟ್ಟದಲ್ಲಿ ಸದಸ್ಯರು ಮತ್ತು ಪದಾಧಿಕಾರಿಗಳನ್ನು ಸಂಘಟಿಸಿ ನಮ್ಮ ಅಹಿಂದ ವರ್ಗಗಳ ನಾಯಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಂತು ಅವರ ಕೈ ಬಲಪಡಿಸುವ ಜೊತೆಗೆ ಮುಂದಿನ ದಿನಗಳಲ್ಲಿ ಚುನಾವಣೆಯಲ್ಲಿ ಅಹಿಂದ ವರ್ಗದ ಪ್ರತಿನಿಧಿಗಳು ಆಯ್ಕೆಯಾಗುವಂತೆ ಮಾಡೋಣ ಎಂದರು.

ಭವಿಷ್ಯದಲ್ಲಿ ನಾವು ಜಿಲ್ಲೆಯ ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೆ ತೆರಳಿ ಆರೋಗ್ಯ ಮತ್ತು ರಕ್ತದಾನ ಶಿಬಿರಗಳನ್ನು ಆಯೋಜಿಸಿ ಎಲ್ಲರೊಂದಿಗೆ ಬೆರೆತು ಸಮಾಜ ಮುಖಿ ಕೆಲಸ ಮಾಡಲಿದ್ದು, ಇದಕ್ಕೆ ಎಲ್ಲರೂ ಸಹಾಯ ಮತ್ತು ಆರ್ಥಿಕ ಸಹಕಾರ ನೀಡಬೇಕೆಂದು ಕೋರಿದರು.

ಗುಡ್ಡಗಾಡು ಓಟ ಕ್ರೀಡಾಕೂಟ ಸಮಾರೋಪ ಸಮಾರಂಭ

ಸರಗೂರು, ಅ.19– ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2025–26ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಗುಡ್ಡಗಾಡು ಓಟ ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಿತು.

ಕ್ರೀಡಾಕೂಟದಲ್ಲಿ ವಿಶ್ವವಿದ್ಯಾನಿಲಯ ವ್ಯಾಪ್ತಿಯ 24 ಕಾಲೇಜಿನಿಂದ 130ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಂಡಿದ್ದರು. ಕಾಲೇಜಿನಿಂದ ಆರಂಭವಾದ 10 ಕಿಮೀ ದೂರದ ಓಟದ ಸ್ಪರ್ಧೆ ತುಂಬಸೋಗೆ, ಇಟ್ನಾ ಮಾರ್ಗವಾಗಿ ಮತ್ತೆ ಕಾಲೇಜಿನಲ್ಲೇ ಮುಕ್ತಾಯಗೊಂಡಿತು. ವಿದ್ಯಾರ್ಥಿಗಳ ವಿಭಾಗದಲ್ಲಿ ಹುಲ್ಲಹಳ್ಳಿ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿ ಆರ್.ರೋಹಿತ್, ಮೈಸೂರು ವಿವಿ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿ ಆರ್.ಪುರುಷೋತ್ತಮ್ ದ್ವಿತೀಯ ಸ್ಥಾನ ಪಡೆದರು. ವಿದ್ಯಾರ್ಥಿನಿಯರ ವಿಭಾಗದಲ್ಲಿ ಮೈಸೂರಿನ ಟೆರಿಷಿಯನ್ ಕಾಲೇಜಿನ ಅಶ್ವಿನಿ, ತಿ.ನರಸೀಪುರದ ಪಿಆರ್‌ಎಂ ವಿಜಯ ಎಫ್‌ಜಿಸಿ ಕಾಲೇಜಿನ ಎಂ.ಸಹನಾ ಪ್ರಥಮ, ದ್ವಿತೀಯ ಸ್ಥಾನ ಪಡೆದರು.



ಕ್ರೀಡಾಕೂಟದ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಮೈಸೂರು ವಿವಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ತಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಉದಯ್‌ಕುಮಾರ್, ಸಿಡಿಸಿ ಕಾರ್ಯಾಧ್ಯಕ್ಷ ರವಿ, ಸಿಡಿಸಿ ಸದಸ್ಯ ಕೆಂಡಗಣ್ಣಸ್ವಾಮಿ, ಸೂಪರ್ ಮಾರ್ಕೆಟ್ ಸಂಸ್ಥಾಪಕ ವರುಣ್ ಮತ್ತು ಕಾಲೇಜಿನ ಪ್ರಾಂಶುಪಾಲ ಎಂ.ಜೆ.ದಯಾನಂದ ವಿಜೇತರಿಗೆ ಬಹುಮಾನ ವಿತರಿಸಿದರು.

ಇದಕ್ಕೂ ಮುನ್ನ ಡಾ.ಪಾರ್ಥಸಾರಥಿ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ವೃಂದ ಎನ್.ಕೆ., ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ದೀಪ ಎಂ.ಬಿ., ಡಾ.ತಿಮ್ಮಯ್ಯ, ಸನ್ಮತಿ, ಡಾ.ಮಧುಸೂದನ್, ಯತೀಶ, ಪ್ರಭುಸ್ವಾಮಿ, ಮಂಜುಳಾದೇವಿ, ಕಾಲೇಜಿನ ಅಧೀಕ್ಷಕರಾದ ಎಂ.ಎಸ್. ಮಹೇಶ್ ಸೇರಿದಂತೆ ಇನ್ನಿತರರಿದ್ದರು.

ಕಸಬಾ ಪಿಎಸಿಎಸ್‌ನಲ್ಲಿ ಜೆಡಿಎಸ್ ಬೆಂಬಲಿತರ ಗೆಲುವು

ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಸಂತಸ

ಹೆಚ್.ಡಿ.ಕೋಟೆ, ಅ.19– ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನಗಳಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಜಯಗಳಿಸಿರುವುದು ಸಂತಸ ತಂದಿದೆ. ಈ ಗೆಲುವು ಮುಂದಿನ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಭಾನುವಾರ ಕಸಬಾ ಪಿಎಸಿಎಸ್ ನೂತನ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡಿದ ಅವರು, ಮುಂಬರುವ ಗ್ರಾಪಂ, ತಾಪಂ, ಜಿಪಂ, ಪುರಸಭೆ ಸೇರಿದಂತೆ ಎಲ್ಲಾ ರೀತಿಯ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸಲು ಶ್ರಮಿಸಲಾಗುವುದು. ಆ ಮೂಲಕ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಜೆಡಿಎಸ್ ಅನ್ನು ಅಧಿಕಾರಕ್ಕೆ ತಂದು ಮಾಜಿ ಸಿಎಂ ಕುಮಾರಸ್ವಾಮಿ ಅವರ ಕೈ ಬಲಪಡಿಸಿ ಕಾಂಗ್ರೆಸ್ ಪಕ್ಷವನ್ನು ಧೂಳೀಪಟ ಮಾಡಲಾಗುವುದು ಎಂದರು.



ಕಸಬಾ ಪಿಎಸಿಎಸ್ ನೂತನ ನಿರ್ದೇಶಕರನ್ನು ಸನ್ಮಾನಿಸಲಾಯಿತು.

ಕಸಬಾ ಪಿಎಸಿಎಸ್‌ನ ಒಟ್ಟು 12 ಸ್ಥಾನಗಳ ಪೈಕಿ 10 ಸ್ಥಾನಗಳಲ್ಲಿ ಜೆಡಿಎಸ್ ಬೆಂಬಲಿತ ನಿರ್ದೇಶಕರು ಜಯಗಳಿರುವುದು ಸಂತಸದ ವಿಚಾರ. ನೂತನ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಹೀಗಾಗಿ ಪಕ್ಷದ ಮುಖಂಡರು, ಕಾರ್ಯಕರ್ತರು ತಳ ಮಟ್ಟದಿಂದ ಪಕ್ಷ ಸಂಘಟಿಸಬೇಕು. ಯಾವುದೇ ಚುನಾವಣೆ ಎದುರಾದರೂ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು ಎಂದರು.

ಇದೇ ವೇಳೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕೋಟೆಗೆ ಆಗಮಿಸಲಿದ್ದು, ಅವರ ಸಮ್ಮುಖದಲ್ಲಿ ಸಾವಿರಾರು ಮಂದಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಳ್ಳಲಿದ್ದಾರೆ ಎಂದರು.

ಇದೇ ವೇಳೆ ನೂತನ ನಿರ್ದೇಶಕರಾದ ದೇವನಾಯಕ, ಬಿ.ಕೆ.ಶಿವರಾಜು, ಎಸ್.ಎಸ್. ಯಶವಂತಕುಮಾರ್, ಸಿ.ಬಸವರಾಜು, ಸಿ.ಕೆ.ನಾಗರಾಜು, ಬಿ.ಸಿ.ಭೈರೇಗೌಡ, ಪ್ರೇಮಾ, ಶುಭಮಂಗಳ, ಬೀರೇಗೌಡ, ಬಿ.ಕೆ. ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಕೋಟೆ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಸರಗೂರು ತಾಲೂಕು ಅಧ್ಯಕ್ಷ ಗೋಪಾಲಸ್ವಾಮಿ, ಒಕ್ಕಲಿಗ ಸಮಾಜದ ಅಧ್ಯಕ್ಷ ಹರೀಶ್‌ಗೌಡ, ಕಾರ್ಯದರ್ಶಿ ಶಿವಕುಮಾರ್, ಮುಖಂಡರಾದ ಕೃಷ್ಣನಾಯಕ, ನಾಗೇಗೌಡ, ಸುಧೀರ್, ಗುರುಸ್ವಾಮಿ, ಮಹೇಶ್, ನಟರಾಜು, ಭೈರೇಗೌಡ, ಸಿದ್ದೇಗೌಡ, ಪ್ರಕಾಶ್, ವಸಂತ್ ಕುಮಾರ್, ಲೇಖನ, ರಾಮೇಗೌಡ, ಗಿರಿ, ಪ್ರದೀಪ, ವಕೀಲರಾದ ಪ್ರಶಾಂತ, ಈಶ್ವರ ನಾಯಕ್, ಬಿಲ್ಲನಾಯಕ, ರಂಗೇಗೌಡ, ಎನ್.ಸಿ.ಪ್ರಕಾಶ್, ರಾಮರಾಜ್, ಸೀನ, ಮಹದೇವ ನಾಯಕ, ನಾಗನಾಯಕ, ಶಿವಯ್ಯ, ಶ್ರೀಕಾಂತ್, ಮಹದೇವ, ಪ್ರಭು ಸೇರಿದಂತೆ ಜೆಡಿಎಸ್ ಮುಖಂಡರು, ಕಾರ್ಯಕರ್ತರಿದ್ದರು.

ದೊಡ್ಡ ವೆಂಕಟೇಗೌಡ ನಿಧನ

ತಿ.ನರಸೀಪುರ, ಅ.19– ತಾಲೂಕಿನ ಚಾಮನಹಳ್ಳಿ ಗ್ರಾಮದ ಹಿರಿಯ ಮುಖಂಡ ಹಾಗೂ ಯಜಮಾನ ದೊಡ್ಡ ವೆಂಕಟೇಗೌಡ (75) ಭಾನುವಾರ ಸಂಜೆ ನಿಧನರಾದರು.



ಪತ್ನಿ ಪಾರ್ವತಮ್ಮ ಮತ್ತು ಬನ್ನೂರಿನ ನವನೀತ್ ಜುವೆಲ್ಲರಿ ಮಾಲೀಕ ಸುರೇಶ್ ಸೇರಿದಂತೆ ಇಬ್ಬರು ಪುತ್ರರು ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನಲ್ಲಿ ಒಕ್ಕಲಿಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಹಿಂದೆ ಗುರು, ಮುಂದೆ ಗುರಿ ಇದ್ದರೆ ಸಾಧನೆ ಸಾಧ್ಯ

ವಿದ್ಯಾರ್ಥಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಕಿವಿಮಾತು

ಮೈಸೂರು, ಅ.19(ಬಿಎಲ್‌ಯು)– ಹಿಂದೆ ಗುರು ಇರಬೇಕು, ಮುಂದೆ ಗುರಿ ಇರಬೇಕು ಎಂಬ ಮನೋಭಾವದ ನಡವಳಿಕೆ ರೂಪಿಸಿ ಕೊಂಡರೆ ಬದುಕಿನಲ್ಲಿ ಸಾಧನೆ ಮಾಡ ಬಹುದು ಎಂದು ಶಾಸಕ ಜಿ.ಟಿ.ದೇವೇ ಗೌಡರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರದ 2ನೇ ಹಂತದ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಇಂದು ರಾಜ್ಯ ಒಕ್ಕಲಿಗರ ಸಂಘ ಮತ್ತು ಕೃಷ್ಣಪ್ಪ ರಂಗಮ್ಮ ಎಜುಕೇಷನ್ ಟ್ರಸ್ಟ್ ಸಂಯುಕ್ತ ವಾಗಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರ ಜೊತೆ ಸಮಾಜದ ಬಗ್ಗೆ ಪ್ರೀತಿ, ಗೌರವ ಭಾವನೆ ಇರಬೇಕು. ಗುರಿ ತಲುಪುವ ಜೊತೆಗೆ ಸಮಾಜದ ಪ್ರತಿಷ್ಠೆ ಹೆಚ್ಚಿಸಲು ಕೆಲಸ ಕೂಡ ಮಾಡ ಬೇಕು ಎಂದು ಕಿವಿ ಮಾತು ಹೇಳಿದರು.

ಬಹಳಷ್ಟು ಸಾಧಕರು ಸಮುದಾಯ ಬೆಳೆಸುವ ಕೆಲಸ ಮಾಡಿ ಮಾದರಿಯಾಗಿ ದ್ದಾರೆ. ಈ ಮೂಲಕ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಇಂದಿನ ಮಕ್ಕಳು ಕೂಡ ಇವರ ಹಾದಿಯಲ್ಲಿ ಸಾಗಿ ಸಮಾಜದ ಪ್ರತಿಷ್ಠೆ ಉಳಿಸಬೇಕು ಎಂದು ಹೇಳಿದರು.

ಮಕ್ಕಳು ಸಾಧನೆ ಮಾಡಲು ತಂದೆ–ತಾಯಿಗಳು ಬೆನ್ನೆಲುಬಾಗಿ ನಿಲ್ಲಬೇಕು. ಈ ಮೂಲಕ ಶಿಕ್ಷಣ, ಕ್ರೀಡೆ, ರಾಜಕೀಯ ಸೇರಿದಂತೆ ಯಾವುದಾದರೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿ, ಹೆಜ್ಜೆ ಗುರುತು ಮೂಡಿಸಬೇಕು ಎಂದು ಜಿ.ಟಿ. ದೇವೇಗೌಡರು ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ವಿಧಾನ ಪರಿಷತ್ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ, ಪ್ರತಿಭಾ ಪುರಸ್ಕಾರದಂತಹ ಕಾರ್ಯಕ್ರಮಗಳಿಂದ ಮಕ್ಕಳನ್ನು ಉತ್ತೇಜಿಸಬೇಕು. ಅವರ ಸಾಧನೆಗೆ ಬೆನ್ನೆಲುಬಾಗಿ ನಿಲ್ಲಬೇಕು ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನದ ಮೈಸೂರು ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಕ್ಷೇತ್ರ ಪಟ್ಟನಾಯಕನಹಳ್ಳಿಯ ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಂಜಾವಧೂತ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.



ಮೈಸೂರಿನ ವಿಜಯನಗರದ 2 ಹಂತದ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಭಾನುವಾರ ರಾಜ್ಯ ಒಕ್ಕಲಿಗರ ಸಂಘ ಮತ್ತು ಕೃಷ್ಣಪ್ಪ ರಂಗಮ್ಮ ಎಜುಕೇಷನ್ ಟ್ರಸ್ಟ್ ಸಂಯುಕ್ತವಾಗಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

● ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.95 ಕ್ಕಿಂತ ಹೆಚ್ಚು ಅಂಕ ಪಡೆದಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಒಕ್ಕಲಿಗ ಸಮುದಾಯದ 185 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

● ಅಲ್ಲದೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಮಾಜಿ ವಿಧಾನ ಪರಿಷತ್ ಸದಸ್ಯ ಡಿ.ಮಾದೇಗೌಡ, ಆರಕ್ಷಕ ಉಪ ಅಧಿಕ್ಷಕ ಶಾಂತಮಲ್ಲಪ್ಪ, ಪತ್ರಕರ್ತ ವಿನೋದ್ ಭೈರಪ್ಪ, ಯುಪಿಎಸ್‌ಸಿಯಲ್ಲಿ ಉತ್ತೀರ್ಣರಾದ ಶ್ರೇಯಸ್ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ನಿರ್ದೇಶಕರಾದ ಕೆ.ವಿ.ಶ್ರೀಧರ್, ಡಾ.ಎಂ.ಬಿ.ಮಂಜೇಗೌಡ, ಸಿ.ಜಿ.ಗಂಗಾಧರ್, ಸಹಾಯಕ ಕಾರ್ಯದರ್ಶಿ ಆರ್.ಹನುಮಂತರಾಯಪ್ಪ, ಸಾಂಸ್ಕೃತಿಕ ಚಟುವಟಿಕೆಗಳ ಸಮಿತಿ ಅಧ್ಯಕ್ಷ ವೆಂಕಟರಾಮೇಗೌಡ, ನೇಗಿಲ ಯೋಗಿ ರವಿ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡೀಸೆಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಡ್ಯೂಡ್ (ತ)	4 ಪ್ರದರ್ಶನಗಳು
ಲಿಡೋ	
ತೆಲುಸು ಕದ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪ್ರೇಮಿಗಳ ಗಮನಕ್ಕೆ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.00ಕ್ಕೆ, ರಾ.10.30ಕ್ಕೆ,
	ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	ಬೈಸನ್ (ತ): ಮ.1.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ. ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ
ಸ್ಕ್ರೀನ್ 3	ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ. 4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
ಟೈಮ್ ಪಾಸ್ (ಕ): ಬೆ: 11.15ಕ್ಕೆ
ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
ಡೀಸೆಲ್ (ತ): ಮ: 1.40ಕ್ಕೆ
ಮಹಾಯೋಧ ರಾಮ (ಹಿ): ಮ: 1.50ಕ್ಕೆ
ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
ಟೈಮ್ ಪಾಸ್ (ಕ): ಮ: 1.50ಕ್ಕೆ
ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
ತೆಲುಸು ಕಾದಾ (ತೆ): ಮ: 4.30ಕ್ಕೆ
ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ
ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿವಿ ಪುರಂ ಸಂಚಾರ ಠಾಣೆಯಲ್ಲಿ ದೂರುದಾರರ, ನೊಂದವರ ದಿನ ಆಚರಣೆ



ವಿವಿ ಪುರಂ ಸಂಚಾರ ಠಾಣೆಯಲ್ಲಿ ದೂರುದಾರರ ದಿನ ಆಚರಿಸಲಾಯಿತು.

ಮೈಸೂರು, ಅ.19(ಎಸ್‌ಪಿಎನ್)–ಮೈಸೂರು ವಿವಿ ಮೊಹಲ್ಲಾ ಸಂಚಾರ ಪೊಲೀಸ್ ಠಾಣೆಯಲ್ಲಿ ಭಾನುವಾರ ದೂರುದಾರರು, ನೊಂದವರ ದಿನ ಆಚರಿಸಲಾಯಿತು.

ವಿವಿ ಮೊಹಲ್ಲಾದ ಪಿಎಸ್‌ಐ ಮೋಹನ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ 25ಕ್ಕೂ ಹೆಚ್ಚು ದೂರುದಾರರು ಆಗಮಿಸಿ, ತಮ್ಮ ದೂರಿನ ಸ್ಥಿತಿಗತಿ, ಮುಂದಿನ ಕಾನೂನು ಪ್ರಗತಿಯ ಬಗ್ಗೆ ಮಾಹಿತಿ ಪಡೆದರು. ಕೆಲ ಅಪಘಾತದಲ್ಲಿ ಮೃತಪಟ್ಟ ಪ್ರಕರಣಗಳಲ್ಲಿ ನೊಂದ ದೂರುದಾರರಿಗೆ ಪ್ರಕರಣದ ಸಂಬಂಧ ಎಲ್ಲಾ ಮಾಹಿತಿಗಳನ್ನು ನೀಡಲಾಯಿತು. ಈ ವೇಳೆ ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕೆ.ಆರ್.ಠಾಣೆ ಪೊಲೀಸರು ಗಸ್ತು: ಕೃಷ್ಣರಾಜ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ತಮ್ಮ ವ್ಯಾಪ್ತಿ ಪ್ರದೇಶಗಳಲ್ಲಿ ಅಪರಾಧಗಳಿಗೆ ಕಡಿವಾಣ ಹಾಕಲು ಹಾಗೂ ಠಾಣಾ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆ, ನಿರ್ಜನ ಪ್ರದೇಶಗಳಲ್ಲಿ ಏರಿಯಾ ಡಾಮಿನೇಷನ್ ನಡೆಸುವ ಮೂಲಕ ರೌಡಿಗಳು, ಅನುಮಾನಸ್ಪದ ವ್ಯಕ್ತಿಗಳು ಮತ್ತು ವಾಹನಗಳ ತಪಾಸಣೆ ಹಾಗೂ ಕೋಟ್ಪಾ ಪ್ರಕರಣಗಳು ದಾಖಲಿಸಿ, ಸಾರ್ವಜನಿಕರಲ್ಲಿ ಅಭಯ ನೀಡಿದ್ದಾರೆ.

ರಾಷ್ಟ್ರೀಯ ಟೆನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾ ರಮೇಶ್ ಸಾಧನೆ

ಮೈಸೂರು, ಅ.19(ಎಂಟಿವೈ)– ಮೈಸೂರಿನ ಟೆನಿಸ್ ಪ್ರತಿಭೆ ಪದ್ಮಪ್ರಿಯಾ ರಮೇಶ್‌ಕುಮಾರ್ ಅವರು ನವದೆಹಲಿಯಲ್ಲಿ ನಡೆದ ಫೆನೆಸ್ಟಾ ಓಪನ್ ನ್ಯಾಷನಲ್ ಟೆನಿಸ್ ಚಾಂಪಿಯನ್‌ಷಿಪ್–2025ನಲ್ಲಿ 14ವರ್ಷದೊಳಗಿನ ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ವಿಜೇತರಾಗಿ ಸಿಂಗಲ್ಸ್‌ನಲ್ಲಿ ರನ್ನರ್–ಅಪ್ ಆಗಿದ್ದಾರೆ.

ಏಷ್ಯನ್ ಟೆನ್ನಿಸ್ ಫೆಡರೇಷನ್ (ಎಟಿಎಫ್) ನವದೆಹಲಿಯ ಜೈಪುರದ ದಿ ಡ್ರೀಮ್ ಹೌಸ್ ರೆಸಾರ್ಟ್ ಟೆನ್ನಿಸ್ ಅಕಾಡೆಮಿಯಲ್ಲಿ ಆಯೋಜಿಸಿದ್ದ 14 ವರ್ಷದೊಳಗಿನ ಬಾಲಕಿಯರ ಫೆನೆಸ್ಟಾ ಓಪನ್ ನ್ಯಾಷನಲ್ ಟೆನಿಸ್ ಚಾಂಪಿಯನ್‌ಷಿಪ್– 2025ನಲ್ಲಿ ಡಬಲ್ಸ್ ವಿಭಾಗದಲ್ಲಿ ವಿಜೇತರಾಗಿ ಹೊರಹೊಮ್ಮಿದ್ದು, ಸಿಂಗಲ್ಸ್ ವಿಭಾಗದಲ್ಲಿ ರನ್ನರ್–ಅಪ್ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದಾರೆ.

ಈ ಪಂದ್ಯಾವಳಿಯಲ್ಲಿ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಪದ್ಮಪ್ರಿಯಾ, ಕರ್ನಾಟಕದ ಮತ್ತೊಬ್ಬ ಆಟಗಾರ್ತಿ ಕೃಷಿಕಾ ಗೌತಮ್ ಅವರ ಜೊತೆಗೂಡಿ, ಹರಿಯಾಣದ ಸರೀನಾ ಗೆಹ್ಲೋಟ್ ಮತ್ತು ಅಮೆರಿಕಾದ ಸಹೇಜ್ ಲೆಖತ್ ಅವರ ಇಂಡೋ–ಅಮೆರಿಕನ್ ಜೋಡಿಯನ್ನು ಸೋಲಿಸಿದರು.



ನವದೆಹಲಿಯಲ್ಲಿ ನಡೆದ ಫೆನೆಸ್ಟಾ ಓಪನ್ ನ್ಯಾಷನಲ್ ಟೆನಿಸ್ ಚಾಂಪಿಯನ್‌ಷಿಪ್–2025 ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾ, ಕರ್ನಾಟಕದ ಮತ್ತೊಬ್ಬ ಆಟಗಾರ್ತಿ ಕೃಷಿಕಾ ಗೌತಮ್ ಜೋಡಿ ಡಬಲ್ಸ್‌ನಲ್ಲಿ ವಿಜೇತರಾಗಿ ಸಾಧನೆ ಮಾಡಿದ್ದಾರೆ.

ಮೊದಲ ಸೆಟ್ ಅನ್ನು 5–7 ಅಂಕಗಳಿಂದ ಹಿನ್ನಡೆ ಅನುಭವಿಸಿದ್ದ ಈ ಜೋಡಿ, ಎರಡನೇ ಸೆಟ್‌ನಲ್ಲಿ 6–0 ಅಂಕಗಳಿಂದ ಭರ್ಜರಿ ಜಯ ಸಾಧಿಸಿದರು. ನಂತರದ ಟೈ–ಬ್ರೇಕರ್‌ನಲ್ಲಿ 10–5 ಅಂಕಗಳಿಂದ ಗೆದ್ದು ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಆದರೆ ಸಿಂಗಲ್ಸ್ ಫೈನಲ್‌ನಲ್ಲಿ ಪದ್ಮಪ್ರಿಯಾ ಸರೀನಾ ಗೆಹ್ಲೋಟ್ ವಿರುದ್ಧ 0–6, 2–6 ಅಂಕಗಳಿಂದ ಸೋಲನುಭವಿಸಿದರು.

ಪದ್ಮಪ್ರಿಯಾ ಪ್ರಸ್ತುತ ಭಾರತದ ಅಂಡರ್–14 ಬಾಲಕಿಯರ ವಿಭಾಗದಲ್ಲಿ ನಂ.1 ಸ್ಥಾನದಲ್ಲಿದ್ದಾರೆ. ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ 8ನೇ ತರಗತಿಯ ವಿದ್ಯಾರ್ಥಿನಿಯಾಗಿರುವ ಪದ್ಮಪ್ರಿಯಾ ಅವರ ತಂದೆ ಡಾ.ಪಿ.ರಮೇಶ್ ಕುಮಾರ್ ಹುಲಿ ಯೋಜನೆಯ ನಿರ್ದೇಶಕರಾಗಿದ್ದರೆ, ತಾಯಿ ಡಾ. ಮಾಲತಿ ಪ್ರಿಯಾ ಕಾರ್ಯ ಯೋಜನೆಯ ಸಿಎಫ್ ಆಗಿದ್ದಾರೆ. ಪದ್ಮಪ್ರಿಯಾ ಅವರಿಗೆ ರಘುವೀರ ಪೊನ್ನುಸ್ವಾಮಿ ಮತ್ತು ಪವನ್ ಅವರು ಟೆನಿಸ್ ತರಬೇತುದಾರರಾಗಿದ್ದು, ಸಾಗರ್ ಅವರು ಫಿಟ್ನೆಸ್ ತರಬೇತುದಾರರಾಗಿದ್ದಾರೆ.

ಮಹಾ ರುದ್ರಾಕ್ಷಿ ಪ್ರದರ್ಶನ, ಮಾರಾಟಕ್ಕೆ ಇಂದು ತೆರೆ

ಮೈಸೂರು, ಅ.19(ಎಸ್‌ಬಿಡಿ)– ದೀಪಾವಳಿ ಪ್ರಯುಕ್ತ ಹೈದರಾಬಾದ್ ಮೂಲದ ಇಂಡಸ್–ನೇಪಾಳ ರುದ್ರಾಕ್ಷ ಸಂಸ್ಥೆಯು ಮೈಸೂರಿನಲ್ಲಿ ಆಯೋಜಿಸಿರುವ ಆರು ದಿನಗಳ ಮಹಾರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟಕ್ಕೆ ನಾಳೆ(ಅ.20) ತೆರೆ ಬೀಳಲಿದೆ.

ನಗರದ ಎಂ.ಜಿ.ರಸ್ತೆಯ ಹೋಟೆಲ್ ಸಿಪಾಯಿ ಗ್ರಾಂಡೆ ಹೋಟೆಲ್‌ನಲ್ಲಿ ಏರ್ಪಡಿಸಿರುವ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟದಲ್ಲಿ ಅತ್ಯಂತ ವಿರಳವಾದ ರತ್ನದ ಹರಳುಗಳು, ಸುಮಾರು 4.5 ಲಕ್ಷ ರೂ. ಬೆಲೆಯುಳ್ಳ ದುಂಡಾದ ಏಕಮುಖಿ ರುದ್ರಾಕ್ಷಿಗಳೂ ಲಭ್ಯವಿದ್ದು, ಬೆಳಗ್ಗೆ 10.30ರಿಂದ ರಾತ್ರಿ 9ರವರೆಗೆ ಭೇಟಿ ನೀಡಬಹುದಾಗಿದೆ.

ರುದ್ರಾಕ್ಷಿ ಧರಿಸುವುದು ಶುಭದಾಯಕ. ಆದರೆ ಈ ಬಗ್ಗೆ ತಿಳುವಳಿಕೆ ಹೊಂದಿರುವುದು ಒಳ್ಳೆಯದು. ಯಾರು ಯಾವ ರುದ್ರಾಕ್ಷಿಯನ್ನು ಯಾವಾಗ ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ ಜನ್ಮರಾಶಿ ಹಾಗೂ ಜನ್ಮನಕ್ಷತ್ರದ ಆಧಾರದಲ್ಲಿ ವೇದ ಗಣಿತದ ಮೂಲಕ



ತಿಳಿಸಲಾಗುವುದು. ಹಾಗೆಯೇ ಅಸಲಿ ಮತ್ತು ನಕಲಿ ರುದ್ರಾಕ್ಷಿಗಳ ನಡುವಿನ ಭಿನ್ನತೆ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ಸಂಸ್ಥೆಯ ನಿರ್ದೇಶಕ ಡಾ.ನರೇಂದ್ರ ಕಾಶಿರೆಡ್ಡಿ ತಿಳಿಸಿದ್ದಾರೆ.


ಗ್ರಾಹಕರಿಗೆ ಗುಣಮಟ್ಟದ ರುದ್ರಾಕ್ಷಿಗಳನ್ನು ಮಾರಾಟ ಮಾಡುವಲ್ಲಿ ಇಂಡಸ್–ನೇಪಾಳ ರುದ್ರಾಕ್ಷ ಸಂಸ್ಥೆ ವಿಶ್ವಾಸಾರ್ಹತೆ ಹೊಂದಿದೆ. ಜನ್ಮದಿನಾಂಕ ಆಧರಿಸಿ, ಯಾವ ರಾಶಿಗೆ ಯಾವ ಮುಖದ ರುದ್ರಾಕ್ಷಿ ಸೂಕ್ತ ಎಂದು ಪರಾಮರ್ಶಿಸಿ ರುದ್ರಾಕ್ಷಿ ನೀಡಲಾಗುವುದು. ಮಾಂಸಾಹಾರಿಗಳೂ ರುದ್ರಾಕ್ಷಿ ಧರಿಸಬಹುದಾಗಿದ್ದು, ಆಸಕ್ತರಿಗೆ ಇತರ ಮುಖಗಳ ರುದ್ರಾಕ್ಷಿಗಳನ್ನೂ ತರಿಸಿಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ತಮ್ಮನ್ನು ದೂರವಾಣಿ (ಮೊ.ಸಂ.7097396666) ಮೂಲಕವೂ ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

ರಾಜ್ಯ ಕ್ಷಯರೋಗ ನಿವಾರಣಾ ಸಂಸ್ಥೆ ಬಂದ್; ಆಸ್ತಿ, ಹೊಣೆಗಾರಿಕೆ ಆರೋಗ್ಯ ಇಲಾಖೆಗೆ

ಮೈಸೂರು, ಅ.19(ಎಸ್‌ಪಿಎನ್)– ಕರ್ನಾಟಕ ರಾಜ್ಯ ಕ್ಷಯರೋಗ ನಿವಾರಣಾ ಸಂಸ್ಥೆಯಲ್ಲಿ ಯಾವುದೇ ಕಾರ್ಯಾಚರಣೆ ನಡೆಸದ ಕಾರಣ, ತಕ್ಷಣದಿಂದ ಜಾರಿಗೆ ಬರುವಂತೆ ಈ ಸಂಸ್ಥೆಯನ್ನು ಮುಕ್ತಾಯಗೊಳಿಸಿ, ಸಂಸ್ಥೆಯ ಆಸ್ತಿ, ಹೊಣೆಗಾರಿಕೆಗಳನ್ನು ಹಾಗೂ ಕೆಲಸ ಕಾರ್ಯಗಳನ್ನು ಆರೋಗ್ಯ ಮತ್ತು ಕುಟುಂಬ ಸೇವೆಗಳು ಇಲಾಖೆ ಅಧೀನದ ಕ್ಷಯ ರೋಗ ವಿಭಾಗಕ್ಕೆ ಹಸ್ತಾಂತರಿಸುವಂತೆ ಅಧೀನ ಕಾರ್ಯದರ್ಶಿ ಪವಿತ್ರ ಆದೇಶಿಸಿದ್ದಾರೆ.

ಕರ್ನಾಟಕ ರಾಜ್ಯ ಕ್ಷಯ ರೋಗ ನಿವಾರಣಾ ಸಂಸ್ಥೆಯಲ್ಲಿ ಯಾವುದೇ ಕಾರ್ಯಚರಣೆ ನಡೆಸದ ಕಾರಣ, 2024ರ ಡಿ.26ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿನ ತೀರ್ಮಾನದಂತೆ ಇದೀಗ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಕ್ಷಯರೋಗ



ನಿವಾರಣಾ ಸಂಸ್ಥೆಯನ್ನು ಮುಕ್ತಾಯಗೊಳಿಸಿ, ಸಂಸ್ಥೆಯ ಆಸ್ತಿ/ಹೊಣೆಗಾರಿಕೆಗಳನ್ನು ಹಾಗೂ ಕೆಲಸ ಕಾರ್ಯಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅಧೀನದ ಕ್ಷಯರೋಗ ವಿಭಾಗಕ್ಕೆ ಹಸ್ತಾಂತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯ ಕ್ಷಯರೋಗ ನಿವಾರಣಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಒಟ್ಟು ನಾಲ್ವರು ಸಿಬ್ಬಂದಿಗಳ ಪೈಕಿ ಮೂವರು ಇತ್ತೀಚೆಗೆ ನಿವೃತ್ತರಾಗಿದ್ದು, ಅವರ ಬಾಕಿ ಮೊತ್ತವನ್ನು ಆರ್ಥಿಕ ಇಲಾಖೆಯ ಸಹಮತಿಯ ನಂತರ ಇತ್ಯರ್ಥ ಪಡಿಸುವುದು. ಉಳಿದ ಓರ್ವ ಸಿಬ್ಬಂದಿಯನ್ನು ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ನಿಯಮಾನುಸಾರ ತೆಗೆದುಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಿದೆ.

ಕರ್ನಾಟಕ ರಾಜ್ಯ ಕ್ಷಯರೋಗ ನಿವಾರಣಾ ಸಂಸ್ಥೆಗೆ ಸೇರಿದ ಘೋಷಾ ಆಸ್ಪತ್ರೆಯ ಹಿಂಭಾಗದಲ್ಲಿರುವ ಕಟ್ಟಡ ಮತ್ತು ಭೂಮಿಯನ್ನು ಎದೆ, ಶ್ವಾಸಕೋಶದ ಆರೋಗ್ಯದ ಮೇಲೆ ಗಮನಹರಿಸುವ ಆರೋಗ್ಯ ಸೌಲಭ್ಯಕ್ಕಾಗಿ ಉಳಿಸಿಕೊಳ್ಳಲಾಗುತ್ತದೆ.

ಕರ್ನಾಟಕ ರಾಜ್ಯ ಕ್ಷಯರೋಗ ನಿವಾರಣಾ ಸಂಸ್ಥೆಯ ಸುಮಾರು 98 ಲಕ್ಷ ರೂ.ಗಳ ಸ್ಥಿರ ಠೇವಣಿಯ ಮೊತ್ತವನ್ನು ನೌಕರರ ಅನುಮತಿಸಬಹುದಾದ ವೇತನ, ಪಿಂಚಣಿ ಬಾಕಿಗಳನ್ನು ಪಾವತಿಸಲು ಮತ್ತು ಕಟ್ಟಡದ ನವೀಕರಣ, ಉಪಕರಣಗಳ ಪೂರೈಕೆಗಾಗಿ ಬಳಸಲಾಗುವುದು ಎಂದು ಆದೇಶದಲ್ಲಿ ಹೇಳಿದೆ.

ಕಟ್ಟಡಗಳಿಗೆ ವಿದ್ಯುತ್ ದೀಪಾಲಂಕಾರ ಮಾಡುವಾಗ ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಸೆಸ್ಕ್ ಮನವಿ

ಮೈಸೂರು,ಅ.19(ಎಂಟಿವೈ)– ಬೆಳಕಿನ ಹಬ್ಬ ದೀಪಾವಳಿ ಅಂಗವಾಗಿ ಮನೆ ಹಾಗೂ ಕಟ್ಟಡಗಳಿಗೆ ಸೀರಿಯಲ್ ಸೆಟ್ ಸೇರಿದಂತೆ ವಿದ್ಯುತ್ ದೀಪಾಲಂಕಾರ ಮಾಡುವಾಗ ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಮನವಿ ಮಾಡಿದೆ.

ದೀಪಾವಳಿ ಹಬ್ಬಕ್ಕೆ ತಮ್ಮ ಮನೆ ಹಾಗೂ ಅಂಗಡಿಗಳನ್ನು ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಸೀರಿಯಲ್ ಲೈಟ್ ಮತ್ತು ವಿದ್ಯುತ್ ತಂತಿಗಳನ್ನು ನೀರಿನಿಂದ ದೂರವಿರಿಸಬೇಕು. ಪ್ಲಗ್ ಪಾಯಿಂಟ್‌ಗಳಲ್ಲಿ ಅತಿಯಾದ ಲೋಡ್ ಹಾಕಬಾರದು. ಹೆಚ್ಚಿನ ಲೋಡ್ ಹಾಕಿದರೆ ಶಾರ್ಟ್ ಸರ್ಕ್ಯೂಟ್ ಉಂಟಾಗುವ ಸಾಧ್ಯತೆ ಇರಲಿದೆ. ಹಣತೆ, ದೀಪವನ್ನು ಕೇಬಲ್, ವಿದ್ಯುತ್ ತಂತಿ ಹಾಗೂ ಪ್ಲಗ್‌ಗಳಿಂದ ದೂರವಿರಿಸುವಂತೆ ನೋಡಿಕೊಳ್ಳಬೇಕು ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿ ಗೋಪಾಲ ರಾಜ್ ಸಲಹೆ ನೀಡಿದ್ದಾರೆ.

ಪಟಾಕಿ ಹಚ್ಚುವ ಸಂದರ್ಭದಲ್ಲಿ ವಿದ್ಯುತ್ ಕಂಬ ಅಥವಾ ಟ್ರಾನ್ಸ್‌ಫಾರ್ಮರ್ ಇರುವ ಸ್ಥಳಗಳ ಬಗ್ಗೆ ನಿಗಾ ವಹಿಸಬೇಕು. ಇಂತಹ ಸ್ಥಳಗಳಲ್ಲಿ ಪಟಾಕಿ ಹಚ್ಚಬಾರದು. ವಿದ್ಯುತ್ ಉಪಕರಣಗಳಿಂದ ಮಕ್ಕಳನ್ನು ದೂರವಿರುವಂತೆ ನೋಡಿಕೊಳ್ಳಬೇಕು. ದೀಪಾವಳಿ ಆಚರಣೆ ವೇಳೆ ವಿದ್ಯುತ್ ಸಮಸ್ಯೆಗಳು ಅಥವಾ ಅವಘಡ ಸಂಭವಿಸಿದ್ದಲ್ಲಿ ಗ್ರಾಹಕ ಸಹಾಯವಾಣಿ 1912ಗೆ ಮಾಹಿತಿ ನೀಡುವಂತೆ ಕೋರಿದ್ದಾರೆ.

ಪರಿಸರ ಸಮತೋಲನಕ್ಕೆ ಮರ–ಗಿಡಗಳ ಸಂರಕ್ಷಣೆ ಅತ್ಯಗತ್ಯ

ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ ವ್ಯವಸ್ಥಾಪಕ ಟ್ರಸ್ಟಿ ರಾಜ್‌ಕುಮಾರ್ ದೇವರಾಜೇ ಅರಸ್ ಅಭಿಮತ

ಮೈಸೂರು,ಅ.19(ಎಂಟಿವೈ)– ಪರಿಸರ ಹಾಗೂ ವನ್ಯಜೀವಿ ಸಂರಕ್ಷಣೆಯಲ್ಲಿ ಪ್ರತಿಯೊಂದು ಗಿಡ–ಮರ ಹಾಗೂ ಜೀವಿಗಳ ಸಂರಕ್ಷಣೆ ಅಗತ್ಯವಾಗಿದ್ದು, ಇವುಗಳಲ್ಲಿ ಯಾವುದಕ್ಕಾದರೂ ದಕ್ಕೆಯಾದರೆ ದೊಡ್ಡ ಪ್ರಮಾಣದ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ ವ್ಯವಸ್ಥಾಪಕ ಟ್ರಸ್ಟಿ ರಾಜ್‌ಕುಮಾರ್ ದೇವರಾಜೇ ಅರಸ್ ತಿಳಿಸಿದ್ದಾರೆ.

ವನ್ಯಜೀವಿ ಸಪ್ತಾಹದ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಸಿಲ್ವರ್ ಜ್ಯೂಬಿಲಿ ಸಭಾಂಗಣದಲ್ಲಿ ಆಯೋಜಿಸಿದ್ದ 'ವನ್ಯಜೀವಿ ಸಂರಕ್ಷಣೆ: ಮಾನವ–ವನ್ಯಜೀವಿ ಸಂಘರ್ಷ ಮತ್ತು ವನ್ಯಜೀವಿ ಅಪರಾಧ' ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಪರಿಸರ ಸಮತೋಲನ ಕಾಪಾಡಿಕೊಳ್ಳುವ ಸವಾಲು ನಮ್ಮ ಮುಂದೆ ಇದೆ. ಇದಕ್ಕೆ ಗಿಡ–ಮರಗಳ ಸಂರಕ್ಷಣೆ ಮಾಡಲೇಬೇಕಾಗಿದೆ. ಪರಿಸರ ವ್ಯವಸ್ಥೆಯ ಸಮತೋಲನ ಕಾಪಾಡಿಕೊಳ್ಳಲು ಮರಗಳು ಹೆಚ್ಚಿನ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಒಂದು ಮರ ಎಷ್ಟು ಪ್ರಮಾಣದ ಆಮ್ಲಜನಕ ಉತ್ಪಾದನೆ ಮಾಡುತ್ತದೆ ಎಂದು ಎಲ್ಲರೂ ಮನವರಿಕೆ ಮಾಡಿಕೊಳ್ಳಬೇಕು. ಒಂದು ದೊಡ್ಡ ಮರವು ವಾರ್ಷಿಕವಾಗಿ 3000 ಕೆಜಿ ಆಮ್ಲಜನಕವನ್ನು ಉತ್ಪಾದಿಸುತ್ತದೆ. ಕೊರೊನಾ ಸಂದರ್ಭದಲ್ಲಿ ಆಮ್ಲಜನಕದ ಮಹತ್ವ ಎಲ್ಲರಿಗೂ ಮನವರಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಗಿಡ–ಮರಗಳ ಸಂರಕ್ಷಿಸುವ ಮೂಲಕ ಪರಿಸರ ಸಮತೋಲನ ಕಾಪಾಡಿಕೊಳ್ಳಲು ಎಲ್ಲರೂ ಕೈಜೋಡಿಸಬೇಕು ಎಂದರು.



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ವನ್ಯಜೀವಿ ಸಪ್ತಾಹದ ಅಂಗವಾಗಿ 'ವನ್ಯಜೀವಿ ಸಂರಕ್ಷಣೆ: ಮಾನವ–ವನ್ಯಜೀವಿ ಸಂಘರ್ಷ ಮತ್ತು ವನ್ಯಜೀವಿ ಅಪರಾಧ' ಕುರಿತ ಕಾರ್ಯಾಗಾರ ಜರುಗಿತು.

ಅರಣ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ವನ್ಯಜೀವಿಗಳಾದ ಆನೆ, ಹುಲಿ, ಚಿರತೆ, ನವಿಲು, ರಣಹದ್ದು, ನಾಗರಹಾವು, ಇತರೆ ಹಾವುಗಳು ಸೇರಿದಂತೆ ಸಸ್ಯಹಾರಿ ಹಾಗೂ ಮಾಂಸಹಾರಿ ಪ್ರಾಣಿಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಒಂದಕ್ಕೊಂದು ಅವಲಂಬಿಸಿರುತ್ತವೆ. ಈ ಪ್ರಾಣಿ–ಪಕ್ಷಿ ಸಂಕುಲ ಸಂರಕ್ಷಿಸಿದರೆ, ವನ್ಯಜೀವಿ ಸಂರಕ್ಷಣೆ ಸಾಧ್ಯ. ಈ ನಿಟ್ಟಿನಲ್ಲಿ ಪ್ರಾಣಿಗಳ ಬೇಟೆ, ವನ್ಯಜೀವಿಗಳಿಗೆ ವಿಷ ಪ್ರಾಶನ, ಬೇಲಿಗೆ ವಿದ್ಯುತ್ ಸಂಪರ್ಕ ನೀಡಿ ಪ್ರಾಣಿಗಳ ಹತ್ಯೆ ಮಾಡುವುದು, ಅರಣ್ಯ ಪ್ರದೇಶಕ್ಕೆ ಬೆಂಕಿ ಹಚ್ಚುವುದೂ ಸೇರಿದಂತೆ ವಿವಿಧ ಬಗೆಯ ಅರಣ್ಯ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ವನ್ಯಜೀವಿಗಳ ಅಂಗಾಂಗ ಮಾರಾಟದ ಜಾಲವು ಜನರನ್ನು ದಿಕ್ಕು ತಪ್ಪಿಸುತ್ತದೆ. ಆ ಕಾರಣದಿಂದಲೇ ಪ್ರಾಣಿಗಳ ಬೇಟೆ ಪ್ರಕರಣಗಳು ವರದಿಯಾಗುತ್ತಿವೆ. ಪ್ರಾಣಿಗಳ ಬೇಟೆ ಕಡಿವಾಣಕ್ಕೆ ಜನರ ಸಹಕಾರವೂ ಮುಖ್ಯ. ಬೇಟೆಗಾರರ ಸುಳಿವು, ಬೇಟೆ ಮಾಡಲು ನಡೆಸಿರುವ ಸಂಚಿನ ಮಾಹಿತಿ ಸಿಕ್ಕರೆ ಅದನ್ನು ಗೌಪ್ಯವಾಗಿಡದೆ ಅರಣ್ಯ ಇಲಾಖೆಗೆ ನೀಡಬೇಕು. ಆ ಮೂಲಕ ವನ್ಯಸಂಪತ್ತಿನ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಪ್ರಾಣಿ ರಕ್ಷಕ ಹಾಗೂ ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ ಸದಸ್ಯ ಎ.ಎಸ್. ಪ್ರದೀಪ್ ವಿದ್ಯಾರ್ಥಿಗಳೊಂದಿಗೆ ಸಂವಾದದೊಂದಿಗೆ ವನ್ಯಜೀವಿ ಸಂರಕ್ಷಣೆಯ ಮಹತ್ವ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಕೆ.ಎಸ್. ಸುರೇಶ್, ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ.ಎನ್. ವಾಣಿಶ್ರೀ ಮತ್ತು ಅಧ್ಯಾಪಕ ಸಂಯೋಜಕಿ ಎಂ.ತೇಜಸ್ವಿನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ

ಮೈಸೂರು, ಅ.19–ಸುತ್ತೂರು ಶ್ರೀ ಕ್ಷೇತ್ರದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ ಮತ್ತು ಶ್ರೀ ವೀರಭದ್ರೇಶ್ವರ ದೇವಸ್ಥಾನಗಳಲ್ಲಿ ಅ.22ರಿಂದ ನ.20ರವರೆಗೆ ಪ್ರತಿದಿನ ಬೆಳಗ್ಗೆ ಮಹಾರುದ್ರಾಭಿಷೇಕ, ಸಹಸ್ರನಾಮ ಹಾಗೂ ಅಷ್ಟೋತ್ತರ ಬಿಲ್ವಾರ್ಚನೆ ಮತ್ತು ಮಹಾಮಂಗಳಾರತಿ ಹಾಗೂ ಪ್ರತಿ ಸೋಮವಾರ ಸಂಜೆ ದೀಪೋತ್ಸವ ಏರ್ಪಡಿಸಲಾಗಿದೆ.

ಭಕ್ತಾದಿಗಳು ಹಾಗೂ ಸಾರ್ವಜನಿಕರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀಗುರುಕೃಪೆಗೆ ಪಾತ್ರರಾಗಬೇಕಾಗಿ ಕೋರಿದೆ. ಸೇವಾರ್ಥ ಸಲ್ಲಿಸಲು ಅಪೇಕ್ಷಿಸುವ ಭಕ್ತಾದಿಗಳು ಸುತ್ತೂರು ಶ್ರೀಕ್ಷೇತ್ರದಲ್ಲಿ ಅಥವಾ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯಾಲಯದಲ್ಲಿ ನೇರವಾಗಿ ಅಥವಾ (ಮಾಹಿತಿ ಕೇಂದ್ರ) 8896964242, 08221–232223, 0821–2548212 ದೂರವಾಣಿಗಳ ಮೂಲಕ ಸಂಪರ್ಕಿಸಬಹುದಾಗಿದೆ.

ಧಾರ್ಮಿಕ, ಸಾಮಾಜಿಕ ಪ್ರವಚನ

ಮೈಸೂರು, ಅ.19 – ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ವತಿಯಿಂದ ಶಾಕಾಂಬರಿ ಧಾರ್ಮಿಕ ಕೇಂದ್ರದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಅ.22ರಿಂದ ಪ್ರತಿದಿನ ಸಂಜೆ 6ರಿಂದ 7ರವರೆಗೆ ಧಾರ್ಮಿಕ ಮುಖಂಡ, ಸಂಸ್ಕಾರ ತೇಜ ಡಾ.ಬಿ.ಆರ್. ನಟರಾಜ್ ಜೋಯಿಸ್ ಅವರಿಂದ ಧಾರ್ಮಿಕ, ಸಾಮಾಜಿಕ ಪ್ರವಚನ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8088799540, 8861998817 ಸಂಪರ್ಕಿಸಬಹುದು.

WANTED ACCOUNTS EXECUTIVE

COMMERCE GRADUATE MALE CANDIDATE

below 30 years with minimum 2 years experience in **Billing / Accounts Department** knowledge of M.S. Office & Tally ERP is essential.

Candidates having above qualification may email their resumes along with a recent passport sized photograph to :

finance@starofmysore.com

or WhatsApp : 96068 10101

ಐದನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮಾನ್ ಎನ್. ಮರಿಯ್ಯಪ್ಪನವರು

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಲೀಲಾವತಿ, ತಾಯಿ ನಿಂಗಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಯರಗನಗಳ್ಳಿ ಗ್ರಾಮ.

ದಾಖಲೆಗಳು ಕಳೆದಿದೆ

ನಾನು ಶ್ರೀಮತಿ ಸುಜಾತಾ. ಆರ್ W/o ಶ್ರೀ ಶೇಖರ್. ವಿ ಸುಮಾರು 42 ವರ್ಷ ವಯಸ್ಸಿನವರು, ಮನೆ ನಂ. 119, 3 ನೇ ಕ್ರಾಸ್, ಹಳೆಯ ಪೊಲೀಸ್ ಠಾಣೆ, ಮೇಟಗಳ್ಳಿ, ಮೈಸೂರು ನಗರದಲ್ಲಿ ವಾಸಿಸುತ್ತಿದ್ದೇನೆ.

ಸ್ಥಿರ ಸ್ವತ್ತಿನ 2 ಮೂಲ ದಾಖಲೆಗಳು ಶುದ್ಧ ಕ್ರಯ ಪತ್ರಗಳನ್ನು ನಾನು ಕಳೆದುಕೊಂಡಿರುವ ಬಗ್ಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುತ್ತಿದ್ದೇನೆ. 1) ದಾಖಲೆ ಸಂಖ್ಯೆ: MYE-1-04336-2020-21, CD ಸಂಖ್ಯೆ–MYED541, ದಿ: 21–09–2020.

2) ದಾಖಲೆ ಸಂಖ್ಯೆ: MYN-1-12008-2008-09, CD ಸಂಖ್ಯೆ–MYND188, ದಿ: 11–12–2008. ದಿ: 20–06–2025 ರಂದು ಬೆಳಿಗ್ಗೆ 12–00 ರಿಂದ ಮಧ್ಯಾಹ್ನ 1–30ರ ಸುಮಾರಿಗೆ ನಾನು ಮೈಸೂರಿನ ಮೇಟಗಳ್ಳಿ ಯಲ್ಲಿ ಪತ್ರಗಳನ್ನು ಕಳೆದುಕೊಂಡಿರುತ್ತೇನೆ.

ನಾನು ಪೊಲೀಸ್ ಠಾಣೆಗೆ ವರದಿ ಸಲ್ಲಿಸಿದ್ದೇನೆ, ವರದಿ ಸಂಖ್ಯೆ: 1701839/2025 ದಿನಾಂಕ: 14–07–2025. ಯಾರಿಗಾದರೂ ಮೇಲೆ ತಿಳಿಸಿರುವ ದಾಖಲೆಗಳು ಸಿಕ್ಕಿದರೆ, ದಯವಿಟ್ಟು ನನ್ನ ಮೊಬೈಲ್ ಸಂಖ್ಯೆ – 9880151035 ಗೆ ಕರೆಮಾಡಿ ಅಥವಾ ಮೇಲಿನ ನಿವಾಸ ವಿಳಾಸಕ್ಕೆ ಸಂಪರ್ಕಿಸಿ.

ಸಹಿ/– ಸುಜಾತಾ. ಆರ್

14ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಮಾದು ರವರು
ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರು

ಇಂದಿಗೆ 14 ವರ್ಷ ಕಳೆದರೂ ನಿಮ್ಮ ದಾರಿಯಲ್ಲೇ ಇರುವ ಪತ್ನಿ ನಾಗಮ್ಮ, ಮಾಜಿ ಉಪಾಧ್ಯಕ್ಷರು, ರಾಮು(ಪುರಸಭೆ) ಲಕ್ಷ್ಮಣ, ಕುಟುಂಬ ವರ್ಗ, ಹೊಸ ತಿರುಮಕೂಡಲು.

NOT GETTING YOUR

STAR OF MYSORE & ಮೈಸೂರು ಮಿತ್ರ

Call: 98452-96447 99003-82840

ಮೈಸೂರು ಮಿತ್ರ 46


ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಪಾಕಶಾಲ® ಶುಚಿ-ರುಚಿ ಸಸ್ಯಾಹಾರಿ ಅನುಭವಕ್ಕಾಗಿ...

35 Branches across South India!



ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

ಶ್ರೀ ಹರ್ಷ ರಸ್ತೆ, ವುಡ್‌ಲ್ಯಾಂಡ್ಸ್ ಥಿಯೇಟರ್ ಹತ್ತಿರ, ಮೈಸೂರು

Sri Harsha Road, Near Woodlands Theatre, Mysore – 570001.

DEEPAVALI FESTIVAL OFFER

ಯುವರಾಜ YUVARAJA HOME APPLIANCES

N.R. Mohalla Mysore Mob : 94487 53227

NEW GST PRICE SALE

Instant Cash Back Offers Upto 50,000/-*

BAJAJ FINSERV 0% Interest EMI

ATTRACTIVE GIFTS FOR SELECTED MODELS

Upto 47% OFF*



- LG 75" Nano LED — EMI* Rs. 1999/- Balance upto 36 Month EMI 3 Year warranty*
- Samsung 65" LED — EMI* Rs. 2990/- Balance upto 36 Month EMI 3 Year warranty*
- Sony 55" LED — EMI* Rs. 2995/- Balance upto 36 Month EMI 3 Year warranty*
- Haier 65" LED — EMI* Rs. 1994/- Balance upto 36 Month EMI 3 Year warranty*
- LG Refrigerator SBS — FREE Mini Refrigerator — EMI* Rs. 2999/-
- SAMSUNG Refrigerator EMI* Rs. 1490/-
- SAMSUNG Washing Machine EMI* Rs. 990/-
- Haier Refrigerator EMI* Rs. 1994/-
- Haier Washing Machine EMI* Rs. 1494/-
- IFB Washing Machine EMI* Rs. 1922/-
- Haier Micro Oven EMI* Rs. 1222/-
- Water Purifier LG EMI* Rs. 888/-
- Mixer EMI* Rs. 830/-
- SAMSUNG S25 Ultra EMI* T&C Apply Rs. 5125/-
- OPPO F31 Pro EMI* Rs. 1499/-

* Terms & Conditions Apply

Sri Adichunchanagiri Shikshana Trust ®

BGS PU COLLEGE

Kuvempunagar, Mysuru

Hearty congratulations to II PUC BOARD TOPPERS - 2025

SANGEETHA S 594 State 6th Rank; HARSHINI K 594 State 6th Rank; SAMANVITHA M 591 State 9th Rank; K N SARVESH KUMAR 591 State 9th Rank; BRIJESH C K 590 State 10th Rank; R CHINMAY GOWDA 590 State 10th Rank; HARINY N 589; MANASVI M DEVARAHATTI 589; SUDHANVA RAO C A 589; JAHNAVI S NAG 588; DHANYA M 588; MANASI S 587; SPOORTHY S 587; LIKHITHA C K 585; SPOORTHI K R 584

JEE - MAINS ACHIEVERS - 2025

R CHINMAYGOWDA 99.91% ile; S G OMKARESH 99.45% ile; AADITYA A KULKARNI 98.88% ile; K N SARVESH KUMAR 98.12% ile; SUDHANVA RAO C A 98.10% ile; NIMISH PRAJWAL B 98.08% ile; BRIJESH C K 97.79% ile; H SHARATH 97.39% ile; RUTHVIK A B 96.52% ile; MANASVI M DEVARAHATTI 96.26% ile; MEETH MEHTA 95.97% ile

NEET ACHIEVERS - 2025

MANASVI M DEVARAHATTI 99.81% ile; BRIJESH C K 99.25% ile; SAMANVITHA M 98.99% ile; SHARANYA S KUMAR 98.68% ile; SOUNDARYA M P 95.69% ile; VAISHNAVI M P 95.29% ile

K-CET ACHIEVERS - 2025

R CHINMAYGOWDA Rank-31; SUDHANVA RAO C A Rank-109; MANASVI M DEVARAHATTI Rank-660; H SHARATH Rank-927

Distinction Holders 370 — Centum Holders 68

Registration Open for I PUC
Science, Commerce & Arts 2026-27

Integrated Coaching for CET / JEE / NEET — Admissions purely based on Merit

Hostel facilities for Boys & Girls

Transportation facilities available from Gaddige, Gungralchatra, KRS Srirangapatna, Bannur, T. Narasipura, Nanjanagudu and Mysuru Entire City

FREE Admissions - 96% and Above in 10th standard (First 100 Students only)
50% Fee concessions - 94% to 96% in 10th standard (First 100 Students only)

Dr. R.S.Narasegowda M.Sc, Ph.D., Administrative Officer

6361581460 / 98453 76685 / 77603 89498 / 9964644060

2ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಶಾರದಮ್ಮ
ನಿವೃತ್ತ, ನ್ಯಾಯಾಂಗ ಇಲಾಖೆ

ಸದಾ ನಿಮ್ಮ ನೆನಪಿನಲ್ಲಿರುವ

ಪತಿ– ಎಸ್. ಮಾದಯ್ಯ (ನಿವೃತ್ತ, HC), ಮಕ್ಕಳು, ಮೊಮ್ಮಕ್ಕಳು, ಹಾಗೂ ಕುಟುಂಬವರ್ಗದವರು

ಒಂದನೇ ಹಂತ, ರಾಜೀವ್‌ನಗರ, ಮೈಸೂರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮಾನ್ ಜಯರಾಮ್ ರವರು

ಇವರು ದಿನಾಂಕ 10–10–2025ನೇ ಶುಕ್ರವಾರ ದೈವಾಧೀನ–ರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ : 20.10.2025 ಸೋಮವಾರದಂದು ಬೆಳಿಗ್ಗೆ : 11–00 ಗಂಟೆಗೆ ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು: ಶ್ರೀಮತಿ ದಿವ್ಯ ಮತ್ತು ಶ್ರೀ ಮೋಹನ್ ಕುಮಾರ್, ಶ್ರೀಮತಿ ಪವಿತ್ರ, ಶ್ರೀಮತಿ ಪಲ್ಲವಿ, ಅಳಿಯಂದಿರು, ಮೊಮ್ಮಕ್ಕಳು ಕುಟುಂಬದವರು ಹಾಗೂ ಬಂಧು–ಮಿತ್ರರು

ಭೋಜನ : ಮಧ್ಯಾಹ್ನ 12.30ಗಂಟೆಗೆ,
ಸ್ಥಳ: ಶ್ರೀ ಮಹದೇಶ್ವರ ಸಮುದಾಯ ಭವನ, ಕುಂಬಾರಕೊಪ್ಪಲು

RBBN Sri Subramanyeshwara & Sri Prasanna Anjaneya Swamy Temple Trust

Reg. No: MYN-4-00275-2025-26

Public Clarification / Objection

We, the lawful descendants of Late N. Krishnaswamy Rao (Son of Late Rao Bahadur Bakshi Narasappa), hereby state that the notice published on 10/10/2025 in Mysuru Mithra by another trust regarding Sri Subramanyeshwara & Sri Prasanna Anjaneya Swamy Temples. Sy. Nos. 123 & 122, Kalyani Maidana, Devaraja Mohalla, Mysuru-570001, is misleading and exclusionary. These temples and their lands belong to the deities, and their management and administration are shared among all lawful descendants of the family of Late Rao Bahadur Bakshi Narasappa. Any self-declared trust or claim of sole heirship through a family tree or Gazette publication has no legal validity. An official Nadakacheri family tree affirms our rightful lineage and role in temple management. Any person, organization, or authority engaging with the opposing trust in matters relating to management, property, or finances shall be deemed to have acted entirely at their own risk and responsibility. We hereby object to and refute all false claims made in the said notice and reserve all legal rights to protect our hereditary, administrative, and ancestral interests.

Sd/- Trustees,

RBBN Sri Subramanyeshwara & Sri Prasanna Anjaneya Swamy Temple Trust
Address: Sy. Nos. 123 & 122, Kalyani Maidana (Makkaji Chowka), Devaraja Mohalla, Mysuru-570001, Email: RBBNtempletrust@gmail.com